ಅಧ್ಯಕ್ಷರು.—ತಾವು ಹೇಳಿದ್ದನ್ನೆರ್ಲಾ ಬರೆದುಕೊಂಡಿದ್ದಾರೆ.

Sri S. GOPALA GOWDA.—I feel that unless the relevant clauses with regard to the Cut Motions, namely Rules 165, 166, 167 and 168, are properly amended, I think the procedure that is being adopted now with regard to the Cut Motions is not proper; I think it is not in order. I would like to have a ruling on this question, that too a considered ruling, which may improve your predecessor's ruling and also give some scope in future for the provisions to function in an effective manner because, Mr. Speaker, Sir, you are well aware that the cut motions have their own historical background, and that is the only way a Government can be impeached or a Government can be censured and the policy matters discussed. With regard to the Demands, I would very much like you to consider again unless if you have already come to some conclusions saying that the procedure we have adopted hitherto is in order and proper. And that should be the way in which the cut motions should be dealt with. Then, I think we will doing great injustice so far as the cut motions are concerned. Am I clear?

Mr. SPEAKER.—Now, the Hon. Member Sri Gopal Gowda has explained himself in explicit, unequivocal, clear terms what he wanted to convey. Understanding all that, as he has mentioned, I am yet unable to agree with what he has stated. He wants me to study further even if I have come to a conclusion. I do not think, it will be necessary. But if it is the desire of this particular Member or any other Member, I am prepared to study further and give a condsidered ruling.

Sri C. J. MUCKANNAPPA.—After some time.....

Mr. SPEAKER.—What is the matter with some of the Members today?

And I do so not only for that reason which is good enough but for some other reason that I am carrying the other work of the House. Therefore, I now call upon the Hon'ble Minister for Education to begin his reply.

BUDGET ESTIMATES FOR 1966-67—DEMANDS FOR GRANTS

DEMAND NOS. 17, 37 AND 49

†ಶ್ರೀ ಎಸ್. ಆರ್. ಕಂಠಿ.— ನನ್ಮಾನ್ಯ ಅಧ್ಯಕ್ಷರೇ, 2 ದಿವಸಗಳ ಕಾಲ ಈ ಸಭೆಯ ಸನ್ಮಾನ್ಯ ಸದಸ್ಯರುಗಳು ಶಿಕ್ಷಣ ಶಾಖೆಯ ಬೇಡಿಕೆಯ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ಅತ್ಯಂತ ಋಣಿಯಾಗಿದ್ದೇನೆ. ಹಲವರು ಒಳ್ಳೆಯ ರೀತಿಯಿಂದ ಸೂಚನೆಗಳನ್ನು ಹೇಳಿದ್ದಾರೆ. ಕೆಲವರು ಸ್ವಲ್ಪ ಕೋಪವನ್ನು ವಿಶ್ರಮಾಡಿ ಹೇಳಿದ್ದಾರೆ. ಕೆಲವರು ಶಿಕ್ಷಣ ಮಂತ್ರಿಗೆ ಅಭಿಮಾನವಾಗುವ ರೀತಿ ಮಾತನಾಡಿದ್ದಾರೆ. ಅದು ಯಾವುದೂ ಕೋಪ ನನಗೆ ಇಲ್ಲ. 4 ವರ್ಷಗಳ ಕಾಲವಾಯಿತು ನಾನು ಶಿಕ್ಷಣ ಶಾಖೆಯನ್ನು ವಹಿಸಿಕೊಂಡು. ಈ 4 ವರ್ಷದಲ್ಲಿ ಯಾವುದನ್ನು ಮಾಡಬೇಕ, ಯಾವುದನ್ನು ಬಿಡಬೇಕು ಎಂಬುದರಬಗ್ಗೆ ನನಗೆ ನಿಖರವಾಗಿ ಹೇಳಲಾಗಿದೆ. ಆ ರೀತಿ 4 ವರ್ಷದ ಕಾಲದಲ್ಲಿ ಯೋಗ್ಯವಾದುದನ್ನೇ ಮಾಡಿದ್ದೇನೆ. ಮೈಸೂರು ಸರ್ಕಾರಕ್ಕೆ ಯೋಗ್ಯವಾದುದನ್ನೆ ಮಾಡಿ ಎಂದು ಹೇಳಿ ಮಾಡಿಸಿದ್ದೇನೆ ಎಂದು ಭಾವಿಸಿಕೊಂಡಿದ್ದೇನೆ.

(ಶ್ರೀ ಎಸ್. ಆರ್. ಕಂಠಿ)

ಸದಸ್ಯರು ಗಲಾಟೆ ಮಾಡಿದರೆ ಉತ್ತರ ಕೊಡುವುದಕ್ಕೆ ನನಗೆ ಸಾಧ್ಯವಾಗುವುದಿಲ್ಲ. ಆಗಲೇ ಯಾವ ಯಾವ ಪಾಯಿಂಟ್ ಮೇಲೆ ಸದಸ್ಯರು ಮಾತನಾಡಿದ್ದಾರೆ, ಎಂಬುದನ್ನು ನೋಡಿದರೆ, ಸುಮಾರು 25 ಅಂಶಗಳ ಮೇಲೆ ಮಾತುಗಳನ್ನು ಆಡಿದ್ದಾರೆ ಎಂದು ಹೇಳಬೇಕಾಗಿದೆ. ಅದರಲ್ಲಿ ಮುಖ್ಯವಾಗಿ ಒಂದು ಪಾಯಿಂಟ್ ಎಂದರೆ ನಮ್ಮ ರಾಜ್ಯದಲ್ಲಿ ಶಿಕ್ಷಣ ಕೆಳಮಟ್ಟಕ್ಕೆ ಹೋಗುತ್ತಿದೆ, ಎರಡನೆಯದಾಗಿ ಶಿಕ್ಷಣದಲ್ಲಿ ಬಹಳ ಗೊಂದಲಮಯವಾದ ಸ್ಥಿತಿಯಾಗಿದೆ, ಮೂರನೆಯದಾಗಿ ಶಿಕ್ಷಣದಲ್ಲಿ ಒಳ್ಳೆಯ ರೀತಿಯಿಂದ ಸಂಸ್ಥೆಗಳನ್ನು ಮಾಡುತ್ತಿದ್ದಾರೆ, ನಾಲ್ಕನೆಯದು ಶಿಕ್ಷಣದಲ್ಲಿ ರಾಜಕೀಯ ಸೇರಿಕೊಂಡಿದೆ ಎಂದು ಹೇಳಿದ್ದಾರೆ. ಐದನೆಯದು ಜಾತೀಯತೆ ಸೇರಿಕೊಂಡಿದೆ ಎಂದು ಹೇಳಿದ್ದಾರೆ. ಆಮೇಲೆ ಉಳಿದುವುಗಳನ್ನು ಒಂದೊಂದಾಗಿ ವಿವರಣೆ ಮಾಡುತ್ತೇನೆ. ಇವೆಲ್ಲವುಗಳ ವಿಷಯವಾಗಿ ಕೊಂಚ ಕಾಲ ಆದಮೇಲೆ ನಾನು ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ನಾನು ಮೊಟ್ಟಮೊದಲು ಈ ರಾಜ್ಯದಲ್ಲಿ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಯಾವ ರೀತಿ ಕೆಲಸ ನಡೆದಿದೆ ಎನ್ನುವ ಬಗ್ಗೆ ಕೆಲವು ಅಂಕಿ ಸಂಖ್ಯೆಗಳನ್ನು ಕೊಡುತ್ತಿದ್ದೇನೆ. ಮೂರನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುತ್ತಲೇ ಎಂದರೆ, 1961-62ರಲ್ಲಿ ನಮ್ಮ ಶಿಕ್ಷಣ ಶಾಖೆ ಬಡ್ಜೆಟ್ ಅಂದಾಜು ಪತ್ರಿಕೆಯಲ್ಲಿ 14 ಕೋಟಿ 40 ಲಕ್ಷ 22 ಸಾವಿರ ರೂಪಾಯಿ ಅಂದರೆ 1,440.22 ಲಕ್ಷ ಇತ್ತು. ಈಗ ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿಯುತ್ತಲೇ ಅದು 24 ಕೋಟಿ 71.03 ಸಾವಿರ ಅಂದರೆ 2,471.03 ಲಕ್ಷಕ್ಕೆ ಏರಿದೆ. 10 ಕೋಟಿ ರೂಪಾಯಿಗಳ ಮೇಲ್ಪಟ್ಟು ಮೂರನೇ ಪಂಚವಾರ್ಷಿಕ ಯೋಜನೆಯ 5 ವರ್ಷದಲ್ಲಿ ಏರಿದೆ ಅಂದರೆ ವರ್ಷಕ್ಕೆ 2 ಕೋಟಿ ರೂಪಾಯಿ ಎಂದು ಹೇಳಬಹುದು. ಎಷ್ಟೋ ಕೆಲಸಗಳಿಗೆ ಕಮಿಟೆಡ್ ಎಕ್ಸ್‌ಪೆಂಡಿಚರ್ ಆಗಿರುವುದರಿಂದ ಮುಂದಿನ ವರ್ಷದಲ್ಲಿ ಎಂದರೆ 1966-67ಕ್ಕೆ 2971.50 ಲಕ್ಷ ಆಗಿದೆ. Sir, in 1961-62, the figure was at Rs. 1440.22 lakhs. This year, it has gone up to Rs. 2971.50 lakhs. Sir, the rise has been enormous, and the expenditure has been enormous. From Rs. 24 crores it has gone up to Rs. 29 crores. That means whatever was done in the Third Five year plan has been committed expenditure and it is to the extent of Rs. 5 crores. 5 ಕೋಟಿ ಮಟ್ಟಿಗೆ ಕಮಿಟೆಡ್ ಎಕ್ಸ್‌ಪೆಂಡಿಚರ್ ಆಗಿದೆ. ಕೆಲವರು ನಾನಾ ತರಹ ಅರ್ಥ ಮಾಡಿಕೊಂಡು ಹೇಳಿದ್ದಾರೆ. ನಾನು ಸ್ಟ್ಯಾಟಿಸ್ಟಿಕ್ಸ್ ಪ್ರಕಾರ ಹೇಳುತ್ತಾ ಹೋಗುತ್ತಿದ್ದೇನೆ. ರಾಜ್ಯದಲ್ಲಿ ಪ್ರೀ-ಪ್ರೈಮರಿ ಸ್ಕೂಲ್ಸ್ 1960-61ರಲ್ಲಿ 20 ಮಾತ್ರ ಇತ್ತು. 1965-66ಕ್ಕೆ 465 ಆಗಿದೆ. ಜೂನಿಯರ್ ಪ್ರೈಮರಿ ಸ್ಕೂಲ್ 21,102 ಇತ್ತು, ಈಗ 21,547 ಆಗಿದೆ. ಸೀನಿಯರ್ ಪ್ರೈಮರಿ ಸ್ಕೂಲ್ 1960-61ನೇ ಸಾಲಿಗೆ 5,948 ಇದ್ದರೆ ಇವೊತ್ತು 9,565 ಆಗಿದೆ ಅಂದರೆ ಒಟ್ಟು ಜೂನಿಯರ್ ಪ್ರೈಮರಿ ಮತ್ತು ಸೀನಿಯರ್ ಪ್ರೈಮರಿ ಎರಡೂ ಸೇರಿಸಿದರೆ, 2,050 ಇದ್ದದ್ದು 31,112 ಆಗಿದೆ. Then number of secondary schools in the state in the year 1960-61 was 778 High Schools, Sir, in the year 1965-66 it has gone up to 1,491. Sir, you can say it is 100 per cent rise from 778 to 1,491. 100ಕ್ಕೆ 100 ಹೆಚ್ಚಾಗಿದೆ ಎಂದು ಹೇಳಬಹುದು.

ಕಾಲೇಜಿನಲ್ಲೂ ಕೂಡ ಇದೇ ಪ್ರಕಾರ ಹೆಚ್ಚಾಗಿದೆ. 1960-61ರಲ್ಲಿ 97 ಕಾಲೇಜುಗಳು ಇದ್ದುವು. ಇವೊತ್ತು 1965-66ಕ್ಕೆ ಎಂದರೆ 5 ವರ್ಷದ ಕಾಲದಲ್ಲಿ 61 ಕಾಲೇಜುಗಳು ಜಾಸ್ತಿ ಆಗಿವೆ. ಹುಡುಗರ ಸಂಖ್ಯೆಯೂ ಕೂಡ 1960-61ರಲ್ಲಿ 44,000 ಇದ್ದುದು ಇವೊತ್ತು 1965-66ಕ್ಕೆ 84,000 ಆಯಿತು. ಬರುವ ವರ್ಷ ಇನ್ನೂ ಬಹಳ ಜಾಸ್ತಿ ಆಗುತ್ತದೆ. As it is 84,000 ವಿದ್ಯಾರ್ಥಿಗಳು ಇದ್ದಾರೆ.

ಟ್ರೈನಿಂಗ್ ಆಗಿ ಬಂದಂಥ ಉಪಾಧ್ಯಾಯರುಗಳ ವಿಚಾರ. 1960-61ರಲ್ಲಿ 37,666 ಶಿಕ್ಷಕರು ಟ್ರೈನಿಂಗ್ ಆಗಿದ್ದಾರೆ. ಟ್ರೈನಿಂಗ್ ಆಗದೇ ಇದ್ದವರು 34,903 ಎಂದರೆ ಒಟ್ಟು 77,569ರಲ್ಲಿ 37,666 ಟ್ರೈನಿಂಗ್ ಆಗಿದ್ದಾರೆ ಎಂದರೆ 51·9 ಪರ್ಸೆಂಟು ಆಯಿತು. 1966-67ರಲ್ಲಿ ಪ್ರೈಮರಿ ಸ್ಕೂಲು ಉಪಾಧ್ಯಾಯರುಗಳ ಸಂಖ್ಯೆ 90,181, ಒಟ್ಟು ಪ್ರೈಮರಿ ಸ್ಕೂಲ್ಸ್ ಮತ್ತು ವಿದ್ಯಾರ್ಥಿಗಳ ಸಂಖ್ಯೆ, 1960-61ರಲ್ಲಿ 25,31,000 ಇದ್ದುದು 1965-66ಕ್ಕೆ 36,10,000 ವಿದ್ಯಾರ್ಥಿಗಳು

ಆಗಿದ್ದಾರೆ. 90,171 ಶಿಕ್ಷಕರ ಪೈಕಿ 56,250 ಶಿಕ್ಷಕರು ಟ್ರೈನಿಂಗ್ ಆಗಿದ್ದಾರೆ. ಟ್ರೈನಿಂಗ್ ಆಗದೇ ಇರುವವರು 33,931 ಎಂದರೆ 62·4 ಪರ್ಸೆಂಟು ಟ್ರೈನಿಂಗ್ ಆಗಿದ್ದಾರೆ. ಮೂರನೆ ಪಂಚವಾರ್ಷಿಕ ಯೋಜನೆ ಮೊದಲು 51·9 ಇದ್ದಂಥ ಟ್ರೈನಿಂಗ್ ಆದ ಟೀಚರ್ಸ್ 62·4ಕ್ಕೆ ಹೋಗಿದ್ದಾರೆ. ಅದು ಪ್ರೈಮರಿ ಸ್ಕೂಲ್ ವಿಚಾರ.

ಇನ್ನು ಸೆಕೆಂಡರಿ ಸ್ಕೂಲ್ಸ್‌ನಲ್ಲಿ ಈಗ ಇರುವ ನಂಬ್ಯೆ 17,252. ಅದರಲ್ಲಿ 9,738 ಟ್ರೈನಿಂಗ್ ಆಗಿದ್ದಾರೆ. 7,514 ಅನ್‌ಟ್ರೈನ್ಡ್ ಇದ್ದಾರೆ, ಎಂದರೆ 56·9 ಪರ್ಸೆಂಟು ಟ್ರೈನಿಂಗ್ ಆಗದೆ ಇದ್ದವರು ಇದ್ದಾರೆ. ಹೈಸ್ಕೂಲ್ಸ್ ಬಹಳ ಜಾಸ್ತಿ ಆಗಿರುವುದರಿಂದ ಟ್ರೈನಿಂಗ್ ಆಗದೇ ಇರುವವರು ಬಹು ಜನಗಳು ಉಳಿದಿದ್ದಾರೆ. ಅದಕ್ಕೋಸ್ಕರವಾಗಿ ನರ್ಕಾರದವರು ಹೆಚ್ಚಿನ ಟ್ರೈನಿಂಗ್ ಕಾಲೇಜು ಬಿ. ಇಡಿ. ಕಾಲೇಜುಗಳನ್ನು ಪ್ರಾರಂಭ ಮಾಡುತ್ತಾ ಇದ್ದೇವೆ. ಹೆಚ್ಚಿನ ನಂಬ್ಯೆಯಲ್ಲಿ ಜನಗಳನ್ನು ಅಲ್ಲಿಗೆ ಕಳುಹಿಸಿ ಟ್ರೈನಿಂಗ್ ಕೊಡಬೇಕೆಂದು ಮಾಡಿದ್ದೇವೆ. ಇನ್ನು ನಿಜವಾಗಿ ಹೇಳಬೇಕಾದರೆ 1960-61ರಲ್ಲಿ ಟ್ರೈನಿಂಗ್ ಆದವರು 64·6 ಇದ್ದುದು ಈಗ 62·9 ಆಗಿದೆ. ಏತಕ್ಕೆ ಕಡಿಮೆಯಾಗಿದೆ ಎಂದರೆ ಬಹಳ ನಂಬ್ಯೆಯಲ್ಲಿ ಹೈಸ್ಕೂಲ್ ತೆರದಿದ್ದರಿಂದ ಟ್ರೇನ್ಡ್ ಶಿಕ್ಷಕರು ಬಹಳ ನಂಬ್ಯೆಯಲ್ಲಿ ಕಡಿಮೆ ಆಗಿದ್ದಾರೆ. ಎಲ್ಲರೂ ಅನ್‌ಟ್ರೇನ್ಡ್ ಇರುವುದರಿಂದ ಹಾಗೆ ಆಗಿದೆ, ಅದಕ್ಕೋಸ್ಕರ ಎರಡು ಟ್ರೈನಿಂಗ್ ಕಾಲೇಜುಗಳನ್ನು ಜಾಸ್ತಿ ಮಾಡಿದೆ. ಹಾಲಿ ಟ್ರೈನಿಂಗ್ ಕಾಲೇಜುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಕಳುಹಿಸಬೇಕೆಂದು ನಿರ್ಧಾರ ಮಾಡಿ ಆ ಪ್ರಕಾರ ಕಳುಹಿಸುತ್ತಾ ಇದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಮಂತ್ರಿಗಳವರು ಹೇಗೆ ಎಂದರೆ,.....

Sri S. R. KANTHI.—I am not yielding.

ಶ್ರೀ ಎಸ್. ಗೋಪಾಲಗೌಡ.—ಅವರು ಸಚಿವಯನ್ನು ಮಿಸ್‌ಲೀಡ್ ಮಾಡುತ್ತಾ ಇದ್ದಾರೆ.

Mr. SPEAKER.—It is open to the Member to note. Sri Gopala Gowda thinks that the Minister is misleading. If he does not yield, what can be done ?

ಶ್ರೀ ಎಸ್. ಗೋಪಾಲಗೌಡ.—ಒಂದೇ ಮುಖವಾದ ಅಂಕಿ ಸಂಖ್ಯೆಗಳನ್ನು ಕೊಡುತ್ತಾ ಇದ್ದಾರೆ.

Mr. SPEAKER.—If he does not yield, the only course open to the Member is to make a note of it and when he resumes his seat, I will give him a chance.

ಶ್ರೀ ಎಸ್. ಗೋಪಾಲಗೌಡ.—ನಮಗೆ ಛಾನ್ಸ್ ಇಲ್ಲದಿದ್ದರೆ ಹೊರಗಡೆ ಭಾಷಣ ಮಾಡಬೇಕು.

Sri S. R. KANTHI.—I have not finished my reply. Where is the question of misleading ?

Mr. SPEAKER.—Those members who feel that the reply is defective, wrong, misleading and inaccurate may make a note of it and seek my permission and I will give them opportunity to raise it. Otherwise they may appeal to the Minister and if he yields I have no objection. To simply say that the Minister is misleading and that one has got a right to inflict his views when the Hon'ble Minister is speaking, is something not warranted by the rules.

1-30 P.M.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ನಮಗೆ ಛಾನ್ಸೇ ಇಲ್ಲವೇ ! ನಾವು ಹೊರಗಡೆ ಭಾಷಣ ಮಾಡಬೇಕೆ ?

Sri S. R. KANTHI.—I have not said anything apart from the facts.

ಶ್ರೀ ಎಸ್. ಗೋಪಾಲಗೌಡ.—ಕೊನೆಯ ಪಕ್ಷ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲೆಲ್ಲ ಹಣ ರ್ಯಾಪ್ಸ್ ಆಗಿದೆ, ಎನ್ನುವುದನ್ನು.....

Sri S. R. KANTHI.—I am not going to yield, Sir.

(Sri Gopala Gowda was persisting in his interruption)

Mr. SPEAKER.—I may tell all the Members and Sri Gopala Gowda in particular. That if they do not have patience to wait and listen, I cannot go on changing rules. Did I permit anybody to disturb when you were speaking? Let the Hon'ble Minister complete his reply. If he says anything wrong, so much the better for the Members.

Sri S. R. KANTHI.—I am quoting from statistics, Sir. If the Hon'ble Members have any doubt, they are free to ask for clarification afterwards.

I am now going to regionwise distribution of institutions :

Colleges for general education.

1960-61	Ex-Mysore area	27
B. K. area	(Bombay Karnatak area)	12
H. K. area	(Hyderabad Karnatak area)	5
	(Coorg and S. K. Area)	8
		52

Sri S. GOPALA GOWDA.—What is this B. K., H. K., Sir? ಮಾನ್ಯ ಮಂತ್ರಿಗಳು ಅದನ್ನು ಸರಿಯಾದ ರೀತಿಯಲ್ಲಿ ಹೇಳದೆ, ಬಿ.ಕೆ. ಹೆಚ್.ಕೆ. ಎಂದು ಹೇಳುವುದು ಸರಿಯಲ್ಲ, ಸ್ವಾಮಿ.

Sri S. R. KANTHI.—I object to my Hon'ble friend saying that. It was argued that there was discrimination against the old Mysore area. That is why I am giving all these figures. I have got to quote figures in support of what I have got to say. If there is anything wrong, it is for the Chair to call me to order, if I am going out of the way.

(*Sri Gopala Gowda continued to interrupt*)

Mr. SPEAKER.—I am addressing the House. I appeal to every Member to conform to the Rules. This is the last request I am making. I am saying that because I find one particular Member despite my repeated requests. He says that the Minister is saying something which he is not understanding. What can I do? Members may choose to understand what they can. If not, pray God, to bless the Members with the power of understanding. Let him not disturb the Hon'ble Minister.

ಶ್ರೀ ಎಸ್. ಗೋಪಾಲಗೌಡ.—ನಾನು ಅವರ ಭಾಷಣಕ್ಕೆ ಅಡ್ಡಿಪಡಿಸುವುದಿಲ್ಲ, ಚರ್ಚೆಯಲ್ಲಿ ವಿಳಂಬ ಮಾಡುವುದು ನನ್ನ ಉದ್ದೇಶವಲ್ಲ. ಅವರು ತಮ್ಮದೇ ಆದ ಒಂದು ಬಿ. ಕೆ. ಹೆಚ್. ಕೆ. ಎಂಬ ಪದಗಳನ್ನು ಉಪಯೋಗಿಸಿದರು. ಅದರ ಮೇರೆ ಮಾತ್ರ ನಾನು ಪ್ರಸ್ತಾಪಿಸಿದ್ದು.

Mr. SPEAKER.—Let him not do it hereafter. If what the Hon'ble Minister says is wrong and he cannot understand, it is better for him. He can vote against the grant. He has the remedy in his hands.

ಶ್ರೀ ಎಸ್. ಆರ್, ಕಂಠಿ.—ನಾನು ಈಗ ಏರಿಯಮ್ಸೈನ್ ಫಿಗರ್ಸ್ ಇಲ್ಲಿ ಓದುತ್ತೇನೆ.

	Ex-Mysore	Bombay Karnatak	Hyderabad Karnatak	Coorg and S.K.
1961-62 ...	27	...	...	...
1965-66 ...	41	22	17	12
Colleges for professional education :—				
	26	9	3	8
Polytechnics :—				
1961-62 ...	14	2	1	1
1965-66 ...	16	6	3	2

In addition there is one women's polytechnic in Bangalore, and one in Hubli.

Secondary Schools

	Ex-Mysore	Bombay Karnatak	Hyderabad	Coorg S.K.
1960-61 ...	363	340	74	101
1965-66 ...	803	371	147	162
Primary Schools				
1960-61 ...	15,505	6996	2297	1730
1965-66 ...	18,649	7139	3456	1868
T. T. I. (Primary Teachers Training Institutions):—				
1960-61 ...	33	17	7	9
1965-66 ...	88	20	8	8
Expenditure :				
Primary Education—				
1960-61 ...	441.56	199.38	80.43	49.31

Total lakhs—770.68

In 1965-66, the allotment....

ಶ್ರೀ ಎಸ್. ಗೋಪಾಲಗೌಡ.—ವಿದ್ಯಾನಚಿವರಲ್ಲಿ ಒಂದು ವಿನಂತಿ. ಈ ತರಹ.....

Sri S. R. KANTHI.—I am not yielding.

ಶ್ರೀ ಎಸ್. ಗೋಪಾಲಗೌಡ.—ಏನು ತಪ್ಪು, ಸ್ವಾಮಿ ?

Sri S. R. KANTHI.—I am not yielding. I request the Chair to save me from this Hon'ble Member.

ಶ್ರೀ ಎಸ್. ಗೋಪಾಲಗೌಡ.—ಈ ತರಹ ಅಂಕ ಸಂಖ್ಯೆಗಳನ್ನು ಕೊಡುವುದರಿಂದ ಏನೂ ಉಪಯೋಗವಾಗುವುದಿಲ್ಲ.

Mr. SPEAKER.—Order, order. I will give Sri Gopala Gowda a chance if he simply allows this to go on. If the Hon'ble Minister does not yield, what am I to do ?

ಶ್ರೀ ಎಸ್. ಗೋಪಾಲಗೌಡ.—ಇದು ರಾಜ್ಯವನ್ನು ಒಡೆದು ಛಿದ್ರ ಮಾಡುವುದಕ್ಕೆ ಅವಕಾಶ ವಾಗುತ್ತದೆ. ಈ ತರಹ ಅಂಕಿ ಸಂಖ್ಯೆಗಳನ್ನು ಕೊಡಬಾರದು. ಅಂಕಿಗಳನ್ನು ಕೊಡುವುದನ್ನು ನಾನು ಪ್ರತಿಭಟಿಸುತ್ತೇನೆ. ಹಳ್ಳೀ ಮ್ಯೆಪೂರು ಏರಿಯಾ ಎಂದರೆ.....

Mr. SPEAKER.—Order, order.

ಶ್ರೀ ಎಸ್. ಗೋಪಾಲಗೌಡ.—ಎಷ್ಟು ಕೋಟಿ ಜನ ಏನು.....

Mr. SPEAKER.—Order, order.

ಶ್ರೀ ಎಸ್. ಗೋಪಾಲಗೌಡ.—ಈ ರೀತಿ ರಾಜ್ಯವನ್ನು ಪಾಲುಮಾಡಿ ಅಂಕಿ ಅಂಶ್ಯಗಳನ್ನು ಕೊಡುವುದರಿಂದ .....

Mr. SPEAKER.—Order, order. I want to know whether it is the desire of the House that I should go on permitting this ? I have requested four times this particular member whom the House knows, to kindly make a note of all the views that he differs from and that I would give him a chance. By this time, this Demand should have been put to the vote and decided. I do not understand why time and again, the Hon'ble Member is getting up and saying this and that when the Hon'ble Minister says that he is not yielding. In spite of this, the Hon'ble Member goes on talking. The only instruction that I can give to the Reporter of the House is never to take down anything that the Hon'ble Member said— when the Member occupying the floor does not yield, the Reporter need not take down anything said by the other Member. I request the Hon'ble Member Gopala Gowda not to disturb. After the reply is over, if he has anything to say and if he asks my permission, I will consider and give him a chance. But if the Hon'ble Member goes on in open flagrant violation of the rules, I cannot go on permitting it time and again endlessly.

Sri S. R. KANTHI.—In 1965-66, the allotment was 1,233.50 lakhs for Primary Education, out of which we allotted Rs. 734.98 lakhs for ex-Mysore area, 285.56 for Bombay Karnatak area, 138.24 lakhs for Hyderabad Karnatak area and 74.72 lakhs for Coorg and South Kanara area. The total is 1,233.50 lakhs, the break up of which is like the one I have said above.

Even in Secondary Education, in the year 1960-61, we spent 238.28 lakhs, out of which we spent 111.60 lakhs for ex-Mysore area, 73.51 lakhs in Bombay Karnatak area, 22.57 lakhs in Hyderabad Karnatak area, and 30.94 lakhs in South Kanara and Coorg. In 1965-66, we have allotted 364.40 lakhs, out of which we have allotted 195.29 lakhs for ex-Mysore area, 93.16 lakhs for Bombay Karnatak area, 36.13 lakhs for Hyderabad Karnatak area and 39.82 lakhs for Coorg and South Kanara. For Arts and Science Colleges in 1960-61, there was an expenditure of 93.94 lakhs, out of which we have spent 48.58 lakhs for ex-Mysore area, 21.68 lakhs in Bombay Karnatak area, 9.3 lakhs in Hyderabad Karnatak area and 14.65 lakhs in Coorg and South Kanara. In 1964-65, we have spent 146.25 lakhs, out of which

we have spent 74.15 lakhs for ex-Mysore area, 39.14 for Bombay Karnatak area, 12.36 for Hyderabad Karnatak and 20.60 lakhs for Coorg and South Kanara.

For Polytechnics, in the year 1960-61, we spent 22.15 lakhs, out of which, we spent 17.15 lakhs for ex-Mysore, 2.50 lakhs in Bombay Karnatak, 1.25 lakhs in Hyderabad Karnatak and 1.25 lakhs in Coorg and South Kanara. In 1964-65, we have spent 36.04 lakhs, out of which 21.36 lakhs were spent in ex-Mysore, 8.01 lakhs in Bombay Karnatak, 4 lakhs in Hyderabad Karnatak and 2.67 lakhs in Coorg and South Kanara.

For T. T. I. in the year 1960-61 we have spent 29·32 lakhs, out of which we spent Rs. 14.66 lakhs for ex-Mysore, 7.55 lakhs for Bombay Karnatak, 3.11 lakhs for Hyderabad Karnatak and 4 lakhs for Coorg and South Kanara. In 1964-65, we have spent 34.98 lakhs, out of which, we spent 20 lakhs for ex-Mysore, 8.32 lakhs for Bombay Karnatak, 3.33 lakhs for Hyderabad Karnatak and 3.33 lakhs for Coorg and South Kanara.

I will now give you the number of students from first to the seventh standards from 1960-61. In 1960-61, there was a student strength of 25.31 lakhs. In 1961-62, it was 29.56 lakhs, In 1962-63, it was 32.26 lakhs and in 1963-64, it was 32.85 lakhs. In 1964-65, the number of standards were reduced from 8 to 7. From the figure of 1962-63, which was 32.26 lakhs, in 1962-63 it went up to only 32.85 lakhs, because one standard was cut off. In 1964-65, it was 35.31 lakhs. In 1965-66, this year, if stood at 36.10 lakhs, *i.e.*, the number of students who are in the primary schools.

The number of students in secondary schools are. In 1960-61, the strength was 1.69 lakhs. In 1961-62, it was 1·90 lakhs. In 1962-63, it was 2.16 lakhs. In 1963-64, it was 3.52 lakhs. In 1964-65, it was 4·03 lakhs and in 1965-66, it was 4.53 lakhs. Sir, today, 4½ lakhs students are in the secondary schools.

Sir, a point was raised by one of the Hon'ble Members that in some areas, unnecessarily so many high schools have come up at the cost of the other areas. I should like to give the break up of figures in this respect. In old Mysore area, we have got 93 Government high schools. In Dharwar 19, in Gulbarga 55 and in South Kanara 11 including Fishery schools.

Sir, that many high schools have no Hindi teachers, was a point raised by one of the Hon'ble Members, I may inform the House that sixty percent of the high schools are covered by Hindi teachers. We employed 240 teachers in 64-65. In 65-66, *i.e.* this year, we have sanctioned the creation of 123 additional posts of Hindi teachers for high schools. Today sixty percent of the schools are covered by Hindi teachers.

In 1960-61 we had 778 high schools. This year we have allotted to 700 high schools which were existing in the year 1960-61, a sum of Rs. 11.98 lakhs.

(SRI S. R. KANTHI)

ಸರ್ಕಾರದವರು ಸಾಧಾರಣವಾಗಿ ಈ ವರ್ಷ ಇದ್ದಂತಹುಗಳನ್ನು ಬಿಟ್ಟು 78 ಹೈಸ್ಕೂಲು ಗಳನ್ನು ತೆರೆದಿದ್ದಾರೆ. ಎರ್ಲಾ ಹೈಸ್ಕೂಲುಗಳಿಗೆ ಪಿ. ಸಿ. ಎಂ. ಗೆ 15 ಸಾವಿರ ಪಿ. ಸಿ. ಬಿ. ಗೆ 8 ಸಾವಿರ, ಜನರರ್ ಸ್ಯೆನ್ಸಿಗೆ 4 ಸಾವಿರ—ಈ ಪ್ರಕಾರ ಮ್ಯಾಚಿಂಗ್ ಗ್ರಾಂಟ್ ಕೊಟ್ಟಿದ್ದೇವೆ. ಈ ಪ್ರಕಾರ ಹಣವನ್ನು ಹಂಚಿರುವಾಗ ರ್ಯಾಬೊರೇಟರಿಗೆ ಸರ್ಕಾರದವರು ಸಾಕಷ್ಟು ಸಹಾಯ ಮಾಡಲಿಲ್ಲವೆಂದು ಸದಸ್ಯರು ಹೇಳುವುದು ಸಾಧುವಾದುದಲ್ಲ. ಗ್ರಾಂಟನ್ನು ಕಾಲಕಾಲಕ್ಕೆ ಕೊಡುತ್ತಿದ್ದೇವೆ. ಖಾಸಗೀ ಶಾಲೆಗಳಿಗೆ ಹಣವನ್ನು ಆ ರೀತಿ ಕೊಡುವುದಕ್ಕಾಗುವುದಿಲ್ಲ.

ಇನ್ನು ಶ್ರೀಮಾನ್ ಮಾದಪ್ಪಗೌಡರು ಹಾಸ್ಟಲು ವಿಚಾರವಾಗಿ ಕೆಲವು ಮಾತುಗಳನ್ನು ಹೇಳಿ ದರು. ಶ್ರೀಮಾನ್ ಮಾದಪ್ಪಗೌಡರು ಯಾವ ಪುಸ್ತಕವನ್ನು ತಮ್ಮ ಭಾಷಣದಲ್ಲಿ ರೆಫರ್ ಮಾಡಿ ಹೇಳಿದರೋ ಆ ಪುಸ್ತಕವನ್ನು ಸಂಪೂರ್ಣವಾಗಿ ಓದಲಿಲ್ಲವೆಂದು ಅರ್ಥವಾಗುತ್ತದೆ. ಜನರರ್ ಹಾಸ್ಟಲುಗಳು ಒಟ್ಟು 135 ಇವೆ. ಬೆಂಗಳೂರು ಡಿವಿಜನ್ನಿನಲ್ಲಿ 4 ಮಾತ್ರ ಇವೆ. ಹೈದರಾಬಾದ್ ಕರ್ಣಾಟಕದಲ್ಲಿ ಇಲ್ಲವೇ ಇಲ್ಲ. ಬೊಂಬಾಯಿ ಕರ್ಣಾಟಕದೊಳಗೆ 4 ಹಾಸ್ಟಲುಗಳನ್ನು ಬಿಟ್ಟರೆ ಇನ್ನೆಲ್ಲೂ ಹಾಸ್ಟಲುಗಳಿಲ್ಲ. ಮುಂದಿನ ವರ್ಷಕ್ಕೆ ಈ ಬಾಬಿಗೆ 11 ಲಕ್ಷ 50 ಸಾವಿರ ರೂಪಾಯಿ ಗಳನ್ನು ಓದಗಿಸಿರಾಗಿದೆ. ಅದರೊಳಗೆ 57 ಸಾವಿರ ರೂಪಾಯಿಗಳನ್ನು ಬೆಳಗಾಂ ಡಿವಿಜನ್ನಿಗೆ ಕೊಟ್ಟಿದೆ. ಉಳಿದ ಎರ್ಲಾ ಮೊಬಲಗನ್ನು ಅಂದರೆ 10 ಲಕ್ಷ 93 ಸಾವಿರ ರೂಪಾಯಿಗಳನ್ನು ಹಳೆಯ ಮೈಸೂರಿನಲ್ಲಿರುವ ಹಾಸ್ಟಲುಗಳಿಗೆ ಕೊಡುವ ಹಾಗೆ ವ್ಯವಸ್ಥೆ ಮಾಡಿದ್ದೇವೆ. ಹೈದರಾಬಾದ್ ಹಾಗೂ ಬೊಂಬಾಯಿ ಕರ್ಣಾಟಕದೊಳಗೆ ಇರುವ ಹಾಸ್ಟಲುಗಳು ಕೇವಲ 4 ಜನರರ್ ಹಾಸ್ಟರ್ ಬಿಲ್ಡಿಂಗಿಗಾಗಿ 1966-67ನೇ ಸಾಲಿನಲ್ಲಿ 5 ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ಮಾಡರಾಗಿದೆ ಆ ರೀತಿ ಹಣವನ್ನು ಬಡ್ಜೆಟ್ಟಿನಲ್ಲಿ ಓದಗಿಸಿದ್ದೇವೆ. ಇಡೀ ನಂಸ್ಥಾನಕ್ಕೆ ಈ ಬಾಬಿನಲ್ಲಿ ಮುಂದಿನ ವರ್ಷ ಪ್ಲಾನ್ ಮತ್ತು ಎಸ್ಟಿಮೇಟುಗಳನ್ನು ನುಮಾರು 44, 71, 647 ರೂಪಾಯಿಗಳಷ್ಟು ಖರ್ಚು ಆಗುವುದಕ್ಕೆ ಒಪ್ಪಿಕೊಂಡಿದ್ದೇವೆ. ಹಳೆಯ ಮೈಸೂರಿನಲ್ಲಿ 27, 70, 790 ರೂಪಾಯಿ ಗಳಷ್ಟು ಪ್ಲಾನ್ ಮತ್ತು ಅಂದಾಜುಗಳು ಆಗಿವೆ. ಮುಂಬೈ ಕರ್ಣಾಟಕಕ್ಕೆ 18 ಲಕ್ಷ ರೂಪಾಯಿ ಗಳ ಪ್ಲಾನು ಮತ್ತು ಅಂದಾಜು, ಹೈದರಾಬಾದ್ ಕರ್ಣಾಟಕಕ್ಕೆ 89,700 ರೂಪಾಯಿಗಳ ಪ್ಲಾನ್ ಮತ್ತು ಅಂದಾಜುಗಳು, ಇದೆರ್ಲಾ ಸೇರಿದರೆ ಯಾವ ಭಾಗಕ್ಕೂ ಯಾವ ರೀತಿಯಿಂದಲೂ ಅನ್ಯಾಯ ವಾಗಿಲ್ಲವೆಂದು ಸದಸ್ಯರು ತಿಳಿಯಬಹುದು. ಹಳೆಯ ಮೈಸೂರಿಗೆ 25 ಲಕ್ಷ 70 ಸಾವಿರ ರೂಪಾಯಿಗಳ ಪ್ಲಾನ್ ಮತ್ತು ಅಂದಾಜುಗಳನ್ನು ಸರ್ಕಾರದವರು ಒಪ್ಪಿಕೊಂಡಿರುವುದರಿಂದ ಹಳೆಯ ಮೈಸೂರಿಗೆ ಅನ್ಯಾಯ ವಾಗಿದೆ ಎಂಬುದು ಏನೂ ಕಾಣುವುದಿಲ್ಲವೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಮಾನ್ಯ ಸದಸ್ಯರುಗಳು ಪಟ್ಟಿಯನ್ನು ವಿಶದವಾಗಿ ನೋಡಿದ್ದರೆ ಚೆನ್ನಾಗಿತ್ತು. ಈ ವರ್ಷ ಜನರರ್ ಹಾಸ್ಟರ್ ಬಿಲ್ಡಿಂಗಿಗಾಗಿ 5 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಇಟ್ಟು ಕೊಂಡಿದ್ದೆವು. ಆದರೆ ಆ ಮೊಬಲಿಗಿನ ಪೈಕಿ 1,75,406-84 ರೂಪಾಯಿಗಳನ್ನು ಐದು ಜಿಲ್ಲೆಗಳಿಗೆ ಕೊಟ್ಟಿದ್ದೇವೆ. ಅದನ್ನು ಐದು ಜಿಲ್ಲೆಯ ಡಿ. ಸಿ. ಯವರಿಗೆ ಕೊಡರಾಗಿದೆ. ಆ ಪ್ರಕಾರ, ಮಂಡ್ಯಾಕ್ಕೆ 67,177 ರೂಪಾಯಿಗಳು, ಚಿತ್ರದುರ್ಗಕ್ಕೆ 27,307 ರೂಪಾಯಿಗಳು, ಶಿವಮೊಗ್ಗಾಕ್ಕೆ 6,063 ರೂಪಾಯಿಗಳು ಚಿಕ್ಕಮಗಳೂರಿಗೆ 759 ರೂಪಾಯಿಗಳು, ಮತ್ತು ಹಾಸನಕ್ಕೆ 3,372 ರೂಪಾಯಿಗಳು ಚಿಲ್ಲರೆ ಬರುತ್ತದೆ. ಈ ಹಣವನ್ನು ಐದು ಜಿಲ್ಲೆಗಳಿಗೆ ಬಿಲ್ಡಿಂಗ್ ಗ್ರಾಂಟ್ ಎಂಬುದಾಗಿ ಮಂಜೂರು ಮಾಡಿದ್ದೇವೆ, ಅದರಲ್ಲಿ 3,24,593 ರೂಪಾಯಿಗಳು ಉಳಿದಿದೆ. ಅದು ರಾವ್ಸ್ ಆಗತಕ್ಕ ಪ್ರಸಂಗ ಬಂದಿದೆ. ಬೆಂಗಳೂರಿನ ಡಿ. ಸಿ. ಈ ಹಣ ಬೇಕಿಲ್ಲವೆಂದು ಹೇಳಿದ್ದಾರೆ. ಹಾಸ್ಟಲುಗಳ ಬಗ್ಗೆ ಸರ್ಕಾರದವರು ಓದಗಿಸಿರತಕ್ಕ ಮೊಬಲಗು ಬಿಲ್ಡಿಂಗ್ ಗ್ರಾಂಟು ಬೇಕಿಲ್ಲ ವೆಂದು. ಬೆಂಗಳೂರು, ತುಮಕೂರು, ಕೂರ್ಗ್, ನಾತ್ ಕೆನರಾ, ಬೆಳಗಾಂ, ನೌತ್ ಕೆನರಾ, ರಾಯಚೂರ್, ಧಾರವಾಡ—ಈ ಪ್ರದೇಶಗಳ ಡಿ. ಸಿ. ಯವರು ಹೇಳಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ತುಮಕೂರಿನವರು ಅದನ್ನು ಕೇಳಿದ್ದಾರೆ.

ಶ್ರೀ ಎಸ್. ಆರ್. ಕಂಠಿ.—ಆ ರೀತಿ ಡಿ. ಸಿ. ಅವರು ನಮಗೆ ಬರೆಯಬೇಕು. ಅವರೂ ಇನ್ನು 3 ಲಕ್ಷ 74 ಸಾವಿರ ಚಿಲ್ಲರೆ ಆ ಬಾಬಿನಲ್ಲಿ ಉಳಿದಿದೆ. ಇದುವರೆಗೆ ಬೆಂಗಳೂರಿನ ಡಿ. ಸಿ. ಯವರು ಏನೂ ಉತ್ತರ ಕೊಟ್ಟಿಲ್ಲ. ವಿಜಾಪುರ ಮತ್ತು ಬದರೆ ಜಿಲ್ಲೆಗಳ ಡಿ. ಸಿ. ಯವರೂ ಸಹ ಏನೂ ಉತ್ತರ ಕೊಟ್ಟಿಲ್ಲ.

ಶ್ರೀ ಎಸ್. ಗೋವಾಲಗೌಡ.—ಈ ಅಧಿಕಾರವನ್ನು ಡಿ. ಸಿ. ಯವರಿಗೆ ಸರ್ಕಾರದವರು ಯಾವಾಗ ಕೊಟ್ಟರು ?

ಶ್ರೀ ಎಸ್. ಆರ್. ಕಂಠಿ.—ರೂರ್ಸ್ ಇದೆ. ಆ ಪ್ರಕಾರ ಕೊಟ್ಟಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾರ್ಯಾರು ಈ ಗ್ರಾಂಟು ಬೇಡವೆಂದು ಹೇಳಿದ್ದಾರೆ. ಅದನ್ನು ಹೇಳಿ.

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆಗೆ ಉತ್ತರವನ್ನು ನಾನು ಮೊದಲೇ ಹೇಳಿದ್ದೇನೆ. ಈಗ ಹಾನ್ವಲುಗಳಿಗಾಗಿ ಹಣವನ್ನು ಯಾರಾದರೂ ಕೇಳುವುದಾದರೆ ಆ ಬಗ್ಗೆ ಒಂದಂಥ ಅರ್ಜಿಗಳನ್ನು ಸರ್ಕಾರದ ಕಡೆಯಿಂದ ಡಿ.ಸಿ.ಯವರಿಗೆ ಕಳುಹಿಸುತ್ತೇವೆ. ಅವರು ಅವನ್ನು ವಿಚಾರ ಮಾಡಿ ಅವರಿಗೆ ಗ್ರಾಂಟು ಬೇಕೇ ಬೇಡವೇ ಎಂಬುದಾಗಿ ನಮಗೆ ವರದಿಯನ್ನು ಅವರು ಕಳುಹಿಸುತ್ತಾರೆ.

ಇನ್ನು ಮಾನ್ಯ ಸದಸ್ಯರು quality of education ಈಗ ಸರಿಯಾಗಿ ಇಲ್ಲವೆಂದು ಬೇರೆ ಹೇಳಿದ್ದಾರೆ. ಅದು ಅಸತ್ಯವೆಂದು ನಾನು ಹೇಳುವುದಿಲ್ಲ. ಅದು ನಿಜವಾಗಿದೆ ಅದರಲ್ಲಿ ನಾನು ಒಂದು ಮಾತನ್ನು ಹೇಳಬೇಕೆಂದರೆ, ಮೈಸೂರಿನಲ್ಲಿ ಮಾತ್ರ ಕ್ವಾಲಿಟಿ ಕಡಿಮೆಯಾಗಿದೆ, ಎಂದಲ್ಲ ಎಲ್ಲ ಕಡೆಯಲ್ಲೂ ಇಂಥ ಪರಿಣಾಮವಾಗಿದೆಯೆಂದು ಹೇಳುತ್ತಾರೆ. In all States the complaint is, it is going down. ಎಲ್ಲಾ ರಾಜ್ಯಗಳಲ್ಲೂ ಈ ದೂರು ಇದೆ. ಅದಕ್ಕೆ ಕಾರಣವೇನೆಂಬುದನ್ನು ಮಾನ್ಯ ಸದಸ್ಯರೇ ಉತ್ತರ ಹೇಳಿದರು. ಆದರೆ ಇಲ್ಲಿ ಅದಷ್ಟೂ ವಿಶಾಲವಾದ ರೀತಿಯಲ್ಲಿ ವಿದ್ಯಾಭ್ಯಾಸವನ್ನು ಬೆಳೆಸುತ್ತಿದ್ದೇವೆ. ಅಂಥಾದ್ದರಲ್ಲೂ ಕೆಲವರು ಕಡಿಮೆಯಾಗಿದೆ ಎಂದು ಹೇಳುತ್ತಾರೆ. ಒಟ್ಟಿನಲ್ಲಿ ವಿಶಾಲವಾದ ರೀತಿಯಲ್ಲಿ ಶಿಕ್ಷಣ ಬೆಳೆಯುತ್ತಿದೆಯೆಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಇದನ್ನು ಕಡಿಮೆ ಮಾಡಬಹುದು ಎಂದು ಹೇಳತಕ್ಕ ಧೈರ್ಯ ಯಾರಿಗಾದರೂ ಇದ್ದರೆ ಅದು ನಿರರ್ಥಕವಾದುದು. ಅದು ಆಗುವುದಿಲ್ಲ. ಶಿಕ್ಷಣವನ್ನು ಕಡ್ಡಾಯವಾಗಿ, ಸಾರ್ವತ್ರಿಕವಾಗಿ ಮಾಡುವಾಗ ಶಾಲೆಗಳು ಜಾಸ್ತಿಯಾಗಬೇಕು. ಹೈಸ್ಕೂಲುಗಳು, ಕಾಲೇಜುಗಳಲ್ಲಿ ಹುಡುಗರ ಸಂಖ್ಯೆಯೂ ಜಾಸ್ತಿಯಾಗ ಬೇಕು. ಅವರಿಗೆ ಎಲ್ಲ ಅನುಕೂಲಗಳನ್ನು ಮಾಡಿಕೊಡಬೇಕು. ನಮ್ಮ ಭಾರತ ದೇಶದಲ್ಲಿ ನಮ್ಮ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಶಿಕ್ಷಣಕ್ಕೆ ಬಹಳ ಮಹತ್ವ ಕೊಡಬೇಕು, ಪ್ರತಿಯೊಬ್ಬರಿಗೂ ಶಿಕ್ಷಣ ಕೊಡಬೇಕು ಎಂದು ಹೇಳುವ ಕಾಲಕ್ಕೆ ಪ್ರಾಥಮಿಕ ಶಾಲೆಗಳನ್ನು, ಹೈಸ್ಕೂಲುಗಳನ್ನು ಮತ್ತು ಕಾಲೇಜುಗಳನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ. ಇದು ಅಧಿಕಾರದಲ್ಲಿ ಈಗ ಅಸಂಭವವಾದ ಮಾತು. ಆದರೆ ಹಿಂದಿನ ಕಾಲದಿಂದ ಬಂದಿರತಕ್ಕ ಶಿಕ್ಷಣವೇನಿದೆ ಅದು ಬೇಡ. ನ್ಯೂಬದಲಾವಣೆ ಮಾಡೋಣ, ಬೇರೆ ಬೇರೆ ರೀತಿಯಿಂದ ಶಿಕ್ಷಣ ಕೊಡೋಣವೆಂಬ ಅಭಿಪ್ರಾಯ ಸರ್ಕಾರಕ್ಕೆ ಬಂದು ಅದು ಈಗಿನ ಪ್ರಜಾಪ್ರಭುತ್ವದಲ್ಲಿ ಅದರಲ್ಲಿಯೂ ಸ್ವತಂತ್ರ ಭಾರತದಲ್ಲಿ ಅವಶ್ಯಕವೆಂದು ಮಾನ್ಯ ಸದಸ್ಯರು ಹೇಳಿದರೆ ಅದಕ್ಕೆ ನನ್ನ ಸಂಪೂರ್ಣ ಸಮ್ಮತವಿದೆ. ಶಿಕ್ಷಣದ ಬಗ್ಗೆ ಸರ್ಕಾರದವರು ನಮ್ಮನ ಹೀಗೆರ್ಲಾ ಎಕ್ಸ್‌ಪೆರಿಮೆಂಟ್ ಮಾಡುತ್ತಾರೆಂದು ಸದಸ್ಯರು ಹೇಳಿದರೆ, ಅದರಿಂದೇನೂ ಪ್ರಯೋಜನವಾಗದಾರದು ಕಡೆಗೆ ಸರ್ಕಾರ ಎಷ್ಟರಮಟ್ಟಿಗೆ ಶಿಕ್ಷಣ ಕ್ಷೇತ್ರದಲ್ಲಿ ಎಕ್ಸ್‌ಪೆರಿಮೆಂಟುಗಳನ್ನು ಮಾಡುತ್ತಿದ್ದಾರೆ ಎನ್ನುವ ಮಾತಿಗೆ ಸದಸ್ಯರು ಕೆಲವರು ತಿರಸ್ಕಾರ ಮಾಡಿದ್ದು ಅಷ್ಟು ಉಚಿತವಾದುದಲ್ಲವೆಂದು ನಾನು ಹೇಳುತ್ತೇನೆ. ಅದು ಸಾಧುವಾದುದೂ ಅಲ್ಲ. ನಮಗೆ ಬ್ರಿಟಿಷರ ಕಾಲದಿಂದ ಬಂದಂಥ ಶಿಕ್ಷಣದಲ್ಲಿ ಬದಲಾವಣೆ ಮಾಡುವುದು ಅತ್ಯಂತ ಅವಶ್ಯಕವೆಂದು ಈಗ ತೀವ್ರವಾಗಿ ಬೇಕಾದಷ್ಟು ಎಕ್ಸ್‌ಪೆರಿಮೆಂಟುಗಳನ್ನು ಮಾಡುತ್ತಿದ್ದೇವೆ...

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರ್ಯಾಬೊರೇಟರಿಗಳಲ್ಲರಬೇಕಾದ ಎಕ್ವಿಪ್‌ಮೆಂಟುಗಳು ಇಲ್ಲದೆ ನುಮ್ಮನೆ ಹೈಸ್ಕೂಲುಗಳನ್ನು ಪ್ರಾರಂಭ ಮಾಡಿದರೆ ಏನು ಪ್ರಯೋಜನ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಬೆಂಗಳೂರುಸಿಟಿಯಲ್ಲಿರತಕ್ಕ ಹೈಸ್ಕೂಲುಗಳನ್ನು ನೋಡಬೇಕು. ಅಲ್ಲೆರ್ಲಾ ಓಡಾಡಿ ನೋಡಲಿ. ಇಲ್ಲದಿದ್ದರೆ ನಾನೇ ಅವರಿಗೆ ತೋರಿಸಬೇಕೆಂದರೆ ಕರೆದುಕೊಂಡು ಹೋಗಿ ಅಲ್ಲೆರ್ಲಾ ತೋರಿಸುತ್ತೇನೆ. ಈ ಬಗ್ಗೆ ಮಾನ್ಯ ಸದಸ್ಯರಿಗೆ ಏನು ತಿಳುವಳಿಕೆಯಾಗಿದೆಯೋ ಅದು ತಪ್ಪು ತಿಳುವಳಿಕೆ ಎಂದು ನಾನು ಈಗ ವಾದಿಸಬೇಕಾಗಿದೆ.

2-00 P.M.

ಜಾಗ ಇಲ್ಲ, ಅಥವಾ ಉಪಕರಣ ಇಲ್ಲ, ಅದು ಇಲ್ಲ, ಇದು ಇಲ್ಲ ಎಂದು ಹೇಳಿದರೆ ಅದು ನತ್ಯವಾದ ಮಾತಲ್ಲ. ಸ್ವಲ್ಪ ಕಡಿಮೆ ಇದೆ ಎಂದರೆ ಅದನ್ನು ಒಪ್ಪಿಕೊಳ್ಳುತ್ತೇನೆ. ರ್ಯಾಬೋರೇಟರಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕೆಂದು ಈಗ ಹೊಸ ಹೈಸ್ಕೂಲುಗಳಿಗೆ ಸ್ಪೆಷಲ್ ಗ್ರಾಂಟ್ ಕೊಡುತ್ತಿದ್ದೇವೆ. ಇಷ್ಟಾದರೂ ಕೂಡ ಎಲ್ಲಾ ಸರಿಯಾಗಿದೆ ಎಂದು ನಾನು ಹೇಳುವುದಿಲ್ಲ. ಎಲ್ಲವನ್ನೂ ಸರಿಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ನಾನು ಕೆಲವು ಹೊಸ ಹೈಸ್ಕೂಲುಗಳನ್ನು ನೋಡಿದ್ದೇನೆ. ಅವು ಚೆನ್ನಾಗಿ ಕೆಲಸ ಮಾಡುತ್ತಿವೆ. ಆದರೆ ಎಲ್ಲಾ ಹೈಸ್ಕೂಲುಗಳೂ

(ಶ್ರೀ ಎಸ್. ಆರ್. ಕಂಠಿ)

ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ದಯವಿಟ್ಟು ಮಾನ್ಯ ಸದಸ್ಯರು ಆ ರೀತಿ ಹೇಳಬಾರದು.

ಗ್ರಾಮಾಂತರ ಪ್ರದೇಶದಲ್ಲಿರುವ ಹೈಸ್ಕೂಲುಗಳಲ್ಲಿ ಫಲತಾಂಶ ಚೆನ್ನಾಗಿ ಬರುವುದಿಲ್ಲ ಎಂದು ಹೇಳಿದರೆ ನಾನು ಒಪ್ಪುವುದಿಲ್ಲ. ಹಳ್ಳಿಗಳಲ್ಲಿರತಕ್ಕ ಹೈಸ್ಕೂಲುಗಳಲ್ಲಿ ಎಲ್ಲಿ ಫಲತಾಂಶ ಚೆನ್ನಾಗಿ ಬಂದಿದೆ ಎನ್ನುವ ವಿಚಾರವನ್ನು ತಿಳಿದುಕೊಳ್ಳಬೇಕಾದರೆ ಅದಕ್ಕೆ ಸಾಕ್ಷಿ ಬೇಕಾದರೆ ಶ್ರೀ ಸಿದ್ದಯ್ಯ ಕಾಶೀಮಟ್ ಅವರನ್ನ ಕೇಳಿ. ಬೆಳ್ಳ ಹಳ್ಳಿಯಲ್ಲಿ 100ಕ್ಕೆ 97 ಪರ್ಸೆಂಟ್ ಫಲತಾಂಶ ಬಂದಿದೆ. ನೂಳ್ಳಿದಲ್ಲಿ 91 ಪರ್ಸೆಂಟ್ ಫಲತಾಂಶ ಬಂದಿದೆ. ಬಳ್ಳಾರಿಯಲ್ಲಿ 55-56 ಪರ್ಸೆಂಟ್ ಫಲತಾಂಶ ಬಂದಿದೆ.

ನಾನು ಮುಂಬೈ ಕರ್ನಾಟಕದಿಂದ ಬಂದಿದ್ದೇನೆ ಎಂದು ಹೇಳಿ ಬೋಸ್ಟ್ ಮಾಡುತ್ತೇನೆ ಎಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬಾರದು. ಬೆಳಗಾಮ್ ಜಿಲ್ಲೆಯಲ್ಲಿರುವ ಒಂದು ಹಳ್ಳಿಯಲ್ಲಿ ಹೈಸ್ಕೂರ್ ರಿಸರ್ಟ್ 80 ಪರ್ಸೆಂಟ್ ಬಂದಿದೆ. ಇನ್ನೂ ಕೆಲವು ಕಡೆ ಹಳ್ಳಿಗಳಲ್ಲಿ 91 ಪರ್ಸೆಂಟ್ ರಿಸರ್ಟ್ ಬಂದಿದೆ. ಈ ದೃಷ್ಟಿಯಿಂದ ಹಳ್ಳಿಗಳಲ್ಲಿರತಕ್ಕ ಹೈಸ್ಕೂಲುಗಳಲ್ಲಿ ರಿಸರ್ಟ್ ಸರಿಯಾಗಿ ಬರುವುದಿಲ್ಲ, ಚೆನ್ನಾಗಿ ಬರುವುದಿಲ್ಲ ಎಂದು ಹೇಳತಕ್ಕದ್ದು ಸರಿಯಾದ್ದಲ್ಲ. ಮಧ್ಯ ಪ್ರದೇಶ ಸರ್ಕಾರದವರು ಒಂದು ರಿಪೋರ್ಟನ್ನು ಹೊರಡಿಸಿದ್ದಾರೆ. ಅದು ಏನೆಂದರೆ, ಹೈಸ್ಕೂಲುಗಳಲ್ಲಿ ರಿಜರ್ಟ್ ಏತಕ್ಕೆ ಕಡಿಮೆಯಾಗಿದೆ, ಮತ್ತು ವಿದ್ಯಾಭ್ಯಾಸದ ಸ್ಟ್ಯಾಂಡರ್ಡ್ ಏತಕ್ಕೆ ಕಡಿಮೆಯಾಗಿದೆ ಎನ್ನುವುದನ್ನು ಪರಿಶೀಲನೆ ಮಾಡುವುದಕ್ಕೆ ಒಂದು ಸಮಿತಿಯನ್ನ ನೇಮಕ ಮಾಡಿ ಅವರಿಂದ ಒಂದು ವರದಿಯನ್ನ ತರಿಸಿದ್ದಾರೆ. ಅದರಲ್ಲಿ ಮೊದಲನೆಯ ತಪ್ಪು ಶಿಕ್ಷಕರದು ಎಂದು ಹೇಳಿದ್ದಾರೆ. ಎರಡನೆಯ ತಪ್ಪು ತಂದೆತಾಯಿಗಳವರದು ಎಂದು ಹೇಳಿದ್ದಾರೆ. ಮೂರನೆಯ ತಪ್ಪು ಶಾಲೆಗಳದು, ನಾಲ್ಕನೆಯ ತಪ್ಪು ವಾತಾವರಣ ಎಂದು ಹೇಳಿದ್ದಾರೆ. ಇದರಲ್ಲಿ ಸರ್ಕಾರದವರು ಏನೂ ಮಾಡುವುದಕ್ಕಾಗುವುದಿಲ್ಲ.

ಇನ್ನು ಶ್ರೀಮತಿ ನುಬ್ಬಮ್ಮನವರು ಪ್ರೈವೇಟ್ ಹೈಸ್ಕೂಲುಗಳಲ್ಲಿ ಉಪಾಧ್ಯಾಯರಿಗೆ ಸಂಬಳವನ್ನು ಕಡಿಮೆ ಕೊಡುತ್ತಿದ್ದಾರೆ. ಆದ್ದರಿಂದ ಅವುಗಳನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಹೇಳಿದರು. ಪ್ರೈವೇಟ್ ಹೈಸ್ಕೂಲುಗಳಿಗೆ ಗ್ರಾಂಟ್ ಇ ಏಯ್ಡ್ ಕೋಡಿನ ಪ್ರಕಾರ ಉಪಾಧ್ಯಾಯರಿಗೆ ಸಂಬಳ ಕೊಡಲು ಗ್ರಾಂಟನ್ನು ಕೊಟ್ಟಿದೆ ಎಂದು ನಾನು ಅವರಿಗೆ ತಿಳಿಸುತ್ತೇನೆ.

ಇನ್ನು ಹೈಸ್ಕೂಲುಗಳಲ್ಲಿ ಈ ರೀತಿ ಕಡಿಮೆ ಫಲತಾಂಶ ಬರುವುದಕ್ಕೆ ಬರೀ ಶಿಕ್ಷಕರದೇ ತಪ್ಪು ಎಂದು ನಾನು ಹೇಳುವುದಿಲ್ಲ. ಎಲ್ಲರದೂ ತಪ್ಪು ಇದೆ. ಶಿಕ್ಷಕರಲ್ಲಿ ಒಳ್ಳೆಯವರೂ ಇದ್ದಾರೆ. ಕೆಟ್ಟವರೂ ಇದ್ದಾರೆ. ನಾನು ಅನೇಕ ಹೈಸ್ಕೂಲುಗಳನ್ನು ನೋಡಿದ್ದೇನೆ. ಸರ್ಕಾರಿ ಹೈಸ್ಕೂಲುಗಳಲ್ಲಿ 4-5, 5-6 ಶಿಕ್ಷಕರು ಕಡಿಮೆ ಇರುತ್ತಾರೆ. ಮುನಿಸಿಪರ್ ಹೈಸ್ಕೂಲುಗಳನ್ನೂ ನಾನು ನೋಡಿದ್ದೇನೆ. ಅಲ್ಲಿಯೂ 5-6 ಜನ ಶಿಕ್ಷಕರು ಕಡಿಮೆ ಇರುತ್ತಾರೆ. ಇನ್ನು ತಾಲ್ಲೂಕು ಬೋರ್ಡುಗಳ ಹೈಸ್ಕೂಲುಗಳ ಸ್ಥಿತಿಯನ್ನು ದೇವರೇ ಬಲ್ಲ. ಮಾನ್ಯ ಸದಸ್ಯರಾದ ವೀರಭದ್ರಪ್ಪನವರು ಒಂದು ತಾಲ್ಲೂಕು ಬೋರ್ಡ್ ಹೈಸ್ಕೂಲನ್ನು ನಡೆಸುತ್ತಿದ್ದಾರೆ. ಅವರು ಅದನ್ನು ಹೇಗೆ ನಡೆಸುತ್ತಿದ್ದಾರೋ ಗೊತ್ತಿಲ್ಲ. ಹೈಸ್ಕೂಲುಗಳ ಸಂಖ್ಯೆ ಸಾಕಷ್ಟು ಬೆಳೆದಿದೆ. ವಿದ್ಯಾರ್ಥಿಗಳಿಗೆ ಸಾಕಷ್ಟು ಸೌಕರ್ಯವನ್ನು ಒದಗಿಸಬೇಕಾಗುತ್ತದೆ. ಈ ಹೈಸ್ಕೂಲುಗಳನ್ನು ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಸಮರ್ಥರಾದ ಉಪಾಧ್ಯಾಯರನ್ನು ನೇಮಕ ಮಾಡುವುದೂ ಕೆಲವು ಇವೆ. ಶಿಕ್ಷಕರಿಗೆ ಸಾಕಷ್ಟು ಸೂಚನೆಯನ್ನು ಕೊಡುವುದಕ್ಕೆ ಸರ್ಕಾರದವರು ಒಂದು ಕಾನೂನನ್ನು ಅಮಲಿನಲ್ಲಿ ತಂದಿದ್ದಾರೆ. ಪ್ರಾಥಮಿಕ ಶಿಕ್ಷಣ ಸರಿಯಾಗಿ ನಡೆಯಬೇಕು ಅದು ಸರಿಯಾಗಿ ನಡೆಯದೇ ಹೈಸ್ಕೂಲುಗಳಿಗೆ ಮಕ್ಕಳು ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಅಲ್ಲ ಅವರು ತೇರ್ಗಡೆಯಾಗುವುದಿಲ್ಲ. ಪ್ರಾಥಮಿಕ ಶಿಕ್ಷಣ ಮತ್ತು ಮಿಡಲ್‌ಸ್ಕೂರ್ ಶಿಕ್ಷಣ ಎಲ್ಲಕ್ಕೂ ನಾವು ಪ್ರಾಥಮಿಕ ಶಿಕ್ಷಣ ಎಂದು ಕರೆಯಬಹುದು. ಈ ಮಿಡಲ್‌ಸ್ಕೂಲು ಪರೀಕ್ಷೆಯಲ್ಲಿ 100ಕ್ಕೆ 90 ಹುಡುಗರು ಪಾಸ್ ಆಗುತ್ತಾರೆ. 100 ಪರ್ಸೆಂಟೂ ಪಾಸು ಮಾಡುತ್ತಾರೆ. ಆದರೆ 110 ಪರ್ಸೆಂಟ್ ಪಾಸು ಮಾಡುವುದಕ್ಕಾಗಿಲ್ಲ. ಈಗ ಹುಡುಗರಿಗೆ ಏನಾಗಿದೆ ಎಂದರೆ, ಅವರಿಗೆ ಹಿಂದಿ ಬರುವುದಿಲ್ಲ. ಇಂಗ್ಲಿಷ್ ಎ.ಬಿ.ಸಿ.ಡಿ. ಸರಿಯಾಗಿ ಕಲತಿಲ್ಲ. 6ನೇ ಸ್ಟ್ಯಾಂಡರ್ಡಿಗೆ ಮಿಡ್ಲ್ ಸ್ಕೂಲಿಗೆ ಇಂಗ್ಲಿಷ್ ಕಲಯುವುದಕ್ಕೆ ಬರುತ್ತಾರೆ. ಅಲ್ಲ ಉಪಾಧ್ಯಾಯುರು ಯಾರು ಇರುತ್ತಾರೆಂದರೆ ಎಸ್.ಎಸ್.ಎರ್.ಸಿ. ಪಾಸಾಗಿರತಕ್ಕವರು. ಅವರಿಗೇ ಸರಿಯಾಗಿ ಇಂಗ್ಲೀಷ್ ಬರುವುದಿಲ್ಲ. ಮಕ್ಕಳಿಗೆ ಇನ್ನೇನು ಅವರು ಇಂಗ್ಲೀಷ್ ಕಲಸುತ್ತಾರೆ? ಇಂಗ್ಲಿಷ್ ಬರುವುದಿಲ್ಲ. ಹಿಂದಿ ಕಲಯುವುದಿಲ್ಲ. ಅಂತೂ 8ನೇ ಸ್ಟ್ಯಾಂಡರ್ಡಿಗೆ ಬರುತ್ತಾರೆ. ಅಲ್ಲ ಅವರಿಗೆ ಎರ್ನಾ ಕಲಸುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಅವರು 8, 9, 10ನೇ ಸ್ಟ್ಯಾಂಡರ್ಡಿ

ನಲ್ಲಿ ದೊಡ್ಡ ಬ್ರೇಕ್ ಹಾಕಿಕೊಂಡು ನಿಂತುಕೊಳ್ಳುತ್ತಾರೆ. ಅದರ ನಲುವಾಗಿ ಎರ್.ಎಸ್. ಪಬ್ಲಿಕ್ ಪರೀಕ್ಷೆಯನ್ನು ಮಾಡೋಣ ಎಂದು ಆಲೋಚನೆ ಮಾಡುತ್ತಿದ್ದೇವೆ. ಆ ರೀತಿ ಮಾಡುವುದರಿಂದ ಎರ್.ಎಸ್. ಪರೀಕ್ಷೆಯಲ್ಲಿ ಬಹಳ ಜನ ಫಿಲ್ಟರ್ ಆಗಿ ಈಗ ಮಿಡ್ಲ್ ಸ್ಕೂಲಿನಿಂದ 100ಕ್ಕೆ 95 ಜನ ಏನು ಪಾಸ್ ಮಾಡಿಕೊಂಡು ಬರುತ್ತಿದ್ದಾರೆ. ಅದು 60 ಪರ್ಸೆಂಟ್ ಆಗಬಹುದು. ಈ ವರ್ಷ ಎರ್.ಎಸ್. ಪರೀಕ್ಷೆಯಲ್ಲಿ ಹಿಂದಿಯನ್ನು ಎಗ್ಸಾಮಿನೇಷನ್ ನಬ್ಜೆಕ್ಟ್ ಆಗಿ ಇಡಬಾರದು ಎಂದು ಹೇಳಿ ಅಪ್ಪಣೆ ಕೊಟ್ಟಿದೆ.

ಈಗ ನಾಲ್ಕು ವರ್ಷಗಳ ಅವಧಿಯಲ್ಲಿ ನಾವು ಹಿಂದಿ ಶಿಕ್ಷಕರನ್ನು ಬಹಳ ಜನಗಳನ್ನು ನೇಮಿಸಿದ್ದೇವೆ. ಮಿಡರ್ ಸ್ಕೂಲುಗಳಲ್ಲಿ 4,300 ಹಿಂದಿ ಶಿಕ್ಷಕರನ್ನು ನೇಮಿಸಿದ್ದೇವೆ. ನಮ್ಮ ದೇಶದಲ್ಲಿ ಹೈಸ್ಕೂಲುಗಳಲ್ಲಿ 100ಕ್ಕೆ 60ರಷ್ಟು ಹಿಂದಿ ಶಿಕ್ಷಕರನ್ನು ಫುರ್ ಟ್ರೈಮ್ ಶಿಕ್ಷಕರನ್ನು ನೇಮಿಸಿದ್ದೇವೆ. ಇದರಲ್ಲಿ ಕೆಲವು ತೊಂದರೆಗಳು ಇವೆ. ಹಳ್ಳಿಗಳಿಗೆ ಹಿಂದಿ ಶಿಕ್ಷಕರು ಹೋಗುವುದಿಲ್ಲ ಅವರಿಗೆ ದೊಡ್ಡ ಊರು ಬೇಕು. ಆದರಿಂದ ತೊಂದರೆಯಾಗುತ್ತಿದೆ. ಅನೇಕ ಜನ ಮಿಡ್ಲ್ ಸ್ಕೂಲಿನಲ್ಲಿ ಹಿಂದಿ ಶಿಕ್ಷಕರಾಗಿರತಕ್ಕವರು ಹೈಸ್ಕೂಲಿನಲ್ಲಿ ವಾರ್ಟ್ ಟ್ರೈಮ್ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ.

ಎರಡನೆಯದು ಕ್ವಾಲಿಟೇಟಿವ್ ಇಂಪ್ರೂಮೆಂಟು ಎಂದು ನಾವು ಮಾಡಬೇಕೆಂದು ಇದ್ದೇವೆ. ಕೆಲವು ಪ್ರೈಮರಿ ಶಾಲೆಗಳಲ್ಲಿ ಹಾಗೂ ಮಿಡರ್ ಸ್ಕೂಲುಗಳಲ್ಲಿ ಗ್ರಾಜುಯೇಟು ಟೀಚರುಗಳಿದ್ದಾರೆ. ಇವರೆಲ್ಲರನ್ನೂ ಮಿಡರ್‌ಸ್ಕೂಲುಗಳಿಗೇ ಹಾಕಿ ಅವರೇ ಅಲ್ಲಿ ಹೆಡ್‌ಮಾಸ್ಟರುಗಳಾಗಿಯೂ ಇರುವಂತೆ ಮಾಡಬೇಕೆಂದು ಇದೆ. ಆದರಂತೆ ಮಾಡಲು ನಾಲ್ಕನೆ ಯೋಜನೆಯಲ್ಲಿ ನಮಗೆ ದುಡ್ಡು ಕೂಡ ಒದಗಿಸಿಕೊಟ್ಟಿದ್ದಾರೆ. ಇದಲ್ಲದೆ ಇನ್ನೂ ಒಂದು ನಾವೇನು ಮಾಡಿದ್ದೇವೆಂದರೆ, poverty *cum* progress scholarships ಎಂದು ಇಲ್ಲಿಯವರೆಗೂ ಕೊಡುತ್ತಿದ್ದುದನ್ನು ಮುಂದಿನ ವರ್ಷ, ಎಂದರೆ, 66-67 ನೇ ಸಾಲಿನಿಂದ ರದ್ದು ಮಾಡಬೇಕೆಂದು ಇದ್ದೇವೆ. ಮತ್ತು ಈ ದುಡ್ಡನ್ನು ಇನ್ನು ಮುಂದೆ ಹೆಚ್ಚಾಗಿ ಮೆರಿಟ್ ಸ್ಕಾಲರ್‌ಷಿಪ್ಪುಗಳಂತೆ ಕೊಡಬೇಕೆಂದು ಇದ್ದೇವೆ. ಯಾರು ಎರ್. ಎಸ್. ಪರೀಕ್ಷೆಯಲ್ಲಿ ರ್ಯಾಂಕು ಬರುತ್ತಾರೋ ಅಂತಹವರಿಗೆ ಮೆರಿಟ್ ಸ್ಕಾಲರ್‌ಷಿಪ್ ಕೊಡ ಬೇಕೆಂದು ಅದಕ್ಕೆ ತಕ್ಕ ಏರ್ಪಾಡು ಮಾಡಿದ್ದೇವೆ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ನೀವು ಕೊಡುವ ದುಡ್ಡು ಅಲ್ಲಿರುವ ಮೇಷ್ಟರುಗಳಿಗೆ ಪೀಜು ಕೊಡುವುದಕ್ಕಾಗುತ್ತದೆ, ಅಷ್ಟೇ.

ಶ್ರೀ ಎಸ್. ಆರ್. ಕಂಠಿ.—ಮೇಷ್ಟರುಗಳಿಗಾದರೂ ಕೊಡಲಿ ಅಥವಾ ಬೇರೆ ಯಾರಿಗೆ ಬೇಕಾದರೂ ಕೊಡಲಿ. 8 ನೇ ಸ್ಟಾಂಡರ್ಡಿನಿಂದ ಮೆರಿಟ್ ಕಂಪ್ರೋಗ್ರೆಸು ಸ್ಕಾಲರು ಷಿಪ್ಪುಗಳನ್ನು ಕೊಡಬೇಕೆಂದು ಏರ್ಪಾಡು ಮಾಡಿದ್ದೇವೆ. ಪಾವರ್ಟಿ ಕಂ ಪ್ರೋಗ್ರೆಸ್ಸು ಸ್ಕಾಲರ್‌ಷಿಪ್ಪು ಕೊಡು ವುದು ಅನಾವಶ್ಯಕ. ಏಕೆಂದರೆ, ಮುಂದಿನ ವರ್ಷದಿಂದ ನಾವು ಪೆಕೆಂದರಿ ಎಜುಕೇಷನ್ನನ್ನು ಪುಕ್ಕಟೆ ಯಾಗಿ ಕೊಡಬೇಕೆಂದು ಮಾಡಿರುವುದರಿಂದ ಪಾವರ್ಟ ಕಂ ಪ್ರೊಗ್ರೆಸ್ಸು ಸ್ಕಾಲರುಷಿಪ್ಪನ್ನು ತೆಗೆದು ಹಾಕಬೇಕೆಂದು ಮಾಡಿದ್ದೇವೆ. ತಾವು ಮೆರಿಟ್ಟಿನ ಜೊತೆಗೆ ಪಾವರ್ಟಿಯನ್ನೂ ಗಣನೆಮಾಡಬೇಕೆಂದು ಸೂಚನೆ ಮಾಡಿದ್ದಾರೆ, ಮುಂದೆ ಅದನ್ನೂ ಯೋಚನೆ ಮಾಡೋಣ.

ಅಮೇರೆ ಪ್ರೈಮರಿ ಎಜುಕೇಷನ್ನಿನಲ್ಲಿ ಒಂದೇ ವರ್ಷ ಟ್ರೇನಿಂಗು ತೆಗೆದುಕೊಂಡು ಬರುವುದ ರಿಂದ ಅವರಿಗೆ ಸರಿಯಾಗಿ ಹಾಗೂ ಚೆನ್ನಾಗಿ ಟ್ರೇನಿಂಗು ಸಿಗುವುದಿಲ್ಲ ಎಂದು ಇನ್ನು ಮುಂದೆ ಎಸ್. ಎಸ್. ಎರ್. ಸಿ. ಆಗಿರುವ ಉಪಾಧ್ಯಾಯರುಗಳಿಗೆ ಎರಡು ವರ್ಷಗಳ ಕಾಲ ಟ್ರೇನಿಂಗು ಕೊಡಬೇಕೆಂದೂ ಇದರಲ್ಲಿ ಒಂದು ವರ್ಷ ಕಂಡೆನ್ಸಿಂಗ್ ಕೋರ್ಸು ಮತ್ತು ಇನ್ನೊಂದು ವರ್ಷ ಮೆಥಡ್ಸ್‌ಗಳ ಬಗ್ಗೆ ಟ್ರೇನಿಂಗು ಕೊಡಬೇಕೆಂದು ವ್ಯವಸ್ಥೆ ಮಾಡಿದ್ದೇವೆ. ಇದರಿಂದ ಪ್ರೈಮರಿ ಶಿಕ್ಷಣ ಇನ್ನೂ ಹೆಚ್ಚು ಉತ್ತಮವಾದ ರೀತಿಯಲ್ಲಿ ಇಂಪ್ರೂವ್ ಆಗಿ ಕ್ವಾಲಿಟಿ ಬರುತ್ತದೆ ಮತ್ತು ದೋಷಗಳನ್ನು ಆದಷ್ಟೂ ನಿವಾರಣೆ ಮಾಡಬೇಕೆಂದು ಹೀಗೆ ಮಾಡುತ್ತಿದ್ದೇವೆ. ಮುಂದಿನ ವರ್ಷ ದಿಂದ ಹೈಸ್ಕೂಲು ವಿದ್ಯಾಭ್ಯಾಸ ಎಲ್ಲರಿಗೂ ಉಚಿತವಾಗಿ ದೊರೆಯುತ್ತದೆ.

ಇನ್ನು ಚಿಕ್ಕ್ಸ್ ಬುಕ್ಕುಗಳ ವಿಚಾರವಾಗಿ ಕೆಲವು ಮಾನ್ಯ ಸದಸ್ಯರು ಇಲ್ಲಿ ಹೇಳಿದರು. ಚಿಕ್ಕ್ಸ್ ಬುಕ್ಕುಗಳು ಎಂದು ಏನು ನಿಯತವಾಗಿರುತ್ತದೋ ಅದು ಸರಿಯಾಗಿ ಸಕಾಲದಲ್ಲಿ ಸಿಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಮಾಹಿತಿ ತಮಗೆ ಕೊಡುವುದಾದರೆ. ನಮಗೆ ಬೇಕಾಗುವ ಸುಮಾರು 500 ಪುಸ್ತಕಗಳಲ್ಲಿ ಈಗಾಗಲೇ 138 ಪುಸ್ತಕಗಳನ್ನು ನ್ಯಾಷನಲೈಸು ಮಾಡಿದ್ದೇವೆ. ಇನ್ನು ಮೂರು ವರ್ಷಗಳಲ್ಲಿ ನಮ್ಮ ಸನ್ಮಾನ್ಯ ಸದಸ್ಯರು ಹೇಳಿದಂತೆ ಮುಖ್ಯವಾದ ಎಲ್ಲ ಪುಸ್ತಕ ಗಳನ್ನೂ ಹತ್ತನೇ ಸ್ಟಾಂಡರ್ಡುವರೆಗೆ ಫ್ರೀಯಾಗಿ ಮಾಡಬೇಕೆಂದು ಇದೆ ಮತ್ತು ನಾಲ್ಕನೇ

(ಶ್ರೀ ಎಸ್. ಆರ್. ಕಂಠಿ)

ಯೋಜನೆಯಲ್ಲಿ ಎಲ್ಲ ಪುಸ್ತಕಗಳನ್ನೂ ನ್ಯಾಷನಲೈಸ್ ಮಾಡಬೇಕೆಂದು ಇದ್ದೇವೆ. ಅಲ್ಲಿಯವರೆಗೂ ಯಾವ ಪರೀಕ್ಷೆಗಳನ್ನೂ ಒಂದೇ ಸಮನಾಗಿ ಮಾಡುವುದಕ್ಕೆ ಆಗುವುದಿಲ್ಲ. ಇಲ್ಲಿ ಪುಸ್ತಕಗಳನ್ನು ಗೊತ್ತುಮಾಡುವಾಗ ಒಂದೊಂದು ಜೋನುಗಳಾಗಿ ಏಕೆ ಮಾಡುತ್ತಿದ್ದೀರಿ ಎಂದರು. ಇದನ್ನು ತಾವೂ ಕೂಡ ಸ್ವಲ್ಪ ಇಲ್ಲಿ ವಿಚಾರ ಮಾಡಿ ನೋಡಿದರೆ, 8 ನೇ ಸ್ಟಾಂಡರ್ಡುವರೆಗೆ ಒಟ್ಟು ಎಷ್ಟು ಪುಸ್ತಕ ಬೇಕೆಂದು ನೋಡಿದರೆ ಲಕ್ಷಾಂತರ ಪುಸ್ತಕಗಳು ಬೇಕಾಗುತ್ತವೆ. ಇದರಿಂದ ಎಲ್ಲರಿಗೂ ಒಂದೇ ಸಾರಿ ಪುಸ್ತಕಗಳನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಜೋನುಗಳನ್ನು (zones) ಬೇರೆ ಬೇರೆಯಾಗಿ ಮಾಡುತ್ತಿದ್ದೇವೆ. ಮತ್ತು ಇದರಿಂದ ಎಲ್ಲ ಜೋನುಗಳಲ್ಲೂ ಸುಸೂತ್ರವಾಗಿ ಪುಸ್ತಕಗಳು ಎಲ್ಲರಿಗೂ ಸಿಗುವಂತೆ ಏರ್ಪಾಡು ಮಾಡಬೇಕೆಂಬ ದೃಷ್ಟಿಯಿಂದ ಮಾಡುತ್ತಿದ್ದೇವೆ. ಇದೂ ಅಲ್ಲದೆ ಈಗ ಟೆಕ್ಸ್ಟ್ ಬುಕ್ಕುಗಳು ಸಕಾಲದಲ್ಲಿ ಸಿಗುತ್ತಿಲ್ಲ ಎಂದು ಸನ್ಮಾನ್ಯ ಸದಸ್ಯರು ಆಗರೇ ಹೇಳಿದ್ದಾರೆ. ಕೆಲವು ಕಡೆಗಳಲ್ಲಿ ಪುಸ್ತಕಗಳೇ ಸಿಗುತ್ತಿಲ್ಲ ಎಂದು ಹೇಳಿದರು. ಈಗ private publishers ಎಂದು ಯಾರಿದ್ದಾರೆ ಅವರು ಮಾಡುವ ಪುಸ್ತಕಗಳು ಸರಿಯಾಗಿ ಪ್ರಿಂಟು ಆಗುತ್ತಿಲ್ಲ ಅದರಿಂದಾಗಿ ಅವು ಸಿಗುವುದಿಲ್ಲ. ಸರಕಾರ ನ್ಯಾಷನಲೈಸು ಮಾಡಿದರೆ ಆಗ ಎಲ್ಲ ಪುಸ್ತಕಗಳೂ ಸರಿಯಾಗಿ ಸಿಗುತ್ತವೆ. ಆದುದರಿಂದ ಒಂದು ಹೊಸ ಯೋಜನೆಯನ್ನು ಈ ವರ್ಷದಿಂದ ಮಾಡಬೇಕೆಂದು ಏರ್ಪಾಡು ಮಾಡುತ್ತಿದ್ದೇವೆ. ಅದೇನೆಂದರೆ, ಈಗ ಎಲ್ಲ ನ್ಯಾಷನಲೈಸ್ ಆದ ಟೆಕ್ಸ್ಟ್ ಬುಕ್ಕುಗಳನ್ನೆಲ್ಲಾ ನಾವು ಬೆಂಗಳೂರಿನಿಂದಲೇ ಎಲ್ಲ ಕಡೆಗಳಿಗೂ ಒದಗಿಸುತ್ತ ಬರುತ್ತಿದ್ದೇವೆ. ಇದರಿಂದ ರಾಜ್ಯದ ಎಲ್ಲ ಕಡೆಗೂ ಪುಸ್ತಕಗಳನ್ನು ಬೇಗ ಹಂಚಲು ಆಗುತ್ತಿಲ್ಲ. ಇದಕ್ಕಾಗಿ ರಾಜ್ಯ ಎಲ್ಲ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರುಗಳಲ್ಲಿಯೂ ಒಂದೊಂದು ಎಂಪೋರಿಯಂ ತೆರೆಯಬೇಕೆಂದು ಏರ್ಪಾಡು ಮಾಡರಾಗಿವೆ. ಅದರಂತೆ ಈ ಸಾರಿ ಹತ್ತು ಎಂಪೋರಿಯಂಗಳನ್ನು ಹತ್ತು ಜಿರ್ಲಾ ಕೇಂದ್ರುಗಳಲ್ಲಿ ತೆರೆಯಬೇಕೆಂದು ಮಾಡಿದ್ದಾಗಿದೆ. ಮತ್ತು ಇದರ ಜೊತೆಗೆ ನಾಲ್ಕು ಡಿವಿಜನಲ್ ಎಂಪೋರಿಯಂಗಳನ್ನು ತೆಗೆಯಬೇಕೆಂದೂ ಏರ್ಪಾಡು ಮಾಡರಾಗಿದೆ. ಇದರಂತೆ ಒಂದೊಂದು ಡಿವಿಜನಲ್ ಎಂಪೋರಿಯಂ ಎಂದು ಮಾಡಿ ಒಂದನ್ನು ಬೆಂಗಳೂರಿನಲ್ಲಿ, ಒಂದನ್ನು ಚಿತ್ರದುರ್ಗದಲ್ಲಿ, ಒಂದನ್ನು ಗುಲ್ಬರ್ಗಾದಲ್ಲಿ ಮತ್ತೆ ಇನ್ನೊಂದನ್ನು ಧಾರವಾಡದಲ್ಲಿ, ಇನ್ನೊಂದನ್ನು ಮೈಸೂರಿನಲ್ಲಿ ಮುಖ್ಯ ಎಂಪೋರಿಯಂ ಎಂದು ತೆರೆಯಬೇಕೆಂದು ಏರ್ಪಾಡು ಮಾಡರಾಗಿದೆ. ಇದಕ್ಕೂ ಕೂಡ ಈಗಾಗಲೇ ಸರಕಾರ ಅನುಮತಿ ಕೊಟ್ಟಿದೆ. ಇದಕ್ಕೆ ಬೇಕಾದ ಸಿಬ್ಬಂದಿಗಳನ್ನು ಕೂಡ ತೆಗೆದುಕೊಳ್ಳುತ್ತಿದ್ದಾರೆ. ಇನ್ನು ಮುಂದೆ ಜನಕ್ಕೆ ಬೇಕಾದ ನ್ಯಾಷನಲೈಸು ಮಾಡಿದಂತಹ ಪುಸ್ತಕಗಳು ಆಯಾ ಸ್ಥಳಗಳಲ್ಲೇ ಸಿಗುತ್ತವೆ. ಇದಕ್ಕಾಗಿ ಸರಕಾರದವರು ಒಂದು ವ್ಯಾನನ್ನು ಕೂಡ ಖರೀದಿ ಮಾಡಿಕೊಳ್ಳಲು ಮಂಜೂರಾತಿ ಕೊಟ್ಟಿದ್ದಾಗಿದೆ. ಆ ವ್ಯಾನಿನ ಮೂಲಕ ಎಲ್ಲ ಪುಸ್ತಕಗಳನ್ನೂ ತೆಗೆದುಕೊಂಡು ಮೈಸೂರು ರಾಜ್ಯದ ಎಲ್ಲ ಕಡೆಗಳಿಗೂ ಹಂಚುವ ಏರ್ಪಾಡು ಮಾಡಿದ್ದೇವೆ. ಮುಂದಿನ ವರ್ಷ ಇಂತಹ ತೊಂದರೆಗಳು ಆಗಲಿಕ್ಕಿಲ್ಲ ಎಂದು ನಾನು ಭಾವಿಸುತ್ತೇನೆ. ಆದರೆ ಪ್ರೈವೇಟ್ ಆಗಿ ಕೆಲವು ಪುಸ್ತಕಗಳು ಬರುತ್ತಿರುವುದರಿಂದ ಅದರಲ್ಲಿ ತೊಂದರೆಯಾಗುತ್ತದೆ. ಈ ಸಾರಿ ನಾವು 14 ಜೋನುಗಳು ಎಂದು ಮಾಡಿ ಇದರಲ್ಲಿ 14 ಪುಸ್ತಕಗಳನ್ನು ಸರಕಾರ ಚುನಾಯಿಸುವುದಕ್ಕಾಗಿ ಪ್ರೈವೇಟು ಜನರಿಂದ ಕೇಳರಾಗಿತ್ತು. ಅದರಂತೆ ನಮಗೆ ಸುಮಾರು 69 ಪುಸ್ತಕಗಳು ಬಂದವು. ಇದರಲ್ಲಿ ಕೆಲವು repetition ಆಗಿದ್ದವು. ಅಂತೂ ಒಟ್ಟು ಬಂದ 60 ಪುಸ್ತಕಗಳಲ್ಲಿ ಬೇರೆ ಬೇರೆ ಜನರಿಂದ ಬಂದವುಗಳಲ್ಲಿ ನಾವು 14 ಪುಸ್ತಕಗಳನ್ನು ಮಾತ್ರ ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡರಾಗಿತ್ತು. ಅದರಂತೆ ನಾವು 14 ಪುಸ್ತಕಗಳನ್ನು ತೆಗೆದು ಕೊಂಡಮೇಲೆ ಇನ್ನುಳಿದವರು ಪುಸ್ತಕಗಳನ್ನು ಕಳುಹಿಸಿದುದನ್ನು ಒಪ್ಪಲಿಲ್ಲ ಎಂದು ಮಾಡಿದುದಕ್ಕಾಗಿ ಅವರಲ್ಲ ಬಹಳ ಅಸಂತೋಷ ಉಂಟಾಯಿತು. ಅನಂತರ ಅವರೂ ಸರಕಾರದ ಆಚೆ ಈಚೆ ಕಡೆ ಓಡಾಡಿ ತಕರಾರು ಮಾಡಿದರು. ಆದರೆ ಎಷ್ಟು ಪುಸ್ತಕಗಳು ಬೇಕೆಂದು ಇತ್ತ್ರೀ ಅದಕ್ಕಿಂತ ಜಾಸ್ತಿಯಾಗಿ ಸರಕಾರ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಖಾಸಗಿಯವರು ಮೊದಲಗೇನೇ ಹೆಚ್ಚು ಸಂಖ್ಯೆಯಲ್ಲಿ ಪುಸ್ತಕಗಳನ್ನು ಪ್ರಿಂಟು ಮಾಡಬೇಕು ಎಂದರೆ ಅವರಿಗೆ ಕಷ್ಟವಾಗುತ್ತದೆ. ಇದರಿಂದ ಸಕಾಲದಲ್ಲಿ ಇಂತಹ ಪುಸ್ತಕಗಳು ಸಿಗುವುದು ಸ್ವಲ್ಪ ತೊಂದರೆಯಾಗಿದೆ. ಇದಕ್ಕಾಗಿ ಸರಕಾರ ತೀವ್ರವಾಗಿ ಆಲೋಚನೆ ಮಾಡಿ ಎಸ್. ಎಸ್. ಎಲ್. ಸಿ. ಯವರೆಗೆ ಬೇಕಾಗುವ ಎಲ್ಲ ಪುಸ್ತಕಗಳನ್ನೂ ಪೂರ್ತಿಯಾಗಿ ನ್ಯಾಷನಲೈಸು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಆಗ ಕಾಮನ್ ಎಕ್ಸಾಮಿನೇಷನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಜೋನುಗಳಿಂದ ಜೋನಿಗೆ ಬೇರೆ ಬೇರೆಯಾಗಿ ಇಡುವ ಪುಸ್ತಕಗಳನ್ನೂ ತೆಗೆದುಹಾಕಬಹುದು ಮತ್ತು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲ ಒಂದೇ, common paper ಕೊಡಲು ಸಾಧ್ಯವಾಗುತ್ತದೆ. ಇದರಿಂದ

(ಇಲಾಖಾ ಗ್ರಂಥಾಲಯ)
ಸ್ವಾಪ್ತಿ ಕ್ರಮಾಂಕ Accession No... 4836
ದಿನಾಂಕ Date.....

ಒಂದು ಜೋನಿಗೆ ಕಡೆ ಹೆಚ್ಚು ಪುಸ್ತಕಗಳು ಇವೆ ಇನ್ನೊಂದು ಕಡೆ ನಗುತ್ತಿಲ್ಲ ಎನ್ನುವ ಕಷ್ಟಗಳು ದೂರವಾಗುತ್ತವೆ.

ಇನ್ನು ನಮ್ಮ ನನ್ಮಾನ್ಯ ಸದಸ್ಯರು ಇಲ್ಲಿ ಒಂದು ಮಾತು ಹೇಳಿದರು. ಎಜುಕೇಷನ್ನು ಡಿಪಾರ್ಟುಮೆಂಟಿನಲ್ಲಿ ಎಲ್ಲವೂ ಬರೀ ಗೊಂದಲ ಆಗಿದೆ ಎಂದು. ಗೊಂದಲ ಎನ್ನುವುದು ನಮ್ಮ ಮಾನ್ಯ ಸದಸ್ಯರಿಗೇ ಆಗಿರಬಹುದು. ನಮಗೆ ಯಾವ ರೀತಿಯ ಗೊಂದಲ ಅಥವಾ ಕನ್‌ಫ್ಯೂಷನ್ ಆಗಿಲ್ಲ. ಎಲ್ಲೂ ಯಾವ ರೀತಿಯಾದ ಅನ್ತವ್ಯಸ್ತತೆ (ಕನ್‌ಫ್ಯೂಷನ್) ಎನ್ನುವುದು ಇಲ್ಲ. ಆ ರೀತಿ ಹೇಳತಕ್ಕದ್ದು ಸರಿಯಲ್ಲ. ಇದರಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡುವುದು ತಮ್ಮ ಬಳಿ ಬಂದು ಅಧಿಕಾರಿಗಳು ಬಂದು ಹೇಳುವ ಮಾತುಗಳನ್ನು ಕೇಳಬೇಡಿ. ಅವರು ಎಲ್ಲವನ್ನೂ ಜೊತೆಯಲ್ಲಿ ಸೇರಿಸಿ ಹೇಳಿಬಿಡುತ್ತಾರೆ. ಮತ್ತು ತಮಗೆ ಅವರು ಹೇಳುವ ಎಲ್ಲ ವಿಚಾರಗಳನ್ನೂ ಕೇಳಿ ತಿಳಿದು ಕೊಳ್ಳಲು ಅವಕಾಶ ಕೂಡ ಇರುವುದಿಲ್ಲ. ಅದರಿಂದ ಇದರಲ್ಲೇನೋ ಸತ್ಯ ಇರಬಹುದು ಎಂದು ನಂಬುತ್ತೀರಿ. ಇಲ್ಲಿ ಎಲ್ಲವನ್ನೂ ಕೂಲಂಕಷವಾಗಿ ನೋಡಿದರೆ ಅವರು ಹೇಳುವುದು ನಿಮಗೆ ಸರಿಯಾಗಿಲ್ಲ ಎನ್ನುವುದು ಗೊತ್ತಾಗುತ್ತದೆ.

ಇನ್ನು ಮೂರನೇ ದರ್ಜೆ ಆಫೀಸರುಗಳ ಐ. ಎಸ್. ಎಸ್. ಲಿನ್ನು ಬಗ್ಗೆ ಕೆಲವರು ಇಲ್ಲಿ ಹೇಳಿದರು. ಹೈದರಾಬಾದು ವರ್ಗದವರು ಮೇಲೆ ಇರಬೇಕಾದವರನ್ನು ಕೆಳಗೆ ಇರುವಂತೆ ಮಾಡಿದ್ದಾರೆ. ಮತ್ತು ಕೊಡಗು ಕಡೆಯಿಂದ ಬಂದ ಅಧಿಕಾರಿಗಳನ್ನು ಕೆಳಗೆ ಮಾಡಿದ್ದಾರೆ ಮತ್ತು ಮುಂಬಯಿ ಕರ್ನಾಟಕದವರು ನಮಗೇನೂ ಮಾಡಿಲ್ಲ, ನಾವು ಎಲ್ಲಿ ಇದ್ದೆವೋ ಅಲ್ಲೇ ಸ್ಥಿತವಾಗುವಂತೆ ಮಾಡಿದ್ದಾರೆ, ಹಳೆಯ ಮೈಸೂರಿನ ಭಾಗದವರು ನಮ್ಮ ಮೇಲೆ ಬಂದಿದ್ದಾರೆ ಎಂದೆಲ್ಲ ಹೇಳುತ್ತಿದ್ದಾರೆ. ಈ ರೀತಿಯಾಗಿ ಆಗಲು ಕಾರಣ ಹೈದರಾಬಾದು ಭಾಗದಲ್ಲಿ ಬೇರೆ ರೂಲ್ಸುಗಳು ಕೊಡಗಿನಲ್ಲಿ ಬೇರೆ ರೀತಿಯಾದ ರೂಲ್ಸುಗಳು ಹೀಗೆ ವಿಧವಿಧವಾಗಿದ್ದುದರಿಂದ ಇವರಲ್ಲಿ ತೊಂದರೆಗಳಾಗಿದ್ದವು. ಅಗ್ರಿಮೆಂಟು ಪ್ರಕಾರ ಯಾವ ರೀತಿಯಾಗಿ ಮಾಡಬೇಕೆಂದು ಇತ್ತೋ ಅದರಂತೆ ಮಾಡಲಾಗಿದೆ, ಇದರಲ್ಲಿ ಯಾವ ತರಹದ ತೊಂದರೆಗಳನ್ನು ಮಾಡಿಲ್ಲ. ಆದರೂ ಇಲ್ಲಿ ಇಂಜಿಸ್ಟಿಸ್ ಆಗಿದೆ ಎನ್ನುವುದನ್ನು ಹೈಕೋರ್ಟಿನಲ್ಲೂ ಚಾರೆಂಜು ಮಾಡಿದರು. ಹಳೆಯ ಮೈಸೂರಿನವರೂ ಅದೇ ರೀತಿ ಕೋರ್ಟಿಗೆ ಹೋಗಿದ್ದಾರೆ. ಇದರಲ್ಲಿ ಯಾವುದು ಸರಿ ಯಾವುದು ತಪ್ಪು ಎನ್ನುವುದನ್ನು ಅವರ ತೀರ್ಮಾನ ಬಂದಮೇಲೆ ನೋಡೋಣ ಈಗ ಐ.ಎಸ್.ಎಸ್. ಲಿನ್ನು ಬಗ್ಗೆ ಅನ್ಯಾಯವಾಗಿದೆ ಎಂದು ಹೈಕೋರ್ಟಿಗೆ ಮೂರನೇ ದರ್ಜೆ ಅಧಿಕಾರಿಗಳೂ ಹೋಗಿದ್ದಾರೆ. ಎರಡನೇ ದರ್ಜೆ ಅಧಿಕಾರಿಗಳೂ ಹೋಗಿದ್ದಾರೆ. ಮೊದಲನೇ ದರ್ಜೆ ಹುದ್ದೆಯ ಅಧಿಕಾರಿಗಳೂ ಹೋಗಿದ್ದಾರೆ. ಕೋರ್ಟಿನವರೂ ಏನು ನಿರ್ಣಯ ಮಾಡುತ್ತಾರೆ ಮುಂದೆ ನೋಡೋಣ. ಆದರೆ ಇದರಲ್ಲಿ ಜಾತೀಯತೆಯನ್ನು ಎಲನ ಮಾಡಿ ಇಲ್ಲಿ ಹೇಳುತ್ತಾರೆ. ಅದು ಸರಿಯಲ್ಲ ಯಾರಿಗಾದರೂ ಅನ್ಯಾಯವಾಗಿದೆ ಎಂದು ಹೇಳಿದರೆ ಅದನ್ನು ಸರಕಾರ ಏನು ಮಾಡುವುದಕ್ಕೆ ಸಾಧ್ಯ? ಅದುದರಿಂದ ನಾನು ಇಲ್ಲಿ ವಿನಂತಿ ಮಾಡುವುದು ಬೇರೆ ಜನಗಳು ಬಂದು ಹೇಳುತ್ತಾರೆ ಎಂದು ಹೇಳುವುದಕ್ಕಿಂತ ಎಲ್ಲಿಯಾದರೂ ಇಂತಹ ಕಡೆಗಳಲ್ಲಿ ನ್ಯಾಯ ದೊರಕಿಲ್ಲ ಅನ್ಯಾಯಗಳಾಗಿವೆ ಎಂದು ನನ್ನ ಕಡೆಗೆ ತೆಗೆದುಕೊಂಡು ಬನ್ನಿ. ನಾನು ಆಗ ಅದರ ಪೂರ್ತಿ ವಿವರಗಳನ್ನು ತಮಗೆ ಕೊಡುತ್ತೇನೆ. ಇಲ್ಲ ಬರೀ ಊಹೆಯ ಮೇಲೆ ಮಾತುಗಳನ್ನು ಹೇಳಬೇಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಮ್ಮ ಕಾರುಣ್ಯದ ಮೇರೆಯೇ ಇದೆ ಎಂದು ತೋರುತ್ತೆ. ಜಾನ್‌ಸನ್‌ನಂತೆ ಆಗಿಹೋದರೇನು!

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ಕರುಣೆಯೇನೂ ಇಲ್ಲ, ಎಲ್ಲ ತಮ್ಮ ಮೇರೆ ಇದೆ. ಜಾನ್‌ಸನ್ ನಂತೆ ನಾನು ತಮಗೆ ಕೇಳುವುದಕ್ಕೆ ಹೋಗುತ್ತಿಲ್ಲ. ಅವೆಲ್ಲಾ ನಿಮಗೇ ಸೇರಿದ್ದು.

ಇನ್ನು ಎಕ್ಸ್‌ಪೆರಿಮೆಂಟೇಷನ್ನು ವಿಚಾರವಾಗಿ ಇಲ್ಲಿ ಹೇಳಿದರು. ಈಗ ಕೆಲವು ಕಡೆ ಹೊಸ ಎಕ್ಸ್‌ಪೆರಿಮೆಂಟುಗಳನ್ನು ಮಾಡಬೇಕೆಂದು ಕೆಲಸಗಳು ನಡೆಯುತ್ತಿವೆ. ಏಕೆಂದರೆ, ಒಳ್ಳೆಯ ಶಿಕ್ಷಣವನ್ನು ಕೊಡುವಾಗ ಜನಕ್ಕೆ ತೊಂದರೆಯಾಗಬಾರದು ಎಂದು ಈಗಿರುವ ಶಿಕ್ಷಣ ಪದ್ಧತಿ ಬದಲಾವಣೆಯಾಗಬೇಕು, ಅದು ಯಾವರೀತಿಯಾಗಬೇಕು ನಮ್ಮ ದೇಶದಲ್ಲಿ ಅದಕ್ಕೆ ಹೇಗೆ ಹೊಂದಿಕೊಳ್ಳಬೇಕು ಎನ್ನುವುದರ ಬಗ್ಗೆ ನಾವು ತಕ್ಕ ಸಂಶೋಧನಗಳನ್ನು ನಡೆಸಬೇಕು., ಅದನ್ನು ಯಾವ ರೀತಿ ನಡೆಸಿದರೆ ಮಕ್ಕಳಿಗೆ ಚೆನ್ನಾಗಿ ಶಿಕ್ಷಣ ಕೊಡುವುದಕ್ಕೆ ಸಾಧ್ಯ ಎನ್ನುವುದನ್ನು ಮಾಡಲು ನಾವು ಎಕ್ಸ್‌ಪೆರಿಮೆಂಟು ಮಾಡಲೇ ಬೇಕಾಗುತ್ತದೆ. ಅಖಿಲ ಭಾರತ ಮಟ್ಟದಲ್ಲಿಯೂ ಎಕ್ಸ್‌ಪೆರಿಮೆಂಟು ಮಾಡುತ್ತಿದ್ದಾರೆ. ಅದರಂತೆ ಮೈಸೂರು ರಾಜ್ಯದಲ್ಲೂ ಎಕ್ಸ್‌ಪೆರಿಮೆಂಟು ಮಾಡಬೇಕೆಂದು ಸೂಚನೆ ಬಂದಿರುವುದರಿಂದ ಕೇಂದ್ರ ಸರ್ಕಾರದ ಆದೇಶದಂತೆ ಇಲ್ಲೂ ಎಕ್ಸ್‌ಪೆರಿಮೆಂಟು ಮಾಡಲೇ ಬೇಕಾಗುತ್ತದೆ.

(ಶ್ರೀ ಎಸ್. ಆರ್. ಕಂಠಿ)

ಇಂಡಿಯನ್ ಕಮ್ಯೂನಿಟಿಗೆ ರಕ್ಷಣೆ ಕೇಳುತ್ತಿಲ್ಲ, ಆ ಕಮ್ಯೂನಿಟಿಯವರು ನಡೆಸುವ ಹೈಸ್ಕೂಲುಗಳಿಗೆ ರಕ್ಷಣೆ ಕೇಳುತ್ತಿದ್ದಾರೆ. ಮೈಸೂರು ಸರಕಾರ ಯಾವುದೇ ರೀತಿಯಿಂದ ತೊಂದರೆ ಮಾಡಬೇಕೆಂದಿಲ್ಲ, ರಾಜ್ಯಂಗದ ಪ್ರಕಾರ ನಡೆದುಕೊಳ್ಳಲು ನಿದ್ಧವಾಗಿದ್ದೇವೆ. ಆಂಗ್ಲೋ ಇಂಡಿಯನ್ ಕಮ್ಯೂನಿಟಿಗೆ ಬೇಕಾದ ಅನುಕೂಲ ಮಾಡಿಕೊಳ್ಳಬಹುದು.

ಉಪಧ್ಯಾಯರ ವರ್ಗದ ವಿಚಾರವಾಗಿ ಅಣ್ಣಾರಾಯರು ಎರಡು ಮಾತು ಹೇಳಿದ್ದಾರೆ. ಹೋದ ವರ್ಷ ಒಂದು ಸರ್ಕ್ಯುಲರ್ ಕಳಿಸಿತ್ತು, ಅದರಲ್ಲಿ ಹೆಚ್ಚಿನ ವಿಷಯವೇನೂ ಇಲ್ಲ, ಸರಕಾರಿ ಆರ್ಡರುಗಳೇನಿದ್ದವೋ ಅವುಗಳನ್ನೆಲ್ಲಾ ಕನ್‌ಸಾಲಿಡೇಟ್ ಮಾಡಿ ಒಂದು ಸರ್ಕ್ಯುಲರ್ ಕಳಿಸಿತ್ತು. ಬಹಳ ದಿವಸ ಮನೆಮಠ ಮಾಡಿಕೊಂಡು ಒಂದೇ ಕಡೆ ಉಪಾಧ್ಯಾಯರು ಇರಬಾರದು, ಹಾಗಿದ್ದರೆ ವೆಸ್ಟೆಡ್ ಇಂಟರೆಸ್ಟ್ ಬರುತ್ತದೆ ಅದುದರಿಂದ ಬೇರೆ ತಾಲ್ಲೂಕಿಗೆ, ಬೇರೆ ಕಡೆಗೆ ವರ್ಗಮಾಡಬೇಕೆಂದು ಅದರಲ್ಲಿ ಇದೆ. ಆದರೆ ಅದು ಹೈದರಾಬಾದು ಕರ್ನಾಟಕದ ಉಪಾಧ್ಯಾಯರಿಗೆ ಮಾತ್ರ ಸಂಬಂಧ ಪಟ್ಟಿದೆ ಎಂದು ತಿಳಿದಿದ್ದರೆ ಅದು ತಪ್ಪು, ಅದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದೆ. ಯಾರೋ ಕಾರಕೂನ ಆ ಸರ್ಕ್ಯುಲರಿನಮೇಲೆ ಟ್ರಾನ್ಸ್‌ಫರ್ ಆಫ್ ಟೀಚರ್ಸ್ ಇನ್ ಹೈದರಾಬಾದ್ ಏರಿಯಾ ಎಂದು ಬರೆದಿರುವುದು ಈ ಗೊಂದಲಕ್ಕೆ ಕಾರಣವಾಗಿದೆ, ಅದು ಆ ಸರ್ಕ್ಯುಲರನ್ನು ತೆಗೆದು ಕಾರಕೂನನ ತಪ್ಪು. ತಾಲ್ಲೂಕುಗಳಲ್ಲಿರುವ ಮುನ್ನೂರು ಉಪಾಧ್ಯಾಯರುಗಳನ್ನು ಒಂದೇ ದಿವಸ ಹೊತ್ತುಹಾಕಬೇಕೆಂಬ ಅಭಿಪ್ರಾಯವಿಲ್ಲ. ಅದುದರಿಂದ ಹೈದರಾಬಾದು ಪ್ರದೇಶದವರಾಗಲಿ ಅಥವ ಯಾರೋ ಆಗಲಿ ಆಕ್ಷೇಪಣೆ ಮಾಡುವುದಕ್ಕೆ ಕಾರಣವಿಲ್ಲ.

ಇನ್ನು ಪರೀಕ್ಷೆಗಳ ವಿಚಾರ. ಪರೀಕ್ಷೆಗಳಿಗೇಕೆ ಇಷ್ಟು ಮಹತ್ವ ಕೊಡಬೇಕೆಂದು ಶ್ರೀ ಅಣ್ಣಾರಾಯರು ಕೇಳಿದರು. ಮುಂಬಯಿ ರಾಜ್ಯದಲ್ಲಿ ಆ ಸಂಬಂಧವಾದ ಒಂದು ವರದಿ ಇದೆಯೆಂದು ಹೇಳಿದರು. ಅಲ್ಲೊಂದೇ ಕಡೆ ಅಲ್ಲ, ಕೇರಳ ಮದ್ರಾಸು ಮುಂತಾದ ಕಡೆಗಳಲ್ಲೆಲ್ಲಾ ಅಂಥ ವರದಿಗಳಿವೆ. ಆದರೆ ಅವು ಕಪಾಟಿನಲ್ಲಿವೆ. ಅದರಿಂದೇನೂ ಪ್ರಯೋಜನವಾಗಿಲ್ಲ, ಎಲ್ಲಾ ಕಡೆಯೂ ಪರೀಕ್ಷೆ ಮಾಡುವ ರೀತಿ ಒಂದೇ ಆಗಿದೆ. ಆದರೆ 1962ರಲ್ಲಿ ಪರೀಕ್ಷಾಪ್ರಶ್ನೆ ಪತ್ರಿಕೆಗಳ ಲೀಕೇಜ್ ಆಯ್ತು. ಆ ರೀತಿ ಇನ್ನುಮುಂದಾಗಬಾರದು ಎಂದು ಕೆಲವು ಬದಲಾವಣೆಗಳನ್ನು ಮಾಡಿದ್ದೇವೆ. ಇದೇ ರೀತಿ ಎರ್.ಎಸ್. ಪರೀಕ್ಷೆಗೆ ಕೂಡ ಮಾಡಿದ್ದೇವೆ. ಅದರ ಪ್ರಕಾರ ಸಂಬಂಧಪಟ್ಟವರನ್ನೆಲ್ಲಾ ಇಲ್ಲಗೇ ಕರೆಸಿ ಉತ್ತರ ಬರೆದಿರುವ ಪುಸ್ತಕಗಳನ್ನು ಒಂದೇ ಕಡೆ ತಪಾಸುಮಾಡುವಂತೆ ಸರಕಾರ ತಿಳಿಸಿದೆ, ಇದು ಸರಿಯಾದ ವ್ಯವಸ್ಥೆ ಎಂದು ನಾನು ಭಾವಿಸಿದ್ದೇನೆ. ಅದೇ ಹಂದೆ ಬೇರೆ ಊರುಗಳಲ್ಲಲ್ಲಿರುವ ಎಗ್ಸಾಮಿನರ್ಸ್ ಹತ್ತಿರಕ್ಕೆ ಉತ್ತರ ಬರೆದಿರುವ ಪೇಪರುಗಳು ಕರೆಕ್ಷನ್ನಿಗೆ ಹೋದಾಗ ಅವರ ಹತ್ತಿರ ಆರು ತಿಂಗಳವರೆಗೆ ಅವು ಉಳಿಯುತ್ತಿದ್ದವು, ಅದರಿಂದ ಏನಾದರೂ ಮಾಡುವುದಕ್ಕೆ ಸಾಧ್ಯವಿತ್ತು. ಅಂದರೆ ತಂದೆತಾಯಿಗಳು ಅಥವಾ ಬೇರೆಯವರು ಅಥವಾ ವಿದ್ಯಾರ್ಥಿಗಳು ಹೋಗಿ ಬೇಕಾದ ಬದಲಾವಣೆ ಮಾಡಿಸಿಕೊಳ್ಳುವುದಕ್ಕೆ ಸಾಧ್ಯವಿತ್ತು. ಆದುದರಿಂದ ಪೇಪರುಗಳನ್ನೆಲ್ಲಾ ಇಲ್ಲಿಗೇ ತರಿಸಿ ಕರೆಕ್ಷನ್ ಒಂದೇ ಕಡೆ ಮಾಡುವುದೇ ಸರಿಯಾದ ಮಾರ್ಗವೆಂದು ಹಾಗೆ ಮಾಡಿದ್ದೇವೆ. ಮೊದಲು ಶಿಕ್ಷಕರು ತಮ್ಮ ಮನೆಯಲ್ಲಿ ಪೇಪರ್ ತಪಾಸು ಮಾಡುವ ಕಾಲದಲ್ಲಿ ಅವರ ಹತ್ತಿರ ಯಾರು ಯಾರೋ ಬಂದು ನಮ್ಮ ಹುಡುಗನ ನಂಬರು ಇಷ್ಟು ಇದೆ, ಅವನು ಪಾಸು ಆಗುವ ಹಾಗೆ ಮಾಡಿ ಎಂದು ಹೇಳುವುದಕ್ಕೆ ಅವಕಾಶವಿದ್ದಿತು. ಈಗ ಹೊಸ ಪದ್ಧತಿ ಬಂದ ಮೇಲೆ ಅದಕ್ಕೆ ಅವಕಾಶವಿಲ್ಲ. ತಪಾಸು ಮಾಡುವುದಕ್ಕೆ ಯಾವ ಪೇಪರು ಬರುತ್ತದೆ ಎಂಬುದು ಎಗ್ಸಾಮಿನವರಿಗೇನೇ ಗೊತ್ತು ಇರುವುದಿಲ್ಲ. ಆದುದರಿಂದ ಈ ಹೊಸ ಸಿಸ್ಟಂ ಒಳ್ಳೆಯದಾಗಿದೆ.

ಇನ್ನು ಎಂಜಿನಿಯರಿಂಗ್ ಕಾಲೇಜುಗಳ ವಿಚಾರ. ಶ್ರೀ ಸಿದ್ಧಯ್ಯ ಕಾಶೀಮಠ ಮತ್ತು ಶ್ರೀ ಜಿ. ಎ. ಗೌಡ ಅವರು ಈ ವಿಚಾರ ಮಾತನಾಡಿದರು. ನಾನು ಒಂದು ಮಾತು ಹೇಳುತ್ತೇನೆ. I compare it with a baby which is not a creation of Government. Why should the Government take it and foster it ? ಈ ಕಾಲೇಜುಗಳನ್ನು ಸರಕಾರ ಏತಕ್ಕೆ ತೆಗೆದುಕೊಳ್ಳಬೇಕು ? ಸರಕಾರದ ಆರ್ಥಿಕ ಪರಿಸ್ಥಿತಿ ನೋಡಿದರೆ ಈ ಕಾಲೇಜುಗಳನ್ನು ತೆಗೆದುಕೊಳ್ಳುವುದು ಸಾಧ್ಯವಿಲ್ಲ. ಪ್ರೈಮರಿ ಮತ್ತು ಸೆಕೆಂಡರಿ ಎಜ್ಯುಕೇಷನ್ ಟ್ರೇನಿಂಗ್ ಇವುಗಳಿಗೆ ಸರಕಾರ ಮಹತ್ವ ಕೊಡಬೇಕಾಗಿದೆ. ಆದುದರಿಂದ ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು ತೆಗೆದುಕೊಳ್ಳುವುದು ಸರಕಾರಕ್ಕೆ ಸಾಧ್ಯವಿಲ್ಲ. ಈ ವಿಚಾರದಲ್ಲಿ ನಾವು ಒಂದು ಕೆಲಸ ಮಾಡಿದ್ದೇವೆ. ಕ್ಯಾಪಿಟೇಷನ್ ತೆಗೆದುಕೊಳ್ಳುವ ಆರು ಕಾಲೇಜುಗಳಲ್ಲಿ ಐದು ಕಾಲೇಜುಗಳನ್ನು ಸರಕಾರದ ಅಧೀನಕ್ಕೆ ವಹಿಸಿಕೊಡಲು ಸಿದ್ಧರಿದ್ದಾರೆ. ಆರ್ಥಿಕ ಸಹಾಯ ಮಾಡಿದರೆ ಬರುತ್ತೇವೆ ಎಂದು ಹೇಳಿದ್ದಾರೆ. ಈ ವಿಚಾರ ಕೇಂದ್ರ ಸರಕಾರಕ್ಕೆ ತಿಳಿಸಿದ್ದೇವೆ. ಅವರಿಂದ ಇನ್ನೂ ಉತ್ತರ

(ಇಲಾಖಾ ಗ್ರಂಥಾಲಯ)
ಸ್ವೀಕೃತಿ ಕ್ರಮಾಂಕ Accession No.... 4836/21
ದಿನಾಂಕ Date.....

ಒಂದು ಜೋನಿಗೆ ಕಡೆ ಹೆಚ್ಚು ಪುಸ್ತಕಗಳು ಇವೆ ಇನ್ನೊಂದು ಕಡೆ ಸಿಗುತ್ತಿಲ್ಲ ಎನ್ನುವ ಕಷ್ಟಗಳು ದೂರವಾಗುತ್ತವೆ.

ಇನ್ನು ನಮ್ಮ ನನ್ಮಾನ್ಯ ಸದಸ್ಯರು ಇಲ್ಲಿ ಒಂದು ಮಾತು ಹೇಳಿದರು. ಎಜುಕೇಷನ್ನು ಡಿವಾರ್ಟುಮೆಂಟಿನಲ್ಲಿ ಎಲ್ಲವೂ ಬರೀ ಗೊಂದಲ ಆಗಿದೆ ಎಂದು. ಗೊಂದಲ ಎನ್ನುವುದು ನಮ್ಮ ಮಾನ್ಯ ಸದಸ್ಯರಿಗೇ ಆಗಿರಬಹುದು. ನಮಗೆ ಯಾವ ರೀತಿಯ ಗೊಂದಲ ಅಥವಾ ಕನ್‌ಫ್ಯೂಷನ್ ಆಗಿಲ್ಲ. ಎಲ್ಲೂ ಯಾವ ರೀತಿಯಾದ ಅನ್ತವ್ಯನ್ತತೆ (ಕನ್‌ಫ್ಯೂಷನ್) ಎನ್ನುವುದು ಇಲ್ಲ. ಆ ರೀತಿ ಹೇಳತಕ್ಕದ್ದು ಸರಿಯಲ್ಲ. ಇದರಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡುವುದು ತಮ್ಮ ಬಳಿ ಬಂದು ಅಧಿಕಾರಿಗಳು ಬಂದು ಹೇಳುವ ಮಾತುಗಳನ್ನು ಕೇಳಬೇಡಿ. ಅವರು ಎಲ್ಲವನ್ನೂ ಜೊತೆಯಲ್ಲಿ ಸೇರಿಸಿ ಹೇಳಿಬಿಡುತ್ತಾರೆ. ಮತ್ತು ತಮಗೆ ಅವರು ಹೇಳುವ ಎಲ್ಲ ವಿಚಾರಗಳನ್ನೂ ಕೇಳಿ ತಿಳಿದು ಕೊಳ್ಳಲು ಅವಕಾಶ ಕೂಡ ಇರುವುದಿಲ್ಲ. ಅದರಿಂದ ಇದರಲ್ಲೇನೋ ಸತ್ಯ ಇರಬಹುದು ಎಂದು ನಂಬುತ್ತೀರಿ. ಇಲ್ಲ ಎಲ್ಲವನ್ನೂ ಕೂಲಂಕಷವಾಗಿ ನೋಡಿದರೆ ಅವರು ಹೇಳುವುದು ನಿಮಗೆ ಸರಿಯಾಗಿಲ್ಲ ಎನ್ನುವುದು ಗೊತ್ತಾಗುತ್ತದೆ.

ಇನ್ನು ಮೂರನೇ ದರ್ಜೆ ಆಫೀಸರುಗಳ ಐ. ಎಸ್. ಎಸ್. ಲಿನ್ನು ಬಗ್ಗೆ ಕೆಲವರು ಇಲ್ಲಿ ಹೇಳಿದರು. ಹೈದರಾಬಾದು ವರ್ಗದವರು ಮೇಲೆ ಇರಬೇಕಾದವರನ್ನು ಕೆಳಗೆ ಇರುವಂತೆ ಮಾಡಿದ್ದಾರೆ. ಮತ್ತು ಕೊಡಗು ಕಡೆಯಿಂದ ಬಂದ ಅಧಿಕಾರಿಗಳನ್ನು ಕೆಳಗೆ ಮಾಡಿದ್ದಾರೆ ಮತ್ತು ಮುಂಬಯಿ ಕರ್ಣಾಟಕದವರು ನಮಗೇನೂ ಮಾಡಿಲ್ಲ, ನಾವು ಎಲ್ಲಿ ಇದ್ದೆವೋ ಅಲ್ಲೇ ನ್ಯಾಯವಾಗುವಂತೆ ಮಾಡಿದ್ದಾರೆ, ಹಳೆಯ ಮೈಸೂರಿನ ಭಾಗದವರು ನಮ್ಮ ಮೇಲೆ ಬಂದಿದ್ದಾರೆ ಎಂದೆಲ್ಲ ಹೇಳುತ್ತಿದ್ದಾರೆ. ಈ ರೀತಿಯಾಗಿ ಆಗಲು ಕಾರಣ ಹೈದರಾಬಾದು ಭಾಗದಲ್ಲಿ ಬೇರೆ ರೂಲ್ಸುಗಳು ಕೊಡಗಿನಲ್ಲಿ ಬೇರೆ ರೀತಿಯಾದ ರೂಲ್ಸುಗಳು ಹೀಗೆ ವಿಧವಿಧವಾಗಿದ್ದುದರಿಂದ ಇವರಲ್ಲಿ ತೊಂದರೆಗಳಾಗಿದ್ದವು. ಅಗ್ರಿಮೆಂಟು ಪ್ರಕಾರ ಯಾವ ರೀತಿಯಾಗಿ ಮಾಡಬೇಕೆಂದು ಇತ್ತೋ ಅದರಂತೆ ಮಾಡರಾಗಿದೆ, ಇದರಲ್ಲಿ ಯಾವ ತರಹದ ತೊಂದರೆಗಳನ್ನು ಮಾಡಿಲ್ಲ. ಆದರೂ ಇಲ್ಲಿ ಇಂಜಿಸ್ಟಿಸ್ ಆಗಿದೆ ಎನ್ನುವುದನ್ನು ಹೈಕೋರ್ಟಿನಲ್ಲೂ ಚಾರೆಂಜು ಮಾಡಿದರು. ಹಳೆಯ ಮೈಸೂರಿನವರೂ ಅದೇ ರೀತಿ ಕೋರ್ಟಿಗೆ ಹೋಗಿದ್ದಾರೆ. ಇದರಲ್ಲಿ ಯಾವುದು ಸರಿ ಯಾವುದು ತಪ್ಪು ಎನ್ನುವುದನ್ನು ಅವರ ತೀರ್ಮಾನ ಬಂದಮೇಲೆ ನೋಡೋಣ ಈಗ ಐ.ಎಸ್.ಎಸ್. ಲಿನ್ನು ಬಗ್ಗೆ ಅನ್ಯಾಯವಾಗಿದೆ ಎಂದು ಹೈಕೋರ್ಟಿಗೆ ಮೂರನೇ ದರ್ಜೆ ಅಧಿಕಾರಿಗಳೂ ಹೋಗಿದ್ದಾರೆ. ಎರಡನೇ ದರ್ಜೆ ಅಧಿಕಾರಿಗಳೂ ಹೋಗಿದ್ದಾರೆ. ಮೊದಲನೇ ದರ್ಜೆ ಹುದ್ದೆಯ ಅಧಿಕಾರಿಗಳೂ ಹೋಗಿದ್ದಾರೆ. ಕೋರ್ಟಿನವರೂ ಏನು ನಿರ್ಣಯ ಮಾಡುತ್ತಾರೆ ಮುಂದೆ ನೋಡೋಣ. ಆದರೆ ಇದರಲ್ಲಿ ಜಾತೀಯತೆಯನ್ನು ವಿಲನ ಮಾಡಿ ಇಲ್ಲಿ ಹೇಳುತ್ತಾರೆ. ಅದು ಸರಿಯಲ್ಲ ಯಾರಿಗಾದರೂ ಅನ್ಯಾಯವಾಗಿದೆ ಎಂದು ಹೇಳಿದರೆ ಅದನ್ನು ಸರಕಾರ ಏನು ಮಾಡುವುದಕ್ಕೆ ಸಾಧ್ಯ ? ಆದುದರಿಂದ ನಾನು ಇಲ್ಲ ವಿನಂತಿ ಮಾಡುವುದು ಬೇರೆ ಜನಗಳು ಬಂದು ಹೇಳುತ್ತಾರೆ ಎಂದು ಹೇಳುವುದಕ್ಕಿಂತ ಎಲ್ಲಿಯಾದರೂ ಇಂತಹ ಕಡೆಗಳಲ್ಲಿ ನ್ಯಾಯ ದೊರಕಿಲ್ಲ ಅನ್ಯಾಯಗಳಾಗಿವೆ ಎಂದು ನನ್ನ ಕಡೆಗೆ ತೆಗೆದುಕೊಂಡು ಬನ್ನಿ. ನಾನು ಆಗ ಅದರ ಪೂರ್ತಿ ವಿವರಗಳನ್ನು ತಮಗೆ ಕೊಡುತ್ತೇನೆ. ಇಲ್ಲ ಬರೀ ಊಹೆಯ ಮೇಲೆ ಮಾತುಗಳನ್ನು ಹೇಳಬೇಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಮ್ಮ ಕಾರುಣ್ಯದ ಮೇರೆಯೇ ಇದೆ ಎಂದು ತೋರುತ್ತೆ. ಜಾನ್‌ಸನ್‌ನಂತೆ ಆಗಿಹೋದರೇನು !

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ಕರುಣೆಯೇನೂ ಇಲ್ಲ., ಎಲ್ಲ ತಮ್ಮ ಮೇರೆ ಇದೆ. ಜಾನ್‌ಸನ್ ನಂತೆ ನಾನು ತಮಗೆ ಕೇಳುವುದಕ್ಕೆ ಹೋಗುತ್ತಿಲ್ಲ. ಅವೆಲ್ಲಾ ನಮಗೇ ಸೇರಿದ್ದು.

ಇನ್ನು ಎಕ್ಸ್‌ಪೆರಿಮೆಂಟೇಷನ್ನು ವಿಚಾರವಾಗಿ ಇಲ್ಲಿ ಹೇಳಿದರು. ಈಗ ಕೆಲವು ಕಡೆ ಹೊಸ ಎಕ್ಸ್‌ಪೆರಿಮೆಂಟುಗಳನ್ನು ಮಾಡಬೇಕೆಂದು ಕೆಲಸಗಳು ನಡೆಯುತ್ತಿವೆ. ಏಕೆಂದರೆ, ಒಳ್ಳೆಯ ಶಿಕ್ಷಣವನ್ನು ಕೊಡುವಾಗ ಜನಕ್ಕೆ ತೊಂದರೆಯಾಗಬಾರದು ಎಂದು ಈಗಿರುವ ಶಿಕ್ಷಣ ಪದ್ಧತಿ ಬದಲಾವಣೆಯಾಗಬೇಕು, ಅದು ಯಾವರೀತಿಯಾಗಬೇಕು ನಮ್ಮ ದೇಶದಲ್ಲಿ ಅದಕ್ಕೆ ಹೇಗೆ ಹೊಂದಿಕೊಳ್ಳಬೇಕು ಎನ್ನುವುದರ ಬಗ್ಗೆ ನಾವು ತಕ್ಕ ಸಂಶೋಧನಗಳನ್ನು ನಡೆಸಬೇಕು., ಅದನ್ನು ಯಾವ ರೀತಿ ನಡೆಸಿದರೆ ಮಕ್ಕಳಿಗೆ ಚೆನ್ನಾಗಿ ಶಿಕ್ಷಣ ಕೊಡುವುದಕ್ಕೆ ಸಾಧ್ಯ ಎನ್ನುವುದನ್ನು ಮಾಡಲು ನಾವು ಎಕ್ಸ್‌ಪೆರಿಮೆಂಟು ಮಾಡಲೇ ಬೇಕಾಗುತ್ತದೆ. ಅಖಿಲ ಭಾರತ ಮಟ್ಟದಲ್ಲಿಯೂ ಎಕ್ಸ್‌ಪೆರಿಮೆಂಟು ಮಾಡುತ್ತಿದ್ದಾರೆ. ಅದರಂತೆ ಮೈಸೂರು ರಾಜ್ಯದಲ್ಲೂ ಎಕ್ಸ್‌ಪೆರಿಮೆಂಟು ಮಾಡಬೇಕೆಂದು ಸೂಚನೆ ಬಂದಿರುವುದರಿಂದ ಕೇಂದ್ರ ಸರ್ಕಾರದ ಆದೇಶದಂತೆ ಇಲ್ಲೂ ಎಕ್ಸ್‌ಪೆರಿಮೆಂಟು ಮಾಡಲೇ ಬೇಕಾಗುತ್ತದೆ.

(ಶ್ರೀ ಎಸ್. ಆರ್. ಕಂಠಿ)

ಪಠ್ಯ ಪುಸ್ತಕಗಳ ವಿಷಯದಲ್ಲಿ ಮಾತನಾಡುತ್ತಾ, ಬಹಳ ಜನ ಸದಸ್ಯರುಗಳು ವರ್ಷೇ ವರ್ಷೇ ಪುಸ್ತಕಗಳನ್ನು ಬದಲಾಯಿಸುತ್ತೇವೆ ಎಂದು ತಿಳಿದುಕೊಂಡ ಹಾಗೆ ಕಾಣುತ್ತದೆ, ಹಾಗೆ ನಾವು ಬದಲಾಯಿಸುವುದಿಲ್ಲ. ಡಿ. ಪಿ. ಐ. ಅವರಾಗಲೀ ಯಾರೇ ಆಗಲಿ ಏನೂ ಮಾಡುವುಕಾಗುವುದಿಲ್ಲ, ನ್ಯೂಟಿನಿ ಮಾಡತಕ್ಕ ಕಮಿಟಿಯಲ್ಲಿ ಮಾರ್ಕ್ಸ್ ಹಾಕುತ್ತಾರೆ ಅದರ ಪ್ರಕಾರ ಎ. ಬಿ. ಸಿ. ಡಿ. ಅಂತ ಹೇಳಿ ಮಾಡುತ್ತಾ ಇದ್ದೇವೆ ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ಮಾಡುವುದಕ್ಕಾಗುವುದಿಲ್ಲ. ಬ್ರಿಟಿಷರ ಕಾಲದಲ್ಲಿ ಒಂದು ಮಾತು ಇತ್ತು; ಅದೇನೆಂದರೆ, ಐ. ಸಿ. ಎಸ್. ಆಫೀಸರು ಎಂದರೆ ಜನ ಈ ರೀತಿ ಅವರ ವಿಷಯದಲ್ಲಿ ಹೇಳುತ್ತಾ ಇದ್ದರು :

Once he forms an impression he never changes that impression, ಎಂದು. ಅವರು ಯಾವುದಾದರೂ ಒಂದು ಇಂಪ್ರೆಷನ್ ಮಾಡಿಕೊಂಡು ಬಿಟ್ಟರೆ ಅದನ್ನು ಅವರು ಬದಲಾವಣೆ ಮಾಡುವುದು ಸಾಧ್ಯವೇ ಇಲ್ಲ. ಕಂಠಿ ಕೆಟ್ಟವ ಎಂದು ಒಮ್ಮೆ ಅವರಿಗೆ ಭಾವನೆ ಬಂದರೆ, ಕಂಠಿ ಯಾವಾಗಲೂ ಕೆಟ್ಟವನೇ. ಸ್ವಾಭಾವಿಕವಾಗಿ ಐ. ಸಿ. ಎಸ್. ಆಫೀಸರು ಎಂದರೆ ಆಗಿನ ಕಾಲದಲ್ಲಿ ಅಂತಹ ಒಂದು ಅಭಿವ್ಯಾಯ ಇತ್ತು. ಬ್ರಿಟಿಷರ ಕಾಲದ ಐ.ಸಿ.ಎಸ್. ಅಧಿಕಾರಿಗಳ ಹಾಗೆ ಈಗ ನಮ್ಮ ನನ್ ಮಾನ್ಯ ಸದಸ್ಯರು ಏನಾದರೂ ಒಂದು ಇಂಪ್ರೆಷನ್‌ನ್ನು ಮಾಡಿಕೊಂಡರೆ ನಾನೇನು ಮಾಡಲಿ ! ಆ ಐ. ಸಿ. ಎಸ್. ಅಧಿಕಾರಿಗಳ ಹಾಗೆ ನನ್ನಾನ್ಯ ಸದಸ್ಯರು ಆಗಬೇಡಿ ಎಂದು ಹೇಳುತ್ತಾ ಇದ್ದೇನೆ. ಪಠ್ಯಪುಸ್ತಕಗಳನ್ನು 3 ವರ್ಷಕ್ಕೊಮ್ಮೆ ಬದಲಾವಣೆ ಮಾಡುತ್ತೇವೆ ಎಂದು ನಾನು ಹೇಳುತ್ತಾ ಇದ್ದರೂ ಕೂಡ ಒಂದು ವರ್ಷಕ್ಕೇ ಡೇಂಜ್ ಮಾಡುತ್ತೀರಿ ಎಂದು ತಾವು ಹೇಳಿದರೆ ನಾನು ಯಾವ ದೇವರಿಗೆ ಮೊರೆ ಹೋಗಲು ಸ್ವಾಮಿ !

ಮಾನ್ಯ ಸದಸ್ಯರು ಎಜುಕೇಷನ್ ಡಿಪಾರ್ಟ್‌ಮೆಂಟಿನಲ್ಲಿ ಪಾಲಿಟಿಕ್ಸ್ ಇದೆ ಎಂದು ಹೇಳಿದರು. ಪಾಲಿಟಿಕ್ಸ್ ಇದ್ದರೆ ಇಂಥಲ್ಲಿ ಇದೆ ಎಂದು ಹೇಳಿ, ಅದನ್ನು ತೆಗೆಯೋಣ. ಎಲ್ಲೋ ಒಂದು ಕಡೆ ಪಾಲಿಟಿಕ್ಸ್ ಯಾರಾದರೂ ಮಾಡಿದರೆ ಇಡೀ ಡಿಪಾರ್ಟ್‌ಮೆಂಟನ್ನೇ ಡ್ಯಾಂ ಮಾಡುವುದು ಸರಿಯಲ್ಲ.

ಶಾಲೆಗಳಲ್ಲಿ ಶಿಕ್ಷಕರು ಇಲ್ಲ ಎಂದು ಹೇಳಿದ್ದಾರೆ. ರಾಜಕೀಯ ಅಥವಾ ಜಾತೀಯತೆ ಭಾವನೆ ಎಲ್ಲದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಿದರೆ ಅದನ್ನು ಸರಿಪಡಿಸುವುದಕ್ಕೆ ತಯಾರಾಗಿದ್ದೇನೆ. ನೂಕ್ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಎಷ್ಟೋ ಕಡೆ ಜಾತ್ಯಾತೀತವಾದ ನಿರ್ಣಯವನ್ನು ತೆಗೆದುಕೊಂಡಿದ್ದರೂ ಕೂಡ ಅದಕ್ಕೆ ಜಾತೀಯತೆಯ ಬಣ್ಣ ಬಳಿಯುವುದು ಸರಿಯಲ್ಲ. ಶಾಲೆಗಳಲ್ಲಿ ಶಿಕ್ಷಕರು ಇಲ್ಲ ಎಂದು ಹೇಳಿದರು, ಕೆಲವು ಕಡೆ ಇಲ್ಲ ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ಅದನ್ನು ಸರಿ ಮಾಡೋಣ. ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಫೀಜನ್ನು ತೆಗೆದುಕೊಳ್ಳುತ್ತಾರೆ. ಅಲ್ಲೇನಾದರೂ ಜಾತಿ ಇದ್ದರೆ ಅದು ದುಡ್ಡಿನ ಜಾತಿ ಅಷ್ಟೇ ಹೊರತು ಅದು ಬಿಟ್ಟು ಬೇರೆ ಇಲ್ಲ.

ಶ್ರೀ ಕೆ. ಲಕ್ಕಪ್ಪ.—ತುಮಕೂರಿನಲ್ಲಿ ಏಕೆ ಸ್ಟಾರ್ಟ್ ಮಾಡಲಿಲ್ಲ; ದಾವಣಗೆರೆಯಲ್ಲಿ ಸ್ಟಾರ್ಟ್ ಮಾಡಿದಿರಿ !

ಶ್ರೀ ಎಸ್. ಆರ್. ಕಂಠಿ.—ನಾನು ಒಂದು ಮಾತು ಹೇಳುತ್ತೇನೆ. ಯಾವುದಾದರೂ ಒಂದು ಕಾರ್ಪೊರೇಜನ್ನು ಒಬ್ಬ ಮಿನಿಷ್ಟರು ಓಪನ್ ಮಾಡುವುದಕ್ಕೆ ಹೋದರೆ ಆ ಕಾರ್ಪೊರೇಜನ್ನು ಅವರೇ ಮಾಡಿಸಿದ್ದು ಎಂದು ಹೇಳುವುದು ಸರಿಯಲ್ಲ. ಹೈನ್ಯೂಲನ್ನು ಓಪನ್ ಮಾಡುವುದಕ್ಕೆ ಹೋಗಿದ್ದೆ. ಹಾಗಾದರೆ ನಾನೇ ಆ ಹೈನ್ಯೂಲನ್ನು ಸ್ಥಾಪನೆ ಮಾಡಿದ ಹಾಗೆ ಆಯಿತೇ ! ಹಾಗೆ ಹೇಳುವುದು ಸರಿಯಲ್ಲ.

Autonomy of the Universityಯನ್ನು ಸರ್ಕಾರದವರು ಲಕ್ಷಿಸಿಲ್ಲ ಎಂದು ಹೇಳಿದರು. ಉದಾಹರಣೆಯನ್ನು ಹೇಳಿದರೆ ಅದನ್ನು ಒಪ್ಪಿಕೊಳ್ಳುತ್ತೇನೆ. ಆಕ್ಟ್ ಇದೆ. ಆಕ್ಟ್‌ನ ಕೆಳಗೆ ಕೆಲವು ಅಧಿಕಾರಗಳು ಸರ್ಕಾರದವರಿಗೆ ಇದೆ. ಆ ಅಧಿಕಾರಗಳನ್ನು ಉಪಯೋಗಿಸಿದ್ದೇ ಆದರೆ ಅದು ಅಟಾನಮಿ ಆಫ್ ದಿ ಯೂನಿವರ್ಸಿಟಿಯಲ್ಲಿ ಕೈ ಹಾಕಿದ ಹಾಗೆ ಆಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕರ್ನಾಟಕ ಯೂನಿವರ್ಸಿಟಿ ಆಕ್ಟ್‌ಗೆ ಒಂದು ಅಮೆಂಡ್‌ಮೆಂಟನ್ನೂ ತರಲಿಲ್ಲ, ಮೈಸೂರು ಯೂನಿವರ್ಸಿಟಿಗೆ ಎಷ್ಟು ಅಮೆಂಡ್‌ಮೆಂಟುಗಳನ್ನು ತಂದಿದ್ದೀರಿ ತಾವೇ ನೋಡಿ !

ಶ್ರೀ ಎಸ್. ಆರ್. ಕಂಠಿ.—ಮೈಸೂರು ಯೂನಿವರ್ಸಿಟಿಗೆ ಅಮೆಂಡ್‌ಮೆಂಟ್ ತಂದವನು ನಾನಲ್ಲ. ಎಲ್ಲ ಮಾನ್ಯ ಸದಸ್ಯರಿಗೂ ಆ ಅಧಿಕಾರ ಇದೆ, ಆದ್ದರಿಂದ ಅದನ್ನು ತಂದಿದ್ದಾರೆ. ಅದು ಡರ್ಟಿಯಾಗಿ ಅಂಗೀಕಾರವಾಗಿರುವುದರಿಂದ ನಾನೇನೂ ಆ ವಿಷಯದಲ್ಲಿ ಹೇಳಿಲಕ್ಕೆ ಬರುವುದಿಲ್ಲ.

ಪ್ರೈಮರಿ ಎಜ್ಯುಕೇಷನ್ ನರಿಯಾಗಿ ನಡೆಯುತ್ತಿಲ್ಲ ಎಂಬ ಮಾತು ಸರಿಯಾದ್ದಲ್ಲ. ಅದು ಚೆನ್ನಾಗಿ ನಡೆಯುತ್ತಾ ಇದೆ ಮತ್ತು ಅದಕ್ಕೆ ಎಷ್ಟೋ ರೀತಿಯಿಂದ ಜಯ ಕೂಡ ಬಂದಿದೆ. ಕೆಲವು ತಪ್ಪುಗಳು ಇರಬಹುದು, ಎಂದ ಮಾತ್ರಕ್ಕೆ ಅದನ್ನು ಇವತ್ತು ನ್ಯಾಕ್ಯಾಫ್ ಮಾಡುವುದಕ್ಕೆ ಆಗುತ್ತದೆಯೇ ! ಇಲ್ಲ. ಈ ವಿದ್ಯಾಭ್ಯಾಸವನ್ನು ಸುಧಾರಿಸಬೇಕು. ಮಾನ್ಯ ಸದಸ್ಯರು ಈ ವಿಷಯಕ್ಕೆ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಟ್ರೈನ್ಡ್ ಟೀಚರ್ಸ್‌ನ್ನು ತೆಗೆದುಕೊಳ್ಳಬೇಕು. ಅವರು ಪ್ರತಿಯೊಂದು ಕಡೆಯಲ್ಲೂ ನರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಮಕ್ಕಳು ಸರಿಯಾಗಿ ಶಾಲೆಗೆ ಹೋಗುವಂತೆ ಮಾಡಬೇಕು, ಇಂತಹ ಸೂಚನೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಾ ಇದ್ದೇನೆ. ಇದಕ್ಕೆ ಒಂದು ಕಮಿಟಿ ನೇಮಕ ಮಾಡಿದ್ದೇವೆ. ಡಿ. ಪಿ. ಐ. ಅವರಿಗೆ ಎರಡು ತರಹದ ಪವರ್ಸ್ ಇದೆ. ಆಕೆಡೆಮಿಕ್ ಪವರ್ ಒಂದು. ಅಡ್ಮಿನ್‌ಸ್ಟ್ರೇಟೀವ್ ಪವರ್ ಇನ್ನೊಂದು. ಅಡ್ಮಿನ್‌ಸ್ಟ್ರೇಟೀವ್ ಪವರನ್ನು ಡಿಸೆಂಟ್ರಲೈಸ್ ಮಾಡಬೇಕೆಂಬ ಉದ್ದೇಶ ಇದೆ. ಎಜ್ಯುಕೇಷನ್ ಸೆಕ್ರೆಟರಿಗಳವರ ನೇತೃತ್ವದಲ್ಲಿ ಒಂದು ಕಮಿಟಿ ಮಾಡಿದೆ, ಅವರ ರಿಪೋರ್ಟ್ ಬಂದ ಮೇಲೆ ಒಂದು ಮನೂದೆಯನ್ನು ಕೂಡ ಮಾಡಬೇಕೆಂದು ಇದ್ದೇವೆ.

2-30 P.M.

ಹೊರಗೆ ಎಷ್ಟೋಜನ ಶಾರೆ ನಡೆಸುತ್ತೇವೆ, ಅವಕಾಶ ಕೊಡಿ ಎಂದು ಕೇಳುತ್ತಾರೆ, ಹೆಚ್ಚು ಶಾಲೆಗಳನ್ನು ನಡೆಸಬೇಕಾದರೆ ಇನ್‌ಸ್ಪೆಕ್ಟರುಗಳ ಸಂಖ್ಯೆ ಹೆಚ್ಚಿಸಬೇಕು, ಆದರೆ ಅದರಿಂದ ಸುಖವಿಲ್ಲ ; ಶಾಲೆಗಳು ಸರಿಯಾಗಿ ನಡೆಯುವುದಿಲ್ಲ. ಇಂದು ತಾಂಟಾಯಿತಿ ಕಮಿಟಿ, ತಾಲ್ಲೂಕು ಡೆವಲಪ್ ಮೆಂಟ್ ಕಮಿಟಿ ಮತ್ತು ಡಿಸ್ಟ್ರಿಕ್ಟ್ ಎಜುಕೇಷನ್ ಬೋರ್ಡುಗಳಿಗೆ ಅಧಿಕಾರ ಕೊಡಬೇಕೆಂದು ಸರಕಾರದವರು ಯೋಚನೆ ಮಾಡಿದ್ದಾರೆ.

ಕನ್ನಡ ಮಾಧ್ಯಮದ ವಿಚಾರ. ಹೈಸ್ಕೂಲಿನ 10ನೆಯ ತರಗತಿಯವರೆಗೆ ಕನ್ನಡ ಮಾಧ್ಯಮ ಒತ್ತಾಯವಾಗಿ ಜಾರಿಯಲ್ಲದೆ, ಬೇಡವೆಂದು ಹೇಳುವವರು ಬೇರೆ ಮಾಡಿಯಂ ತೆಗೆದುಕೊಳ್ಳಬಹುದು, ಅದರೆ ಅದಕ್ಕೆ ಅವಕಾಶವಿರಬೇಕು. ಹಿಂದಿಯನ್ನು ಒತ್ತಾಯವಾಗಿ ಕಲಿಸುತ್ತಿದ್ದೇವೆ. ಬೇಕಾದಷ್ಟು ಶಿಕ್ಷಕರನ್ನು ಹೆಚ್ಚಿಸಿದ್ದೇವೆ.

ಶ್ರೀ ಡಿಮೆಲೋರವರು ಆಂಗ್ಲೋ-ಇಂಡಿಯನ್ ಶಾಲೆಗಳ ಭವಿಷ್ಯದ ವಿಚಾರ ಹೇಳಿದರು. ಅವು ನಡೆಯಬಾರದೆಂದು ಯಾರೂ ಹೇಳಿಲ್ಲ, ನಡೆಸಲು: ಅದರೆ ಅವರಿಗೆ ಹಿಂದಿದ್ದ ಅನುಕೂಲ ಮುಂದೆಯೂ ಇರಬೇಕೆಂದು ಸಲಹೆಮಾಡಿದ್ದಾರೆ. ಅದಕ್ಕೆ ಬಹುಶಃ 337 ಆರ್ಟಿಕರ್ ಅನ್ವಯ ವಾಗುತ್ತದೆ. ಅದರ ಪ್ರಕಾರ ಇರುವ ಅನುಕೂಲವನ್ನು ಕಳೆಯುವುದಕ್ಕಾಗುವುದಿಲ್ಲ. ಆರ್ಟಿಕರ್ 30ರ ಪ್ರಕಾರ ಅಲ್ಪ ಸಂಖ್ಯಾತರಿಗೆ ರಕ್ಷಣೆ ಕೊಡಬೇಕೆಂದು ಹೇಳಿದರು. ಆದರೆ ಆರ್ಟಿಕರ್ 337 ಮತ್ತು ಆರ್ಟಿಕಲ್ 30ಕ್ಕೂ ವೈತ್ಯಾಸವಿದೆ. ಆರ್ಟಿಕರ್ 30ರ ಪ್ರಕಾರ ರಕ್ಷಣೆ ಕೊಡಲು ನರಕಾರ ಸಿದ್ಧವಾಗಿದೆ. ಆದರೆ ಎರಡು ಆರ್ಟಿಕಲ್ಲುಗಳ ಪ್ರಕಾರವೂ ರಕ್ಷಣೆ ಕೊಡಬೇಕೆಂದು ಹೇಳುವುದು ನರಿಯಲ್ಲ. ಅವರು ಬೇಕಾದರೆ ಈ ವಿಚಾರವನ್ನು ಯಾರಾದರೂ ರಾಯರನ್ನು ಕೇಳಿ ತಿಳಿದು ಕೊಳ್ಳಲಿ. ಆಂಗ್ಲೋ ಇಂಡಿಯನ್ಸ್‌ಗೆ ಆರ್ಟಿಕರ್ 30ರ ಪ್ರಕಾರ ಅನುಕೂಲಮಾಡಿಕೊಡುವುದನ್ನು ಪರ್ಯಾರೋಚಿಸಬಹುದು. ಆಗ್ಲೋ ಇಂಡಿಯನ್ಸ್‌ಗೆ ಎಸ್.ಎಸ್.ಎರ್.ಸಿ. ಪರೀಕ್ಷೆ ನಡೆಸುತ್ತಿದೆ, ನಮ್ಮದೇ ಆದ ಒಂದು ರೀತಿಯಲ್ಲ ಅದನ್ನು ನಡೆಸರಾಗುತ್ತಿದೆ, ಬೇಕಾದ ಹಾಗೆ ಅವರು ಫೀಜನ್ನು ವಸೂಲುಮಾಡುತ್ತಾರೆ, ಬೇಕಾದ ಟೆಕ್ಸ್‌ಟ್‌ಬುಕ್ಸ್ ಅವರಿಗೆ ಇವೆ, ಇಂಡಿಯನ್ ಸ್ಕೂಲಿನ ಸರ್ಟಿಫಿಕೇಟ್ ಪರೀಕ್ಷೆಗಳಿಗೆ ಕೂಳಿತುಕೊಳ್ಳುತ್ತಾರೆ, ಅದೆರಾ ನರಿಯೇ. ಆದರೆ ಮೈನೂರು ರಾಜ್ಯದಲ್ಲರುವ ಲಕ್ಷಾಂತರ ವಿದ್ಯಾರ್ಥಿಗಳಿಗೆ ಯಾವ ಸೌಲಭ್ಯವಿದೆಯೋ ಅದಕ್ಕಿಂತ ಹೆಚ್ಚು ಸೌಲಭ್ಯ ರಕ್ಷಣೆ ಆಂಗ್ಲೋ ಇಂಡಿಯನ್ ಸ್ಕೂಲುಗಳ ವಿದ್ಯಾರ್ಥಿಗಳಿಗೇಕೆ ಕೊಡಬೇಕು ! ಈ ದಿವನ ನಮ್ಮ ರಾಜ್ಯದಲ್ಲಿ ಎರಡು ಲಕ್ಷ ವಿದ್ಯಾರ್ಥಿಗಳು ಎಸ್.ಎಸ್.ಎರ್.ಸಿ. ಪರೀಕ್ಷೆಗೆ ಕೂಡುವಾಗ ಆಂಗ್ಲೋ ಇಂಡಿಯನ್ ಸ್ಕೂಲು ಗಳಿಂದ ಸುಮಾರು 800ರಿಂದ 1,000 ದವರೆಗೆ ಮಾತ್ರ ವಿದ್ಯಾರ್ಥಿಗಳು ಕುಳಿಕೊಳ್ಳುತ್ತಾರೆ. ಇಷ್ಟು ಅಲ್ಪ ಸಂಖ್ಯೆಯವರಿಗೆ ಹೆಚ್ಚು ರಕ್ಷಣೆ ಬೇಕೆಂದರೆ ಏನು ಹೇಳಬೇಕು ? ಅಲ್ಲದೆ ಆಂಗ್ಲೋ ಇಂಡಿಯನ್ ಹೈಸ್ಕೂಲುಗಳನ್ನು ಆಂಗ್ಲೋ ಇಂಡಿಯನ್ ಕಮ್ಯೂನಿಟಿಯವರಿಗೆ ನಡೆಸುವುದಾದರೆ ಅದರಲ್ಲಿ ಸ್ವಲ್ಪ ಅರ್ಥವಿದೆ. ಅದರೆ ಆ ಶಾಲೆಗಳಲ್ಲಿ ಸೇಕಡ 97 ಮಂದಿ ಇತರ ಕಮ್ಯೂನಿಟಿಗಳವರೇ ಇರುತ್ತಾರೆ, ಇದನ್ನು ತಿಳಿಯಬೇಕು. ನಮ್ಮ ಹುಡುಗ ಕಾನ್‌ವೆಂಟಿಗೆ ಹೋಗುತ್ತಿದ್ದರೆ ಅಥವಾ ಆಂಗ್ಲೊ ಇಂಡಿಯನ್ ಹೈಸ್ಕೂಲಿಗೆ ಹೋಗುತ್ತಿದ್ದರೆ ಅವನಿಗೇಕೆ ಹೆಚ್ಚು ಅನುಕೂಲ ಮಾಡಿಕೊಟ್ಟು ಇತರ ಹೈಸ್ಕೂಲುಗಳಿಗೆ ಹೋಗುವವರಿಗೆ ಮಾಡಿಕೊಡದೆ ಇರಬೇಕು ! ರಾಜ್ಯಂಗದ ಪ್ರಕಾರ ರೆಕಗ್‌ನೈಜ್ ಮಾಡಬೇಕು, ಅದರ ಪ್ರಕಾರ ರಕ್ಷಣೆ ಏನು ಕೊಡಬಹುದೋ ಅದನ್ನು ಕೇಳಬಹುದು. ಆಂಗ್ಲೋ

(ಶ್ರೀ ಎಸ್. ಆರ್. ಕಂಠಿ)

ಇಂಡಿಯನ್ ಕಮ್ಯೂನಿಟಿಗೆ ರಕ್ಷಣೆ ಕೇಳುತ್ತಿಲ್ಲ, ಆ ಕಮ್ಯೂನಿಟಿಯವರು ನಡೆಸುವ ಹೈಸ್ಕೂಲುಗಳಿಗೆ ರಕ್ಷಣೆ ಕೇಳುತ್ತಿದ್ದಾರೆ. ಮೈಸೂರು ಸರಕಾರ ಯಾವುದೇ ರೀತಿಯಿಂದ ತೊಂದರೆ ಮಾಡಬೇಕೆಂದಿಲ್ಲ, ರಾಜ್ಯಂಗದ ಪ್ರಕಾರ ನಡೆದುಕೊಳ್ಳಲು ನಿದ್ದವಾಗಿದ್ದೇವೆ. ಅಂಗ್ಲೋ ಇಂಡಿಯನ್ ಕಮ್ಯೂನಿಟಿಗೆ ಬೇಕಾದ ಅನುಕೂಲ ಮಾಡಿಕೊಳ್ಳಬಹುದು.

ಉಪಧ್ಯಾಯರ ವರ್ಗದ ವಿಚಾರವಾಗಿ ಅಣ್ಣಾರಾಯರು ಎರಡು ಮಾತು ಹೇಳಿದ್ದಾರೆ. ಹೋದ ವರ್ಷ ಒಂದು ಸರ್ಕ್ಯುಲರ್ ಕಳಿಸಿತ್ತು, ಅದರಲ್ಲಿ ಹೆಚ್ಚಿನ ವಿಷಯವೇನೂ ಇಲ್ಲ, ಸರಕಾರಿ ಆರ್ಡರುಗಳೇನಿದ್ದವೋ ಅವುಗಳನ್ನೆಲ್ಲಾ ಕನ್‌ಸಾಲಿಡೇಟ್ ಮಾಡಿ ಒಂದು ಸರ್ಕ್ಯುಲರ್ ಕಳಿಸಿತ್ತು. ಬಹಳ ದಿವಸ ಮನೆಮಠ ಮಾಡಿಕೊಂಡು ಒಂದೇ ಕಡೆ ಉಪಾಧ್ಯಾಯರು ಇರಬಾರದು, ಹಾಗಿದ್ದರೆ ವೆಸ್ಟೆಡ್ ಇಂಟರೆಸ್ಟ್ ಬರುತ್ತದೆ ಅದುದರಿಂದ ಬೇರೆ ತಾಲ್ಲೂಕಿಗೆ, ಬೇರೆ ಕಡೆಗೆ ವರ್ಗಮಾಡಬೇಕೆಂದು ಅದರಲ್ಲಿ ಇದೆ. ಆದರೆ ಅದು ಹೈದರಾಬಾದು ಕರ್ಣಾಟಕದ ಉಪಾಧ್ಯಾಯರಿಗೆ ಮಾತ್ರ ಸಂಬಂಧ ಪಟ್ಟಿದೆ ಎಂದು ತಿಳಿದಿದ್ದರೆ ಅದು ತಪ್ಪು, ಅದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದೆ. ಯಾರೋ ಕಾರಕೂನ ಆ ಸರ್ಕ್ಯುಲರಿನಮೇಲೆ ಟ್ರಾನ್ಸ್‌ಫರ್ ಆಫ್ ಟೀಚರ್ಸ್ ಇನ್ ಹೈದರಾಬಾದ್ ವಿರುದ್ಧ ಎಂದು ಬರೆದಿರುವುದು ಈ ಗೊಂದಲಕ್ಕೆ ಕಾರಣವಾಗಿದೆ, ಅದು ಆ ಸರ್ಕ್ಯುಲರನ್ನು ತೆಗೆದು ಕಾರ ಕೂನನ ತಪ್ಪು. ತಾಲ್ಲೂಕುಗಳಲ್ಲಿರುವ ಮುನ್ನೂರು ಉಪಾಧ್ಯಾಯರುಗಳನ್ನು ಒಂದೇ ದಿನದ ಹೊತ್ತು ಹಾಕಬೇಕೆಂಬ ಅಭಿಪ್ರಾಯವಿಲ್ಲ. ಆದುದರಿಂದ ಹೈದರಾಬಾದು ಪ್ರದೇಶದವರಾಗಲಿ ಅಥವ ಯಾರೋ ಆಗಲಿ ಆಕ್ಷೇಪಣೆ ಮಾಡುವುದಕ್ಕೆ ಕಾರಣವಿಲ್ಲ.

ಇನ್ನು ಪರೀಕ್ಷೆಗಳ ವಿಚಾರ. ಪರೀಕ್ಷೆಗಳಿಗೇಕೆ ಇಷ್ಟು ಮಹತ್ವ ಕೊಡಬೇಕೆಂದು ಶ್ರೀ ಅಣ್ಣಾ ರಾಯರು ಕೇಳಿದರು. ಮುಂಬಯಿ ರಾಜ್ಯದಲ್ಲಿ ಆ ಸಂಬಂಧವಾದ ಒಂದು ವರದಿ ಇದೆಯೆಂದು ಹೇಳಿದರು. ಅಲ್ಲೊಂದೇ ಕಡೆ ಅಲ್ಲ, ಕೇರಳ ಮದ್ರಾಸು ಮುಂತಾದ ಕಡೆಗಳಲ್ಲೆಲ್ಲಾ ಅಂಥ ವರದಿ ಗಳಿವೆ. ಆದರೆ ಅವು ಕಪಾಟಿನಲ್ಲಿವೆ. ಅದರಿಂದೇನೂ ಪ್ರಯೋಜನವಾಗಿಲ್ಲ, ಎಲ್ಲಾ ಕಡೆಯೂ ಪರೀಕ್ಷೆ ಮಾಡುವ ರೀತಿ ಒಂದೇ ಆಗಿದೆ. ಆದರೆ 1962ರಲ್ಲಿ ಪರೀಕ್ಷಾಪ್ರಶ್ನೆ ಪತ್ರಿಕೆಗಳ ಲೀಕೇಜ್ ಆಯ್ತು. ಆ ರೀತಿ ಇನ್ನುಮುಂದಾಗಬಾರದು ಎಂದು ಕೆಲವು ಬದಲಾವಣೆಗಳನ್ನು ಮಾಡಿದ್ದೇವೆ. ಇದೇ ರೀತಿ ಎರ್.ಎಸ್. ಪರೀಕ್ಷೆಗೆ ಕೂಡ ಮಾಡಿದ್ದೇವೆ. ಅದರ ಪ್ರಕಾರ ಸಂಬಂಧಪಟ್ಟವರನ್ನೆಲ್ಲಾ ಇಲ್ಲಗೇ ಕರೆಸಿ ಉತ್ತರ ಬರೆದಿರುವ ಪುಸ್ತಕಗಳನ್ನು ಒಂದೇ ಕಡೆ ತಪಾಸುಮಾಡುವಂತೆ ಸರಕಾರ ತಿಳಿಸಿದೆ, ಇದು ಸರಿಯಾದ ವ್ಯವಸ್ಥೆ ಎಂದು ನಾನು ಭಾವಿಸಿದ್ದೇನೆ. ಅದೇ ಹಿಂದೆ ಬೇರೆ ಊರು ಗಳಲ್ಲಿರುವ ಎಗ್ಜಾಮಿನರ್ಸ್ ಹತ್ತಿರಕ್ಕೆ ಉತ್ತರ ಬರೆದಿರುವ ಪೇಪರುಗಳು ಕರೆಕ್ಷನ್ನಿಗೆ ಹೋದಾಗ ಅವರ ಹತ್ತಿರ ಆರು ತಿಂಗಳವರೆಗೆ ಅವು ಉಳಿಯುತ್ತಿದ್ದವು, ಅದರಿಂದ ಏನಾದರೂ ಮಾಡುವುದಕ್ಕೆ ಸಾಧ್ಯವಿತ್ತು. ಅಂದರೆ ತಂದೆತಾಯಿಗಳು ಅಥವಾ ಬೇರೆಯವರು ಅಥವಾ ವಿದ್ಯಾರ್ಥಿಗಳು ಹೋಗಿ ಬೇಕಾದ ಬದಲಾವಣೆ ಮಾಡಿಸಿಕೊಳ್ಳುವುದಕ್ಕೆ ಸಾಧ್ಯವಿತ್ತು. ಆದುದರಿಂದ ಪೇಪರುಗಳನ್ನೆಲ್ಲಾ ಇಲ್ಲಿಗೇ ತರಿಸಿ ಕರೆಕ್ಷನ್ ಒಂದೇ ಕಡೆ ಮಾಡುವುದೇ ಸರಿಯಾದ ಮಾರ್ಗವೆಂದು ಹಾಗೆ ಮಾಡಿದ್ದೇವೆ. ಮೊದಲು ಶಿಕ್ಷಕರು ತಮ್ಮ ಮನೆಯಲ್ಲಿ ಪೇಪರ್ ತಪಾಸು ಮಾಡುವ ಕಾಲದಲ್ಲಿ ಅವರ ಹತ್ತಿರ ಯಾರು ಯಾರೋ ಬಂದು ನಮ್ಮ ಹುಡುಗನ ನಂಬರು ಇಷ್ಟು ಇದೆ, ಅವನು ಪಾಸು ಆಗುವ ಹಾಗೆ ಮಾಡಿ ಎಂದು ಹೇಳುವುದಕ್ಕೆ ಅವಕಾಶವಿದ್ದಿತು. ಈಗ ಹೊಸ ಪದ್ಧತಿ ಬಂದ ಮೇಲೆ ಅದಕ್ಕೆ ಅವಕಾಶವಿಲ್ಲ. ತಪಾಸು ಮಾಡುವುದಕ್ಕೆ ಯಾವ ಪೇಪರು ಬರುತ್ತದೆ ಎಂಬುದು ಎಗ್ಜಾಮಿನರಿಗೇನೇ ಗೊತ್ತು ಇರುವುದಿಲ್ಲ. ಆದುದರಿಂದ ಈ ಹೊಸ ಸಿಸ್ಟಂ ಒಳ್ಳೆಯದಾಗಿದೆ.

ಇನ್ನು ಎಂಜನಿಯರಿಂಗ್ ಕಾಲೇಜುಗಳ ವಿಚಾರ. ಶ್ರೀ ಸಿದ್ದಯ್ಯ ಕಾಶೀಮಠ ಮತ್ತು ಶ್ರೀ ಜಿ. ಎ. ಗೌಡ ಅವರು ಈ ವಿಚಾರ ಮಾತನಾಡಿದರು. ನಾನು ಒಂದು ಮಾತು ಹೇಳುತ್ತೇನೆ. I compare it with a baby which is not a creation of Government. Why should the Government take it and foster it? ಈ ಕಾಲೇಜುಗಳನ್ನು ಸರಕಾರ ಏತಕ್ಕೆ ತೆಗೆದುಕೊಳ್ಳಬೇಕು? ಸರಕಾರದ ಆರ್ಥಿಕ ಪರಿಸ್ಥಿತಿ ನೋಡಿದರೆ ಈ ಕಾಲೇಜುಗಳನ್ನು ತೆಗೆದುಕೊಳ್ಳುವುದು ಸಾಧ್ಯವಿಲ್ಲ. ಪ್ರೈಮರಿ ಮತ್ತು ಸೆಕೆಂಡರಿ ಎಜ್ಯುಕೇಷನ್ ಟ್ರೈನಿಂಗ್ ಇವು ಗಳಿಗೆ ಸರಕಾರ ಮಹತ್ವ ಕೊಡಬೇಕಾಗಿದೆ. ಆದುದರಿಂದ ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು ತೆಗೆದುಕೊಳ್ಳುವುದು ಸರಕಾರಕ್ಕೆ ಸಾಧ್ಯವಿಲ್ಲ. ಈ ವಿಚಾರದಲ್ಲಿ ನಾವು ಒಂದು ಕೆಲಸ ಮಾಡಿದ್ದೇವೆ. ಕ್ಯಾಪಿಟೇಷನ್ ತೆಗೆದುಕೊಳ್ಳುವ ಆರು ಕಾಲೇಜುಗಳಲ್ಲಿ ಐದು ಕಾಲೇಜುಗಳನ್ನು ಸರಕಾರದ ಅಧೀನಕ್ಕೆ ಮಹಿಸಿಕೊಡಲು ಸಿದ್ಧರಿದ್ದಾರೆ. ಆರ್ಥಿಕ ಸಹಾಯ ಮಾಡಿದರೆ ಬರುತ್ತೇವೆ ಎಂದು ಹೇಳಿದ್ದಾರೆ. ಈ ವಿಚಾರ ಕೇಂದ್ರ ಸರಕಾರಕ್ಕೆ ತಿಳಿಸಿದ್ದೇವೆ. ಅವರಿಂದ ಇನ್ನೂ ಉತ್ತರ

ಬಂದಿಲ್ಲ. ಬೆಂಗಳೂರಿನ ಒಂದು ಕಾಲೇಜು ಮಾತ್ರ ಯಾವದಕ್ಕೂ ಇನ್ನೂ ಉತ್ತರ ಕೊಟ್ಟಿಲ್ಲ. ಉಳಿದ ನಲ್ಲ ನನ್ಮಾನ್ಯ ಸದಸ್ಯರಿಗೆ ಈ ವಿಚಾರದಲ್ಲಿ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಸರಕಾರಕ್ಕೆ ಇದೆ. ಆದರೆ ಕೇಂದ್ರ ಸರಕಾರದ ಸಹಾಯವಿಲ್ಲದೆ ನಮಗೆ ಏನನ್ನೂ ಮಾಡುವುದಕ್ಕಾಗುವುದಿಲ್ಲ. ಇನ್ನೊಂದು ನಮ್ಮದು ಸ್ವಂತ ವಿಚಾರ ಒಂದು ಇದೆ. ಅದೇನೆಂದರೆ, ಪ್ರತಿ ವರ್ಷ 100 ಕ್ಕೆ 10 ರಷ್ಟು ಸೀಟ್ಸ್ ನರಕಾರ ಪೂರ್ ಮಾಡಿ ತೆಗೆದುಕೊಳ್ಳೋಣ ಅಂದರೆ 10 ವರ್ಷಗಳಲ್ಲಿ ಕ್ಯಾಪಿಟೇಷನ್ ಸೀಟ್ಸ್ ಕೊಡುವುದು ಎರ್ಲಾ ನಿಂತುಹೋಗುತ್ತದೆ. ಇದನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಇದನ್ನು ಇನ್ನೂ ವಿಚಾರ ಮಾಡಬೇಕಾಗಿದೆ.

ಬೆಂಗಳೂರು ಯೂನಿವರ್ಸಿಟಿ ವಿಚಾರದಲ್ಲಿ ಕೇಂದ್ರ ಸರಕಾರವನ್ನು ಕೇಳಿಕೊಂಡಿದ್ದೇವೆ. ಎಜ್ಯುಕೇಷನ್ ಕಮಿಟಿ ರಿಪೋರ್ಟ್ ಕೊಟ್ಟ ಮೇಲೆ ನಮ್ಮ ಪತ್ರದ ವಿಚಾರ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಕೆಲವು ಕಾಲದ ವರೆಗೆ ನಾವು ತಡೆಯಬೇಕಾಗುತ್ತದೆ. ಆ ರಿಪೋರ್ಟ್ ಬಂದ ಮೇಲೆ ಮತ್ತೆ ಕೇಂದ್ರ ಸರಕಾರವನ್ನು ಅಪ್ರೋಚ್ ಮಾಡುತ್ತೇವೆ.

No principle is evolved for deputation of teachers for M.A. and M.Sc. ಎಂದು ಶ್ರೀ ಜಿ. ಎ. ಗೌಡ ಅವರು ಒಂದು ಮಾತು ಹೇಳಿದರು. ಒಂದು fool-proof method ಕಂಡುಹಿಡಿಯುವುದಕ್ಕೆ ನಾನು ಅವರ ಜೊತೆಗೆ ಕುಳಿತುಕೊಳ್ಳಲು ಸಿದ್ಧನಿದ್ದೇನೆ. ಒಂದು ಒಳ್ಳೇ ಸ್ಕೀಂ ಹಾಕಿ ನಮಗೆ ಕೊಡಬೇಕು ಎಂದು ಅವರನ್ನು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಸರಕಾರ ಕೂಡ ಬಹಳ ವಿಚಾರ ಮಾಡಿದೆ. ಒಂದು ಯೂನಿವರ್ಸಿಟಿಯಲ್ಲಿ ಪಡೆದ ಮಾರ್ಕ್ಸ್, ಇನ್ನೊಂದು ಯೂನಿವರ್ಸಿಟಿಯಲ್ಲಿ ಪಡೆದ ಮಾರ್ಕ್ಸ್ ಒಡನೆ ಹೋಲಿಕೆ ಮಾಡುವುದಕ್ಕಾಗುವುದಿಲ್ಲ. ಕನಿಷ್ಠ ಐದು ವರ್ಷ ಅಂಥವರು ಟೀಚರ್ ಆಗಿರಬೇಕು ಎಂದು ಮಾಡಿದ್ದೇವೆ. ಅವರ ಮಾರ್ಕ್ಸ್ ಹೋಲಿಕೆ ಮಾಡಿದೆ ಉಳಿದ ರಿಕಾರ್ಡ್ಸ್ ನೋಡುತ್ತೇವೆ.

Uniform fees for all the colleges to be evolved, ಇದರ ಬಗ್ಗೆ ಗವರ್ನಮೆಂಟ್ ಏನೂ ಮಾಡುವುದಕ್ಕಾಗುವುದಿಲ್ಲ. ಫೀಜು ಎಷ್ಟು ಕೊಡಬೇಕು ಎಂಬುದನ್ನು ಯೂನಿವರ್ಸಿಟಿ ಗೊತ್ತು ಮಾಡುತ್ತದೆ. ಇದು ಯೂನಿವರ್ಸಿಟಿ ಕೈಯಲ್ಲಿರುತ್ತದೆ. ಫೀಜ್ ವಿಚಾರದಲ್ಲಿ ಒಂದೂವರೆ ಅಷ್ಟು ಫೀಜ್ ಮಾಡಿರುವುದರಿಂದ 90 ರೂಪಾಯಿ ಇರುವ ಕಡೆ 120 ರೂಪಾಯಿ ಒಂದು ಕಡೆ 144 ರೂಪಾಯಿ ಇನ್ನೊಂದು ಕಡೆ ಆಗುತ್ತದೆ. ಇದರ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲ.

ಇನ್ನು ನರಕಾರದ ಗ್ರಾಂಟ್ ಇನ್ ಎಡ್ ಬೇರೆ ಬೇರೆ ಸಂಸ್ಥೆಗಳಿಗೆ ಬೇರೆ ಬೇರೆಯಾಗಿದೆ. There is no tiger anywhere, ಯಾರೂ ಭಯಪಡಬೇಕಾಗಿಲ್ಲ. ಸುಮ್ಮನೆ ಗಲಾಟೆ ಮಾಡುತ್ತಾರೆ. ಯುನಿಫಾರ್ಮಿಟಿ ಸೆಕಂಡರಿ ಎಜ್ಯುಕೇಷನ್ನಿನಲ್ಲಿ ಮಾಡಿದ್ದೇವೆ. ಸ್ಪೆಷರ್ ಎಜ್ಯುಕೇಷನ್ನಿಗೆ ಮಾಡುತ್ತೇವೆ. ಎಂಜಿನಿಯರಿಂಗ್ ಕಾಲೇಜ ಬಗ್ಗೆ ಪ್ರೊಪೋನರ್ಸ್ ಬಂದಿವೆ.

ಇನ್ನು midday meals scheme ಬಗ್ಗೆ ಹೇಳುವುದಾದರೆ, ಕೇರ್ ಸಂಸ್ಥೆಯವರು ಸಹಾಯ ಮಾಡುವುದಕ್ಕೆ ಮುಂಚೆ 5 ಲಕ್ಷ ರೂಪಾಯಿ ಖರ್ಚು ಮಾಡರಾಗುತ್ತಿತ್ತು; ಜನರು ಕೂಡ ದಾನ ಕೊಡುತ್ತಿದ್ದರು. ಕೇರ್ ಸಂಸ್ಥೆಯವರು ಒಂದು ಕೋಟಿ ರೂಪಾಯಿ ಮೌಟೇರಿಯರ್ಸ್ ಕೊಡುತ್ತಾರೆ. ಆದುದರಿಂದ ಇಂಥ ಉತ್ತಮ ಸ್ಕೀಂ ಬಿಡುವುದಕ್ಕಾಗುವುದಿಲ್ಲ. ಇದರಲ್ಲಿ ಏನಾದರೂ ಅಡಚಣೆ ಕೊಂದರೆ ಇರುವುದನ್ನು ನರಿಪಡಿಸಬೇಕಾಗುತ್ತದೆ.

ಇನ್ನು ಲಬರರ್ ಸ್ಕಾಲರ್‌ಷಿಪ್ ಫಾರ್ ಗರ್ಲ್ಸ್ ಬಗ್ಗೆ (Liberal Scholarship for Girls) ಹೇಳಿದರು. ಅದನ್ನು ಮಾಡಬೇಕೆಂದು ನರಕಾರದ ಮನಸ್ಸಿನಲ್ಲಿ ಇದೆ.

Single teacher schools to be abolished ಬಗ್ಗೆ ಹೇಳಿದರು. ಇದನ್ನು ಮಾಡಿದರೆ ಮುಗಿದೇ ಹೋಯಿತು. ನಮ್ಮ ರಾಜ್ಯದಲ್ಲಿ 3000 ಸಿಂಗರ್ ಟೀಚರ್ ಸ್ಕೂರ್ಸ್ ಇವೆ. ನಣ್ಣ ಹಳ್ಳಿಗಳಲ್ಲಿ ಇಬ್ಬರು ಮೂವರು ಟೀಚರ್ಸ್ ಇರುವುದಕ್ಕಾಗುವುದಿಲ್ಲ. ಅಂಥಲ್ಲಿ ಒಬ್ಬ ಟೀಚರ್ ಇರುತ್ತಾನೆ. ಈ ಸ್ಕೂಲುಗಳು ಬಹಳ ಉಪಯುಕ್ತವಾಗಿವೆ. ಅದುದರಿಂದ ತೆಗೆಯುವುದಕ್ಕಾಗುವುದಿಲ್ಲ. ಇದರಲ್ಲಿಯ ದೋಷದೋಷಗಳನ್ನು ಬಹು ಮುಟ್ಟಿಗೆ ನರಿಪಡಿಸಲಾಗುತ್ತಿದೆ.

ಕೊನೆಯದಾಗಿ ಒಂದು ಮಾತು ಹೇಳಲು ಬಯಸುತ್ತೇನೆ. ಅದೇನೆಂದರೆ, ಕಳೆದ ನಾಲ್ಕು ವರ್ಷಗಳಲ್ಲಿ ಯಾವ ಯಾವ ಕೆಲಸವಾಗಿದೆ ಎಂಬುದನ್ನು ಹೇಳಬೇಕಾಗಿದೆ. ಇದುವರೆಗೆ ಹೇಳಿರುವ ಹಾಗೆ ಇನ್ನು ದೋಷ ದೋಷಗಳ ಬಗ್ಗೆ ಮಾತನಾಡುವುದಿಲ್ಲ. ಯಾವುದೇ ಒಂದು ಸ್ಕೀಂ ನಲ್ಲ ದೋಷದೋಷಗಳು ಇದ್ದೇ ಇರುತ್ತವೆ. ಆದುದರಿಂದ ಅವುಗಳನ್ನು ನರಿ ಮಾಡುವ ರೀತಿಯಲ್ಲಿ ಮಾತ

(ಶ್ರೀ ಎಸ್. ಆರ್. ಕಂಠಿ)

ನಾಡಬೇಕು. ಆದರೆ ಆ ಸ್ಕೀಂ ಅನ್ನೇ ತೆಗೆದು ಹಾಕಿ ಎಂದು ಹೇಳುವುದು ಒಳ್ಳೆಯದಲ್ಲ. ಕಳೆದ ನಾಲ್ಕು ವರ್ಷ ಕಾಲದಲ್ಲಿ ಸರಕಾರ ಮಾಡಿದ ಕೆಲಸಗಳ ಒಂದು ಪಟ್ಟಿ ತಯಾರು ಮಾಡಿದ್ದೇನೆ. ಒಂದೊಂದು ಕೆಲಸ ಓದಿ ಹೇಳುತ್ತೇನೆ :—

ಟ್ರೈಪರ್ ಬೆನಿಫಿಟ್ ಸ್ಕೀಂ ಮಾಡಿದೆ.

ಮುಂದಿನ ವರ್ಷದಿಂದ ಸೆಕೆಂಡರಿ ಎಜ್ಯುಕೇಷನ್ ಪೂರ್ಣವಾಗಿ ಫ್ರೀ ಮಾಡುತ್ತೇವೆ. ಇದುವರೆಗೆ ವಾರ್ಷಿಕ ಆದಾಯ 2400 ರೂಪಾಯಿ ಇರುವವರಿಗೆ ಫ್ರೀ ಮಾಡಿದೆ.

Expansion of Primary and Secondary Education. ಇದು 1961 ಆಗಸ್ಟ್ ದಿಂದ ಪ್ರಾರಂಭವಾಯಿತು. ಪ್ರೈಮರಿ ಎಜ್ಯುಕೇಷನ್ ಕಂಪಲ್ಸರಿ ಮಾಡಿದ ಮೇರೆ ಈಗ ಸುನೂತ್ರವಾಗಿ ಒಳ್ಳೇ ರೀತಿಯಿಂದ ಕೆಲಸ ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿ ಪ್ರತಿಯೊಂದು ಊರಿನಲ್ಲಿ ಒಂದು ಸ್ಕೂಲು ಇದೆ ಎಂಬ ಸ್ಥಿತಿ ಉಂಟಾಗಿದೆ. ಇನ್ನು ಸೆಕೆಂಡರಿ ಎಜ್ಯುಕೇಷನ್ ವಿಚಾರದಲ್ಲಿ ಕೂಡ 1960-61ನೇ ಸಾಲಿನಲ್ಲಿ 778 ಸ್ಕೂಲುಗಳಿದ್ದವು. ಈಗ 1490 ಸ್ಕೂಲುಗಳಿವೆ.

Expansion of Training facilities ಜಾಸ್ತಿಯಾಗಿದೆ. ಈಗಾಗಲೆ ಬೆಂಗಳೂರಿನಲ್ಲಿ 2 ಟ್ರೈನಿಂಗ್ ಕಾರೇಜುಗಳು ಆಗಿವೆ. Propagation of development of Hindi ಇದರಲ್ಲಿ ಸೀನಿಯರ್ ಪ್ರೈಮರಿ ಟೀಚರ್ಸ್‌ಗಳನ್ನಾಗಿ 4375 ಜನರನ್ನು ತೆಗೆದುಕೊಂಡಿದ್ದೇವೆ. ಹೈಸ್ಕೂಲಿಗಾಗಿ 350 ಟೀಚರ್‌ಗಳನ್ನು ತೆಗೆದುಕೊಂಡಿದ್ದೇವೆ. 60 to 70 per cent of Senior Primary Schools have been covered—High Schools almost all High School are covered. Establishment of Bangalore University. Introduction of XI Standard—ಇದರ ಬಗ್ಗೆ ಬಹಳ ಜನ far and against ಆಗಿ ಹೇಳಿದ್ದೀರಿ. ಆದರೆ ಬಹಳ ಜನ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ನನ್ನ ಮಟ್ಟಿಗೆ ಹೇಳುವುದಾದರೆ ಇದು ಬಹಳ ಚೆನ್ನಾಗಿ ನಡೆಯುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗೂ ಬಹಳ ಅನುಕೂಲವಾಗಿದೆ. ಈಗಾಗಲೆ 106 ಹೈಸ್ಕೂಲುಗಳಲ್ಲಿ ಇಂಪ್ರೂವ್‌ಮೆಂಟ್ ಮಾಡಿದ್ದೇವೆ. ಮುಂದಿನ ವರ್ಷ ಇನ್ನೂ ಜಾಸ್ತಿ ಮಾಡಬೇಕೆಂದಿದ್ದೇವೆ. State Institute of Education—ಇದು ಧಾರವಾಡದಲ್ಲಿ ಇದೆ. State Institute of Science ಇದನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡಿದ್ದೇವೆ. Sainik School—ಇದಕ್ಕಾಗಿ ಈಗಾಗಲೆ 45 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಡವನ್ನು ಕಟ್ಟಿಸುತ್ತಿದ್ದೇವೆ. Two Hindi Shikshak Training Colleges—ಒಂದನ್ನು ಬೆಂಗಳೂರಿನಲ್ಲೂ ಇನ್ನೊಂದು ಬಾಗಲ್‌ಕೋಟೆಯಲ್ಲೂ ಕಟ್ಟಿಸಿದ್ದೇವೆ. Starting of another Women's Polytechnic—ಇದನ್ನು ನಡೆಸುತ್ತಿದ್ದೇವೆ. Starting of two more B.Ed. Colleges, Fine Arts School. Introduction of Midday Meals in Primary School—ಇದಕ್ಕಾಗಿ 35 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಕೇರ್ ಸಂಸ್ಥೆಯವರು 4 ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಖರ್ಚುಮಾಡಿದ್ದಾರೆ. Nationalisation of Text Books—ಈಗಾಗಲೆ 348 ಪುಸ್ತಕಗಳನ್ನು nationalise ಮಾಡಿದ್ದೇವೆ.

Free distribution of text books ಇದನ್ನು ಈಗಾಗಲೆ ಮಾಡುತ್ತಿದ್ದೇವೆ. ಪ್ರೈಮರಿ ಸ್ಕೂಲುಗಳಲ್ಲಿ 100ಕ್ಕೆ 25 ಹುಡುಗರಿಗೆ Free Text Books ಕೊಡುತ್ತಿದ್ದೇವೆ. ದೇಶದಾದ್ಯಂತ 3 ನೇ ವರ್ಷದಲ್ಲಿ ಕೊಡುತ್ತಿದ್ದೇವೆ. ಹಳೆಯ ಮೈಸೂರಿನಲ್ಲಿ ಜಾಸ್ತಿ ಕೊಡುತ್ತಿದ್ದೇವೆ. Establishment of Text Book Printing Press. ಮೈಸೂರಿನಲ್ಲಿ ಒಂದನ್ನು ಸ್ಥಾಪನೆ ಮಾಡಿದ್ದೇವೆ. ಹೋದ ವರ್ಷ ಇದಕ್ಕಾಗಿ 5-6 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ವರ್ಷದಲ್ಲಿ ಮತ್ತು ಮುಂದಿನ ವರ್ಷದಲ್ಲಿ ಇದಕ್ಕಾಗಿ 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಅಂದಾಜು ಮಾಡಿದ್ದೇವೆ. ಮತ್ತು ಇದಕ್ಕಾಗಿ ಒಂದು ಜಪಾನ್ ಪ್ರೆಸ್ಸನ್ನು ಸ್ಥಾಪಿಸಲು ಪ್ರಯತ್ನ ಮಾಡುತ್ತಿದ್ದೇವೆ. ಮತ್ತು ಒಂದು ಜರ್ಮನ್ ಪ್ರೆಸ್ ಸಹ ಬರುತ್ತದೆ. ಸಧ್ಯಕ್ಕೆ ಅದು ಇನ್ನೂ ಫೈನಲೈಸ್ ಆಗಿಲ್ಲ. ಅಂತೂ ಬರುತ್ತದೆ. Establishment of two Branch Printing Presses ಇದರಲ್ಲಿ ಒಂದನ್ನು ಧಾರವಾಡದಲ್ಲಿ ಮತ್ತೊಂದನ್ನು ಗುಲ್ಬರ್ಗದಲ್ಲಿ 16 ಲಕ್ಷ ಮತ್ತು 10 ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಸ್ಥಾಪನೆ ಮಾಡಿದ್ದೇವೆ. ಆರು ಜೂನಿಯರ್ ಟೆಕ್ನಿಕಲ್ ಸ್ಕೂಲುಗಳನ್ನು ಸ್ಥಾಪನೆ ಮಾಡಿದ್ದೇವೆ. ಅಲ್ಲದೆ ಆರು Pre-Vocational School ಗಳನ್ನು ಸ್ಥಾಪನೆ ಮಾಡಿದ್ದೇವೆ. Students Welfare Fund ಎಂದು ಮಾಡಿದ್ದೇವೆ. ಇದಕ್ಕಾಗಿ 8

ಲಕ್ಷ ರೂಪಾಯಿಗಳನ್ನು ಕೊಡಿಸಿದ್ದೇವೆ. 3 ಲಕ್ಷ ರೂಪಾಯಿಗಳನ್ನು ವಿದ್ಯಾರ್ಥಿಗಳಿಗಾಗಿ ಖರ್ಚು ಮಾಡಿದ್ದೇವೆ, ಈ ಫಂಡನ್ನು ಹೈಸ್ಕೂಲುಗಳಲ್ಲೂ ಮಾಡುತ್ತಿದ್ದೇವೆ. ಈಗಾಗಲೆ 700 ಹೈಸ್ಕೂಲು ಗಳಲ್ಲಿ ಮಾಡುತ್ತಿದ್ದಾರೆ. 11,200 ಬುಕ್ ಬ್ಯಾಂಕ್‌ಗಳನ್ನು ಸ್ಥಾಪನೆ ಮಾಡಿದ್ದೇವೆ. ಇನ್ನೂ 500 ಹೈಸ್ಕೂಲುಗಳನ್ನು ಮುಂದಿನ ವರ್ಷ ಕವರ್ ಮಾಡುತ್ತೇವೆ.

Teachers Benefit Fundನ್ನು ಸೇರಿಸುತ್ತಿದ್ದೇವೆ. ಈಗಾಗಲೆ 7 ಲಕ್ಷ ರೂಪಾಯಿಗಳಾ ಗಿದೆ. ಅಲ್ಲದೆ ಈಗಾಗಲೆ 59 ಜನ ಉಪಾಧ್ಯಾಯರುಗಳಿಗೆ ಹಣ ಸಹಾಯ ಮಾಡಿದ್ದೇವೆ. ಯಾರಾ ದರೂ ಸತ್ತು ಹೋದರೆ, ಅವರ ಮನೆಯವರು ಕಷ್ಟದಲ್ಲಿದ್ದರೆ ಅವರಿಗೆ ಹಣ ಸಹಾಯ ಮಾಡುತ್ತೇವೆ. ಯಾರಾದರೂ ಬಹಳ ಕಷ್ಟದಲ್ಲಿದ್ದರೆ ಅಂತಹವರಿಗೆ ಹಣ ಸಹಾಯ ಮಾಡುತ್ತೇವೆ. ಇದಕ್ಕಾಗಿ ಅನೇಕ ಅರ್ಜಿಗಳು ಬಂದಿವೆ. 1966—67ರಲ್ಲಿ 200 ಜನರಿಗೆ ಈ Teachers Benefit Fundನಿಂದ ಹಣ ವನ್ನು ಕೊಡಬೇಕೆಂದು ಮಾಡಿದ್ದೇವೆ. ಇದರ ಕ್ರಮವೆಂದರೆ ನದ್ಯಕ್ಕೆ ಒಬ್ಬರಿಗೆ ಒಂದು ಸಾರಿ ಮಾತ್ರ ಕೊಡುತ್ತೇವೆ. 30ರಿಂದ 100 ರೂಪಾಯಿಗಳವರೆಗೆ ಬೇರೆ ಬೇರೆ ರೀತಿ ಹಣ ಸಹಾಯ ವನ್ನು ಕೊಟ್ಟಿದ್ದೇವೆ, ಅವರವರ ಸ್ಟಾಂಡರ್ಡ್ ನೋಡಿಕೊಂಡು, 50ರಿಂದ 60 ರೂಪಾಯಿಗಳವ ರೆಗೆ ಕೊಟ್ಟಿದ್ದೇವೆ. ಅವರವರ ಸ್ಟೇಟಸ್ ನೋಡಿಕೊಂಡು 100 ರೂಪಾಯಿಗಳವರೆಗೆ ಕೊಟ್ಟಿದ್ದೇವೆ. ಮೊನ್ನೆ ಒಬ್ಬರು ಕಾಲೇಜ್ ಲೆಕ್ಚರರ್ ಸತ್ತಾಗ, ಅವರ ಮನೆಯವರಿಗೆ 100 ರೂಪಾಯಿಗಳನ್ನು ಕೊಟ್ಟಿದ್ದೇವೆ. The reorganisation of the three Academies (a) Sangeet Natak Academy, (b) Lalita Kala Academy, (c) Sahitya Academy. ಸಂಗೀತದಲ್ಲಿ 6 ಜನರಿಗೆ ಪ್ರತಿಷ್ಠಿಯನ್ನು ಕೊಡುತ್ತಿದ್ದೇವೆ. ಇದೇ ವರ್ಷದಿಂದ ಲಲಿತಕಲೆಯು 4 ಜನರಿಗೆ ಮತ್ತು ಸಾಹಿತ್ಯ ಕಲೆಯು 4 ಜನರಿಗೆ ಕೊಡಬೇಕೆಂದು ಮಾಡಿದ್ದೇವೆ. ನಮ್ಮ ಶ್ರೇಷ್ಠ ಸಾಹಿತಿಗಳಾದ, ಶ್ರೇಷ್ಠ ಕವಿಗಳಾದ ಕುವೆಂಪು ಕೆ. ಎ. ಪುಟ್ಟಪ್ಪನವರಿಗೆ ನಾವು ರಾಷ್ಟ್ರಕವಿ ಎಂಬ ಬಿರುದನ್ನು ಕೊಟ್ಟಿದ್ದೇವೆ. ಇದಕ್ಕೆಅವರು ಅತ್ಯಂತ ಯೋಗ್ಯರಾದವರು ಎಂದು ತಿಳಿದುಕೊಂಡಿ ದ್ದೇವೆ. ಅವರ ಜೀವಮಾನದವರೆಗೆ ಪ್ರತಿ ತಿಂಗಳು 500 ರೂಪಾಯಿಗಳನ್ನು ಆನರರಿಯಮ್ ಆಗಿ ಕೊಡಬೇಕೆಂದು ಇದೆ. ಅವರು ಕನ್ನಡ ಸಾಹಿತ್ಯದಲ್ಲಿ ಅಪಾರಸೇವೆ ಸಲ್ಲಿಸಿದ್ದಾರೆ. ಇನ್ನು ಮುಂದೂ ಸಹ ಅದನ್ನು ಮುಂದುವರೆಸಿಕೊಂಡು ಹೋಗುತ್ತಾರೆಂದು ಆಶಿಸುತ್ತೇವೆ. Reorganisation of the selling emporia in respect of text books ಬೇರೆ ಬೇರೆ ಎಂಪೋರಿಯಮ್‌ಗಳನ್ನು ತೆರೆದಿದ್ದೇವೆ.

A new order respecting supply of wood for school buildings and residential quarters for teachers ಒಂದು ಸ್ಕೂಲು ಕಟ್ಟಡಕ್ಕೆ ಬೇಕಾದರೆ ಮರಗಳನ್ನು ಕೊಡಬೇಕು, ಶಿಕ್ಷಕರಿಗೆ ಮನೆ ಕಟ್ಟಿಸಿಕೊಳ್ಳುವುದಕ್ಕೆ ಒಂದು ಸಾವಿರ ರೂಪಾಯಿವರೆಗೆ ಕೊಡ ಬೇಕೆಂದು ಮಾಡಿದ್ದೇವೆ. S.S.L.C. Board Bill ಮಾಡಿದ್ದೇವೆ. Public Libraries Act ಮಾಡಿದ್ದೇವೆ. ಇದು ಮೇ ತಿಂಗಳಿನಿಂದ ಜಾರಿಗೆ ಬರುತ್ತದೆ. Establishment of a committee to go into the establishment of District Education Boards ಇದನ್ನು ಕೂಡ ಮಾಡಿದ್ದೇವೆ. ಇನ್ನು ಒಂದೆರಡು ತಿಂಗಳ ಅವಧಿಯಲ್ಲಿ ಅವರು ರಿಪೋರ್ಟ್ ಕೊಡು ತ್ತಾರೆ. Punitive Cut and Bonus Scheme ಮಾಡಿದ್ದೇವೆ. ಈ ಬೋನಸ್ ಸ್ಕೀಮನ್ನು ಹಿಂದೆ 14 ಜನರಿಗೆ ಕಟ್ ಮಾಡಿದ್ದಾರೆಂದು ಶ್ರೀಮಾನ್ ನೂರ್ಯನಾರಾಯಣರಾವ್ ಅವರು ಹೇಳಿದರು ಇದೇ ರೀತಿ ಅನೇಕ ಜನಗಳು ದೂರುಗಳನ್ನು ಕೊಟ್ಟಿದ್ದಾರೆ. ಚೆನ್ನಾಗಿ ರಿಸರ್ವ್ ಬರದಿದ್ದರೆ ಈ ರೀತಿ ಮಾಡುತ್ತೇವೆ. ಈಗ ಮೈನೂರಿನಲ್ಲಿ ಬಹಳ ಸಂಖ್ಯೆಯಲ್ಲಿ ಪಾಸಾಗುತ್ತಿದ್ದಾರೆ. ಕೋಆಪ ರೇಟಿವ್ ಸ್ಕೀಂ ಮಾಡಿಕೊಂಡು ಚೆನ್ನಾಗಿ ನಡೆಸುತ್ತಿದ್ದಾರೆ. ಅದರ ಪರಿಣಾಮವಾಗಿ ರಿಜರ್ವ್. ಚೆನ್ನಾಗಿ ಬರುತ್ತಿದೆ. ರಿಜರ್ವ್ ಚೆನ್ನಾಗಿದ್ದರೆ ಬೋನನ್ನನ್ನು ಮತ್ತೆ ಕೊಡುತ್ತೇವೆ. ಚೀನರಸಿಪುರ ದಲ್ಲಿ 1963—64ನೇ ಸಾಲಿನಲ್ಲಿ ರಿಜರ್ವ್ ಕಮ್ಮಿ ಬಂದಿದೆಯೆಂದು ಬೋನಸ್ ಕಟ್ ಆಯಿತು. 1964—65ರಲ್ಲಿ ಎಲ್ಲಾ ಹುಡುಗರು ಕಷ್ಟಪಟ್ಟು ಓದಿದರಿಂದ 66 ಪರ್‌ಸೆಂಟ್ ರಿಜರ್ವ್ ಆಯಿತು. ಆಗ ಆ ಸ್ಕೂಲಿನವರು ಬಂದು ಕೇಳಿದರು, 1963—64ರಲ್ಲಿ ರಿಜರ್ವ್ ಸರಿಯಾಗಿ ಬರಲಿಲ್ಲವೆಂದು ಬೋನಸ್ ಕಟ್ ಮಾಡಿದಿರಿ, 1964-65ರಲ್ಲಿ ರಿಜರ್ವ್ ಚೆನ್ನಾಗಿ ಬಂದಿದೆ, ಮತ್ತೆ ಬೋನಸ್ ಏಕೆ ಕೊಡಬಾರದು ಎಂದು ಕೇಳಿದರು. ಅದಕ್ಕೆ ಬೋನಸ್ ಕೊಡುತ್ತೇವೆ ಎಂದು ಹೇಳಿ ಕಳಿಸಿದೆವು. Awarding the Betterment Committee ಇದು ಒಂದು ಹೊಸ ಸ್ಕೀಂ.

3-00 P.M.

Compulsory Primary Education ವಿಚಾರದಲ್ಲಿ ಯಾವ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಾರೋ ಅಂಥವರಿಗೆ ಅವಾರ್ಡ್ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಅದರೆ ಈಗ

(ಶ್ರೀ ಎಸ್. ಆರ್. ಕಂಠಿ)

ಯಾವ ಬೆಟರ್‌ಮೆಂಟ್ ಕಮಿಟಿಗಳು ಉತ್ತಮವಾದಂಥ ಕೆಲಸ ಮಾಡುತ್ತವೋ ಯಾವುದು ಉತ್ತಮ ವಾದಂಥ ಹಣವನ್ನು ಪೊರಕಸಿ ಕಂಪರ್‌ಸರಿ ಪ್ರೈಮರಿ ಎಜುಕೇಷನ್‌ಗೆ ಸಹಾಯ ಮಾಡುತ್ತಾ ಇವೆಯೋ, ಅವರಿಗೆ ಕೊಡಬೇಕು ಎಂದು ಮಾಡಿದ್ದೇವೆ. ಆ ಪ್ರಕಾರ ಎರಡು ವರ್ಷದಿಂದ ಅವಾರ್ಡ್ ಗಳನ್ನು ಸ್ಕೂರ್ ಬೆಟರ್‌ಮೆಂಟ್ ಕಮಿಟಿಗಳಿಗೆ ಕೊಡುತ್ತಾ ಇದ್ದೇವೆ. ನನ್ಮಾನ್ಯ ಸದಸ್ಯರು ಈ ಡಿಮ್ಯಾಂಡ್‌ಗೆ ಏನೂ ಕಟ್ ಮಾಡದೆ ಸಂಪೂರ್ಣ ಅನುಮತಿ ಕೊಟ್ಟು ಅದನ್ನು ಪಾಸ್ ಮಾಡುತ್ತಾರೆಂದು ಭಾವಿಸಿದ್ದೇನೆ.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಅಧ್ಯಕ್ಷರೇ, ಮಧ್ಯೆ ಮಧ್ಯೆ ಪ್ರಸ್ತಾಪ ಮಾಡಬಾರದು. ಮಾನ್ಯ ಸಚಿವರು ಈರ್ಡ್ ಆಗುವುದಿಲ್ಲ ಎಂದು ಮಧ್ಯೆ ಮಾತನಾಡಲು ಬ್ಯಾನ್ ಹಾಕಿದ್ದೀರಿ. ಸಹನೆ ಯಿಂದ ಕುಳಿತು ಮಾನ್ಯ ಮಂತ್ರಿಗಳ ಭಾಷಣ ಕೇಳಿದ್ದೇನೆ. ಮಾನ್ಯ ಮಂತ್ರಿಗಳು ನನ್ನ ಹೆಸರನ್ನು ಹೇಳಲಿಲ್ಲ. ಅದರ ಬಗ್ಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅಂಕಿ ಅಂಶಗಳನ್ನು ಕೊಡುವಾಗ ನಾನು ಹೇಳಿದೆ, ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲ ಗುರಿಯನ್ನು ಮುಟ್ಟಿದ್ದೀರೋ ಅದನ್ನು ಮಾತ್ರ ಓದುತ್ತಿದ್ದೀರಿ. ಎಲ್ಲಿ ಗುರಿ ಮುಟ್ಟಿಲ್ಲವೋ ಅದನ್ನು ಓದಲಿಲ್ಲ. ನನಗೆ ಒಂದು ದೇವಸ್ಥಾನದ ಕಥೆ ಜ್ಞಾಪಕಕ್ಕೆ ಬರುತ್ತದೆ. ಒಳಗೆ ಹೋದವರೆಲ್ಲಾ ಹೊರಗೆ ಬಂದರು ಎಂದು ಇತ್ತು. ಆದರೆ ಗುಡಿಯ ಒಳಗೆ ಹೋದವರ ಪಟ್ಟಿ ಇರಲಿಲ್ಲ. ಏಕೆಂದರೆ ಒಳಗೆ ಹೋದವರು ಹೆಚ್ಚಿಗೆ ಇದ್ದರು. ಈ ಸಭೆಯ 10 ಜನ ಮಾನ್ಯ ಸದಸ್ಯರ ಸಮಿತಿ ನೇಮಕ ಮಾಡಿ, ನಾನು chellenge ಮಾಡುತ್ತೇನೆ. ಯಾವ ಯಾವ ಸ್ಕೀಂ ನಿಷ್ಪ್ರಯೋಜಕವಾಗಿದೆ, ಎಲ್ಲೆಲ್ಲ ಫೈಲ್ ಆಗಿದೆ, ಎಲ್ಲೆಲ್ಲಿ ರಾಜಕೀಯ ಮಾಡಿದ್ದಾರೆ, ಎಲ್ಲೆಲ್ಲ ಏನು ಮಾಡಿದ್ದಾರೆ ಎನ್ನುವುದನ್ನು ನಾನು ತೋರಿಸು ಕೊಡುತ್ತೇನೆ. ಇಲ್ಲದೇ ಹೋದರೆ ತಾಪು ಕೊಟ್ಟ ಶಿಕ್ಷೆಗೆ ಗುರಿಯಾಗುತ್ತೇನೆ.

Mr. SPEAKER.—What is it that Sri Gopala Gowda is saying.

Sri S. GOPALA GOWDA.—Clarifications, Sir.

Mr. SPEAKER.—Condemning the Speaker saying that I have imposed on him something which he does not deserve, is it clarification? ಕಥೆ ಹೇಳುವುದು ಕ್ಲಾರಿಫಿಕೇಷನ್ನೇ? ತೀರ್ಥಯಾತ್ರೆಗೆ ಹೋಗುವುದು ರೆಪ್ಲು ಮಾಡುವುದು ಕ್ಲಾರಿಫಿ ಕೇಷನ್ ಆಗುತ್ತದೆಯೇ?

Sri S. R. KANTHI.—I must have a right to refute what he says.

Mr. SPEAKER.—I am prepared to give 15 minutes for all members put together for clarifications if they put the questions directly. If they want to make insinuations, open the Debate and call for a reply, I am not going to permit it. That is very clear.

ಶ್ರೀ ಎಸ್. ಗೋಪಾಲಗೌಡ.—ನಾನು ಅಂತಾದ್ದು ಮಾಡುವುದಕ್ಕೆ ಹೋಗುವುದಿಲ್ಲ.

Mr. SPEAKER.—Shall I have the sentence read over? The Hon'ble Member says that I imposed my will. He violated the rules four times. It is only for the fifth time when he violated the rules, I made my observations. That is not fair to the House. Clarifications only may be asked.

Sri S. GOPALA GOWDA.—Number of School rooms contempleted 3,865 ಆದರೆ achieved 1,000 ಎಂದು ಹೇಳಿದಿರಿ?

Sri S. R. KANTHI.—Because time was short, I was not able to refer to that. Of course school rooms which have been built at the cost of Government are 1,000 and odd. That does not mean that school buildings have not come up. They have come up at the cost of Taluk Boards. In the Plan we had put a provision of Rs. 28·60 lakhs, Out of that, we have not been able to spend much because of the emergency.

We had to say that we are not going to give any money for the school buildings. That is why we could not build at the cost of the Government. But the school rooms have been built. I can give an instance of one District like the Mandya District where 300 school rooms have been built within a period of four years. I can give the instance of Dharwar where within the last four years they have built not less than 100 school buildings. Like that every District has built school rooms and today we find far more number of rooms have been built by the Taluk Boards than 3,000 rooms.

ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ಕರ್ನಾಟಕ ರಾಜ್ಯದಲ್ಲಿ ಖಾಸಗಿಯವರು ನಡೆಸತ ಕ್ಯಂಥ ಪ್ರಾಥಮಿಕ ಶಿಕ್ಷಕರ ತರಪೇತಿ ಕಾರೇಜುಗಳಲ್ಲಿ ಫೀ ಅಲ್ಲದೆ ಹೆಚ್ಚಿಗೆ ಹಣ ಸದ'ಸ್ಕ್ರಿವ'ಷನ್ ರೂಪದಲ್ಲ ತೆಗೆದುಕೊಳ್ಳುವುದರಿಂದ ಹುಡುಗರಿಗೆ ತೊಂದರೆಯಾಗಿದೆ. ಅದಕ್ಕೋಸ್ಕರ ಸರ್ಕಾರ ದವರು ಅಲ್ಲ ಕಾರೇಜುಗಳನ್ನು ವಹಿಸಿಕೊಂಡು ಕೊಂದರೆ ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri S. R. KANTHI.—I have not received such complaints as my friend Sri Kashimath says. What I have received by way of information is that colleges are charging Rs. 144 instead of Rs. 90. They are entitled under the Rules of the University.

Sri C. J. MUCKANNAPPA.—Do Government consider the question of abolishing the post of Director of Technical Education and merge the Technical Education Department with the Collegiate Education ?

Sri S. R. KANTHI.—No, Sir.

ಶ್ರೀ ಎಸ್. ಎ. ಅಗ್ನಿಹೋತ್ರಿ (ಧಾರವಾಡ).—ಟ್ರಿಪರ್ ಬೆನಿಫಿಟ್ ಸ್ಕೀಂ ಬಗ್ಗೆ ತಾಪು ಏನೂ ಹೇಳಲಿಲ್ಲ. ಪ್ರಾಥಮಿಕ ಶಾಲಾ ಶಿಕ್ಷಕರು ರಿಟೈರ್ ಆಗಿ 20 ವರ್ಷ ಆದರೂ ಪೆನ್'ಷನ್ ಸಿಕ್ಕಿಲ್ಲ. ಅದರ ಬಗ್ಗೆ ದಯವಿಟ್ಟು ಹೇಳಬೇಕು.

ಶ್ರೀ ಎಸ್. ಆರ್. ಕಂಠಿ.—ಟ್ರಿಪರ್ ಬೆನಿಫಿಟ್ ಸ್ಕೀಂ ಬಗ್ಗೆ ಏನೂ ಹೇಳಲಿಲ್ಲ ಎಂದು ಹೇಳಿದರು. ನಾನು ಹೇಳಿದೆ ಟ್ರಿಪರ್ ಬೆನಿಫಿಟ್ ಸ್ಕೀಂ ಬಗೆ ಏನಾಗಿದೆ ಎಂದು. ಬೊಂಬಾಯಿ ಕರ್ನಾಟಕ ವಿರಿಯಾದಲ್ಲಿ ಸ್ವಲ್ಪ ತೊಂದರೆ ಬಂದಿದೆ. ತೊಂದರೆ ಏನು ಅಂದರೆ 12 ಪರ್ಸೆಂಟು ಪ್ರಾವಿಡೆಂಟ್ ಫಂಡಿನಲ್ಲಿ, 6 per cent from the teacher, 3 per cent from the management, 3 per cent from the Government ಎಂದು ಇತ್ತು. ಅಲ್ಲ ಈಗ ಸ್ವಲ್ಪ ಡಾಸ್ತಿ ಇದೆ. 125 ಪರ್ಸೆಂಟು ಇದೆ. ಅದರಿಂದ ಸ್ವಲ್ಪ ತೊಂದರೆ ಬಂದಿದೆ. ಅಕೌಂಟ್ಸ್ ಆಫೀಸರನ್ನೂ ಜಿರ್ನಾಧಿ ಕಾರಿಗಳನ್ನು ಕರೆಸಿ ಮಾತನಾಡಿ ತೊಡಕು ಇದ್ದರೆ, ಅದನ್ನು ನಿವಾರಣೆ ಮಾಡೋಣ ಎಂದು ಮಾಡಿದ್ದೇವೆ. Difficulty should not come in the way because it is in favour of teacher himself because he is paying more and the Government need not pay more than 3 per cent. ಅದನ್ನು ಮಾಡುತ್ತಾ ಇದ್ದೇವೆ. ಗಾಬರಿ ಆಗುವುದಕ್ಕೆ ಕಾರಣ ಇಲ್ಲ. ಬೊಂಬಾಯಿ ಕರ್ನಾಟಕದಲ್ಲ ಪೆನ್'ಷನ್ ಪ್ರಶ್ನೆ ಇಲ್ಲ. 1923 ಕ್ಕಿಂತ ಮುಂಡೆ ಯಾರು ಎಂಪ್ಲಾಯ್ ಆಗಿದ್ದರೋ, ಅವರಿಗೆ ಮಾತ್ರ ಪೆನ್'ಷನ್ ಇದೆ. ಅಂತಹ ಟೀಚರ್ಸ್ ಯಾರೂ ಇಲ್ಲ. ಎಲ್ಲರೂ ನತ್ತು ಹೋಗಿದ್ದಾರೆ. ಈಗ ಇರುವವರು ಬರೀ ಪ್ರಾವಿಡೆಂಡ್ ಫಂಡ್ ಟೀಚರ್ಸ್. ಅವರಿಗೆ ಪೆನ್'ಷನ್ ಪ್ರಶ್ನೆಯೇ ಇಲ್ಲ.

ಶ್ರೀ ಕೆ. ಲಕ್ಕಪ್ಪ.—ರಾಜ್ಯದಲ್ಲ ಖಾಸಗಿ ಪ್ರಾಥಶಾಲೆಗಳನ್ನು ಗ್ರಾಮಾಂತರ ಪ್ರದೇಶದಲ್ಲ ಪ್ರಾರಂಭ ಮಾಡಿರತಕ್ಕ ಸಮಯದಲ್ಲ ಮತ್ತು ಅವುಗಳ ಅಭಿವೃದ್ಧಿಗೆ ಹಣವನ್ನು ಕೊಡುವ ನಂದರ್ಭ ದಲ್ಲ ರಾಜಕೀಯ ಡಾಸ್ತಿ ಮಾಡಿರುವುದು ಮತ್ತು ಎಲ್ಲ ಪ್ರಾಥಶಾಲೆಗಳನ್ನು ನಿಮ್ಮ ಪಕ್ಷದವರು ನಡೆಸುತ್ತಾ ಇದ್ದಾರೋ ಅಲ್ಲ ಹಣ ದುರುಪಯೋಗ ಮಾಡುವ ನಂದರ್ಭವನ್ನು ಅನೇಕ ಬಾರಿ ನಭೆಯಲ್ಲ ತಮ್ಮ ಗಮನಕ್ಕೆ ತಂದಾಗ್ಯೂ ಕೂಡ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಹಾಗೆ ಕಾರ್ಯಕ್ರಮ ತೆಗೆದುಕೊಳ್ಳತಕ್ಕ ವಿಚಾರದಲ್ಲ ಈ ನಭೆಯಲ್ಲ ಏನೂ ಹೇಳಲಿಲ್ಲ. ಇದಕ್ಕೆ ಏನು ಮಾಡುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—ತಮ್ಮ ಭಾಗದಲ್ಲಿರುವ ಹೆಬ್ಬೂರ್ ಹಾನ್ಸರ್ ವಿಚಾರ ಹೇಳುತ್ತಾ ಇದ್ದಾರೆ. ಅದು ತನಿಖೆ ನಡೆಯುತ್ತಾ ಇದೆ. ಯಾವುದೇ ಅಪ್ಲಿಕೇಷನ್ ಕೊಟ್ಟ ಕೂಡಲೇ ಆಗಬೇಕು ಎಂದು ಹೇಳುತ್ತಾರೆ. ಅದಕ್ಕೆ ಟೈಂ ಬೇಕು ವಿಚಾರಣೆ ಆಗಬೇಕು, ಎಲ್ಲರಿಗೂ ರೂರ್ಸ್ ಕಾಮನ್ ಇವೆ. ಕಾಂಗ್ರೆಸ್ ನದಸ್ಯರು ತೆರೆದಂಥ ನ್ಯೂಲುಗಳಿಗೆ ಒಂದು ರೂಲು ಮತ್ತು ನಾನ್ ಕಾಂಗ್ರೆಸ್ ನದಸ್ಯರು ಮಾಡಿದಂಥ ಶಾಲೆಗಳಿಗೆ ಒಂದು ರೂರ್ ಎಂದು ಇಲ್ಲ. ಎಲ್ಲಾ ರೂರ್ ಒಂದೇ, ಗ್ರ್ಯಾಂಟ ಇನ್ ಏಡ್ ರೂರ್ಸ್ ಏನು ಇದೆ ಆ ಪ್ರಕಾರ ಪ್ರತಿಯೊಬ್ಬರಿಗೂ ಗ್ರ್ಯಾಂಟ್ಸ್ ಸಿಕ್ಕುತ್ತಾ ಇದೆ. ನನ್ನ ಅನುಭವದಲ್ಲಿ ಶ್ರೀ ಲಕ್ಕಪ್ಪನವರ ಭಾಗದಲ್ಲಿ ಕೆಲಸ ಜಾಸ್ತಿ ಆಗಿದೆ, ಉಳಿದವರಿಗೆ ಆಗಿಲ್ಲ ಎಂದು ಅನ್ನಿಸುತ್ತದೆ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್ (ಮೈಸೂರು ಸಿಟಿ).—ಎಕ್ಸ್-ಮೈಸೂರಿನಲ್ಲಿ 44 ಪರ್ಸೆಂಟು ಎಸ್. ಎಸ್. ಎಲ್. ಸಿ. ಅದವರು, 48 ಪರ್ಸೆಂಟು ನಾನ್ ಎಸ್. ಎಸ್. ಎಲ್. ಸಿ. ಅನ್-ಟ್ರೇನ್ಡ್ (un-trained) ಹೈಯಮರಿ ನ್ಯೂರ್ ಟೀಚರ್ಸ್ ಇದ್ದಾರೆ. ಡೆಪ್ಯೂಟೇಷನ್ ಆವ್ ಟೀಚರ್ಸ್ ಒಳಗೆ ಎಕ್ಸ್ ಮೈಸೂರಿನವರು ಒಬ್ಬರೂ ಇಲ್ಲ, 48 ಪರ್ಸೆಂಟು ಯಾವಾಗ ಕಡಿಮೆ ಆಗುವುದು ?

ಶ್ರೀ ಎಸ್. ಆರ್. ಕಂಠಿ.—ಡೆಪ್ಯುಟೇಷನ್ ಎಲ್ಲಾ ಕಡೆ ಆಗುತ್ತಾ ಇದೆ. ನಾನ್ ಎಸ್.ಎಸ್. ಎಲ್.ಸಿ. ಟೀಚರ್ಸ್ ಏನು ಇದ್ದಾರೆ, ಅವರ ವಿಚಾರವಾಗಿ ಪೂರ್ಣ ವಿಚಾರ ಮಾಡಬೇಕಾಗಿದೆ. ಎಲ್ಲಾ ಟೀಚರ್ಸ್‌ನ್ನು ಟ್ರೈನಿಂಗ್ ಕಾಲೇಜಿಗೆ ಕಳಿಸಿ ಟ್ರೈನಿಂಗ್ ಮಾಡುವುದಕ್ಕಾಗುವುದಿಲ್ಲ. ಅವರಿಗೆ ಓರಿಯೆಂಟೇಷನ್ ಟ್ರೈನಿಂಗ್ ಕೊಡಬೇಕು ಇಲ್ಲದಿದ್ದರೆ (deemed-trained) ಮಾಡಬೇಕೇ ಎನ್ನುವ ವಿಚಾರ ಸರ್ಕಾರದ ಆಲೋಚನೆಯಲ್ಲಿ ಇದೆ. ಹಳೇ ಮೈಸೂರಿನಲ್ಲಿ ಸ್ವಲ್ಪ ಅನ್-ಟ್ರೈನ್ಡ್ ಸಂಖ್ಯೆ ಜಾಸ್ತಿಯಾಗಲು ಕಾರಣ—ಹಳೇ ಮೈಸೂರಿನಲ್ಲಿ ಆ ಕಾಲಕ್ಕೆ ಯಾವ ರೀತಿಯಿಂದ ಭರ್ತಿಮಾಡಿ ಕೊಂಡಿದ್ದಾರೆಯೆಂದರೆ, ರೂರ್ಸ್‌ಕಡೆ ಗಮನಕೊಡದೆ ಬೇರೆಕಡೆ ಗಮನಕೊಟ್ಟು ಭರ್ತಿ ಮಾಡಿರುವುದರಿಂದ ಆ ರೀತಿ ಅನ್-ಟ್ರೈನ್ಡ್ ಹೆಚ್ಚು ಕಾಣುತ್ತದೆ. ಡೀಮ್-ಟ್ರೈನ್ಡ್ ಎಂದು ಮಾಡಿದರಾಗಲಿ ಅಥವಾ ಓರಿಯಂಟೇಷನ್ ಟ್ರೈನಿಂಗ್ ಕೊಟ್ಟರೆ ಎಲ್ಲಾ ಸರಿಹೋಗುತ್ತದೆ. ಯಾವ ವಿಧದಿಂದಲೂ ತೊಂದರೆಯಾಗುವುದಿಲ್ಲ.

Sri G. V. GOWDA (Palya).—Sir, I wish to know by what time the Government eonsider the question of converting the Bangalore University into a Federal University ? You had promised that you would have it done in one year's time.

Mr. SPEAKER.—What can the State Government do ? It is for the Central Government.

Sri S. R. KANTHI.—You have said that correctly, Sir. The Central Government has to take over. When the Hon'ble Member knows it quite well, he puts this question, it is very difficult for me to answer this question.

Mr. SPEAKER.—Probably this will strengthen the hands of the State Government to press the Centre.

ಶ್ರೀ ಎಸ್. ಗೋಪಾಲಗೌಡ.—ಅವರು ಅಬ್ರಿವಿಯೇಶನ್ ಉಪಯೋಗಿಸಿದ ಬಗ್ಗೆ ನಾನು ವಿರೋಧ ಮಾಡಿದ್ದೆ. ಅದರ ಕಾರಣ ಹೇಳುತ್ತೇನೆ. ಅವರು ಅಂಕ ಅಂಶಗಳನ್ನು ಬಿ. ಕೆ. ಹೆಚ್. ಕೆ. ಎಂದು ಕೊಟ್ಟರು. ನಾನು ಹೇಳುವುದಿಷ್ಟೆ. ಕರ್ನಾಟಕದಲ್ಲಿ ಒಂದು ಜಿಲ್ಲೆ ಅಥವಾ ಬೇರೆ ಹೆಸರಿನಿಂದ ಕರೆಯುವುದಕ್ಕೆ ಏನಾಗಿದೆ ! ಈ ಅಂಕ ಅಂಶಗಳ ಪತ್ರ ತಾವು ನೋಡಿದರೆ, ಗೊತ್ತಾಗುತ್ತದೆ. ಖರ್ಚು ಮಾಡುವಾಗ ಅದರ ಜನಸಂಖ್ಯೆ ತೆಗೆದುಕೊಳ್ಳಬೇಕು. ಮೊದಲು ಎಷ್ಟು ಇದ್ದವು, ಹೊಸದಾಗಿ ಕೊಡತಕ್ಕದ್ದು ಎಷ್ಟು, ಎಂಬುದನ್ನೆಲ್ಲಾ ಗಣನೆಗೆ ತೆಗೆದುಕೊಳ್ಳದೆ, ಬೊಂಬೇ ಕರ್ನಾಟಕ ಹಳೆಯ ಮೈಸೂರು ಎಂದು ಹೇಳಿದರೆ ಏನು ಅರ್ಥವಿದೆ ! ಇಂತಹ ಅಂಕ ಸಂಖ್ಯೆಗಳನ್ನು ಕೊಡುವುದರಿಂದ ತಪ್ಪು ಅಭಿಪ್ರಾಯಕ್ಕವಕಾಶವಾಗುತ್ತದೆ. ಹೀಗೆ ಸಭೆಯನ್ನು ಮಿಸ್‌ಲೀಡ್ ಮಾಡಬಹುದೇ ! ಇದಕ್ಕೆ ಸ್ಪಷ್ಟೀಕರಣ ಕೊಡುತ್ತೇನೆ. ಒಂದೇ ಒಂದು ವಿಷಯ ತಾವು ರಕ್ಷಣೆ ಕೊಟ್ಟರೆ, ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗ ಅವರು ಹೇಳಿದರು, ಒಂದೇ ಒಂದು ದಿವಸ 200-300 ಜನರನ್ನು ವರ್ಗಮಾಡಿಲ್ಲ ಎಂದು. ಇದರ ಬಗ್ಗೆ ನಾನು ಬೇಕಾದರೆ ಪ್ರಮಾಣಬದ್ಧನಾಗಿ ಹೇಳುತ್ತೇನೆ. ಅದರ ಬಗ್ಗೆ ಆದೇಶ ಕೊಟ್ಟಿರುವುದನ್ನು ಕಣ್ಣಾರೆ ನೋಡಿದ್ದೇನೆ, ಕಿವಿಯಾರೆ ಕೇಳಿದ್ದೇನೆ. ಅದು ಅಲ್ಲ ಎಂದು ಕಂಡು ಬಂದರೆ ನಾನು ಯಾವ ಶಿಕ್ಷೆಗೂ ಬದ್ಧನಾಗಿದ್ದೇನೆ.

ಶ್ರೀ ಎನ್. ಆರ್. ಕಂರಿ.—ಅವರು ಹೇಳುವುದು ಬಿ. ಕೆ. ಹೆಚ್. ಕೆ. ಏರಿಯಾದ ವಿಷಯ. ಅವರು ಹೇಳಕೂಡದು ಎಂದು ಹೇಳಿದ್ದಾರೆ. ಅದರ ವಿಷಯ ಹೇಳುತ್ತೇನೆ. ಅವರು ತುಂಬಾ ವಿಶಾಲ ದೃಷ್ಟಿಯ ಮನುಷ್ಯರು. ಅವರ ಮನೆಯವರು ಧಾರವಾಡದವರು. ಅವರು ಧಾರವಾಡದ ನಂಬಂಧ ಮಾಡಿದ್ದುದರಿಂದ ಅವರು ಇನ್ನೂ ವಿಶಾಲ ದೃಷ್ಟಿಯವರಾಗಿದ್ದಾರೆ, ಅಷ್ಟೆ.

MR. SPEAKER.—The question is :

"That the respective sums not exceeding the amounts mentioned in the Demands No. 17, 37 and 49 be granted to the Government to defray the charges which will come in course of payment during the financial year ending 31st March 1967."

The motion was adopted.

As directed by the Speaker the motion for Demands for Grants adopted by the House are reproduced below :—

DEMAND No. 17—Education.

28. Education.

"That a sum not exceeding Rs. 29,75,40,400 be granted to the Government to defray the charges which will come in course of payment during the financial year for the period ending 31st day of March 1967, in respect of 'Education'".

DEMAND No. 37—Stationery and Printing.

68. Stationery and Printing.

"That a sum not exceeding Rs. 9351,000 be granted to the Government to defray the charges which will come in course of payment during the financial year for the period ending 31st day of March 1967, in respect of 'Stationery and Printing' ".

DEMAND No. 49—Capital Account of other Works outside the Revenue Account.

109. Capital outlay on other Works.

"That a sum not exceeding Rs. 12,00.000 be granted to the Government to defray the charges which will come in course of payment during the financial year for the period ending 31st day of March 1967, in respect of 'Capital outlay on other Works' ".

MR. SPEAKER.—The House will now adjourn for half an hour and will meet at 3-45 P.M.

The House adjourned for recess at Fifteen Minutes past Three of the Clock and reassembled at Forty-five Minutes past Three of the Clock.

[Mr. SPEAKER in the Chair].

Member's Representation *re:* the Food Policy of the Government.

ಶ್ರೀ ಎಸ್. ಗೋವಾಲಗೌಡ.—ಇವತ್ತು ವಿಧಾನ ಸೌಧದ ಮುಂದೆ ಈ ಮಾನ್ಯ ಸಭೆಯ ವಿರೋಧಪಕ್ಷದ ನಾಯಕರಾದ ಶ್ರೀ ಶಿವಪ್ಪನವರು ಮತ್ತು ಶ್ರೀ ಮುರ್ಕಾ ಗೋವಿಂದ ರೆಡ್ಡಿಯವರು ಮತ್ತು ಇತರ ಶಾಸನಕರು ಹಾಗೂ ಮಂತ್ರಿತರರು ದೇಶದಲ್ಲಿ ಆಹಾರದ ಪರಿಸ್ಥಿತಿಯು ಉಲ್ಬಣವಾಗಿದೆ, ಜನರು ಸಂಕಷ್ಟಗಳಿಗೆ ಗುರಿಯಾಗಿದ್ದಾರೆ ಎಂಬುದನ್ನು ಸಾಂಕೇತಿಕ ರೂಪವಾಗಿ ಸರ್ಕಾರಕ್ಕೂ ಹಾಗೂ ಸಾರ್ವಜನಿಕರಿಗೂ ಪ್ರತಿಬಿಂಬಿಸುವ ಉದ್ದೇಶದಿಂದ ಉಪವಾಸವನ್ನು ಆಚರಿಸಿ ಕುಳಿತಿದ್ದಾರೆ. ಈ ಸಂಬಂಧದಲ್ಲಿ ತಮಗೆ ಒಂದು ನಿಲುವಳಿ ನೂಚನೆಯನ್ನು ಕಳಿಸಿ ತಮ್ಮ ಅನುಮತಿಯನ್ನು ಬೇಡಿ ಕೊಂಡಿದ್ದೇನೆ. ಅದಕ್ಕೆ ಈ ಸಂದರ್ಭದಲ್ಲಿ ಅನುಮತಿಯನ್ನು ಕೊಡಬೇಕು. ಹಾಗೂ ಈ ವಿಷಯದಲ್ಲಿ ಕೂಲಂಕುಷವಾಗಿ ಚರ್ಚೆಗೆ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ಹೇಳಿ ತಮ್ಮನ್ನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಇಲ್ಲಿ ತಮಗೆ ಗೊತ್ತಿರುವ ಹಾಗೆ, ಈ ಆಹಾರದ ನೀತಿಯಲ್ಲಿ ಕೇಂದ್ರ ಸರ್ಕಾರದವರು ಸಾಕಷ್ಟು ಆಹಾರ ಧಾನ್ಯವನ್ನು ಕೊಟ್ಟರೆ ನಾವೆ ಬೆಂಗಳೂರಿನಲ್ಲಿ ಸ್ಟೇಜ್ಯೂಟರಿ ರೇಷನಿಂಗ್ ತರುತ್ತೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ.

Mr. SPEAKER.—Is the member getting into the merits of the cases ?

ಶ್ರೀ ಎಸ್. ಗೋವಾಲಗೌಡ.—ರೂಲ್ 50 ರ ಪ್ರಕಾರ ತಮಗೊಂದು ನಿಲುವಳಿ ನೂಚನೆಯನ್ನು ಕಾರ್ಯದರ್ಶಿಯವರ ಮೂಲಕ ಕಳಿಸಿದ್ದೇನೆ. ಅದನ್ನು ತಾವು ಪರಿಶೀಲನೆಮಾಡಿ ರೂಲ್ 52ರ ಪ್ರಕಾರ ಅದನ್ನು ಅಂಗೀಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದರಲ್ಲಿ ಒಂದೇ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ ಮತ್ತು ಆ ವಿಷಯ ಬಹಳ ತ್ವರಿತವಾದುದು ಹಾಗೂ ಸಾರ್ವಜನಿಕ ದೃಷ್ಟಿಯಿಂದ ಪ್ರಾಮುಖ್ಯವಾದುದು. ಆದ್ದರಿಂದ ಈ ಎಂಟನೆಯ ಅಧ್ಯಾಯದಲ್ಲಿ ಏನೊಂದು ಅಧಿಕಾರವನ್ನು ಕೊಟ್ಟಿದೆ, ಅದನ್ನು ತಾವು ಎತ್ತಿ ಹಿಡಿದು ಈ ಮಾನ್ಯ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತು ಇದಕ್ಕೆ ನಾವೆಲ್ಲರೂ ಬಹಳ ಬಹಳ ಕೃತಜ್ಞರಾಗಿದ್ದೇವೆ. ಕೊನೆಯದಾಗಿ ಏನೆಂದರೆ, ತಾವು ಸರ್ಕಾರದ ಪರವಾಗಿ, ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ಚರ್ಚೆ ಹಿಂದೆಯೇ ಆಗಿತ್ತು, ಇವರಲ್ಲಿ ಅವಕಾಶ ಎಲ್ಲದೆ ಎಂಬ ಕಾರಣವನ್ನು ಹೇಳಿ ನಿರ್ಣಯವನ್ನು ತಳ್ಳಿಹಾಕಬಾರದು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ನಾನು ಬಹಳ ವಿಚಾರಮಾಡಿ ಈ ನಿರ್ಣಯವನ್ನು ಕಳುಹಿಸಿದ್ದೇನೆ ಈ ನಿಲುವಳಿ ನೂಚನೆಯನ್ನು ನೋಡುವಂಥ ಅಧ್ಯಾಯದಲ್ಲಿ ಕೊಟ್ಟಿರತಕ್ಕ 50, 51, 52, 53, 54 ಈ ವಿಧಿಗಳ ಪ್ರಕಾರ ಈ ನೂಚನೆಯನ್ನು ತಾವು ಎತ್ತಿ ಹಿಡಿದು ಈ ನಿರ್ಣಯದ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ ಸ್ವಾಮಿ.

ಶ್ರೀ ಕೆ. ಲಕ್ಕಪ್ಪ.—ಈ ದಿವಸ ನಮ್ಮ ಪಕ್ಷದ ವತಿಯಿಂದ, ಎಲ್ಲ ವಿರೋಧ ಪಕ್ಷಗಳೂ ಸೇರಿ ಆಹಾರದ ಪರಿಸ್ಥಿತಿಯನ್ನು ಸರಕಾರದ ಗಮನಕ್ಕೆ ತರಲು, ದೇಶಾದ್ಯಂತ ಈ ದಿವಸ ದೊಡ್ಡ ಚಳುವಳಿಯನ್ನು ಹೂಡಿರುವಾಗ, ಈ ಸತ್ಯಾಗ್ರಹವನ್ನು ನಮ್ಮ ನಾಯಕರಾದ ಶಿವಪ್ಪನವರೂ ಮತ್ತು ಅನೇಕ ಮಾನ್ಯ ಸದಸ್ಯರುಗಳೂ ಮಾಡುತ್ತಿದ್ದಾರೆ. ಈ ಶಾಂತಿಯುತ ಮೆರವಣಿಗೆ ಬರ ತಕ್ಕ ಕಾಲದಲ್ಲಿ ಸರ್ಕಾರ ಕಠಿಣವಾದ ದೌರ್ಜನ್ಯವನ್ನು ಪೋಲೀಸಿನವರಿಂದ ಮಾಡಿಸಿರತಕ್ಕದ್ದು ಈ ದಿವಸ ಆಗಿದೆ. ಆದುದರಿಂದ ಈ ಬಗ್ಗೆ ಶ್ರೀಮಾನ್ ಗೋವಾಲಗೌಡರು ನಿಲುವಳಿ ನೂಚನೆಯನ್ನು ಕಳುಹಿಸಿದ್ದಾರೆ. ಈ ನಾಲ್ಕು ವರ್ಷಗಳ ಅವಧಿಯಲ್ಲಿ ಒಂದು ನಿಲುವಳಿ ನೂಚನೆ ಸಹ ಅಂಗೀಕಾರವಾಗಿ ಸಭೆಯಲ್ಲಿ ಚರ್ಚೆಗೆ ಅವಕಾಶ ಸಿಕ್ಕಲಿಲ್ಲ. ಆದುದರಿಂದ ತಾವು ಈ ಬಹಳ ಗಹನವಾದ ವಿಚಾರವನ್ನು ಮನವರಿಕೆ ಮಾಡಿಕೊಂಡು ನಿಲುವಳಿ ನೂಚನೆಯ ಚರ್ಚೆಗೆ ಅವಕಾಶ ಮಾಡಿಕೊಡ ಬೇಕು. ಮಾನ್ಯ ಆಹಾರ ಮಂತ್ರಿಯವರಾದ ಜತ್ತಿಯವರು ಹೇಳಿಕೆಗಳನ್ನು ಕೊಟ್ಟು ಈ ಸಭೆಯನ್ನು ತೃಪ್ತಿ ಪಡಿಸುವ ಬದಲು, ಕಾರ್ಯಕರಾಪದ ಪಟ್ಟಿಯಲ್ಲಿರುವ ಇತರ ವಿಷಯಗಳ ಚರ್ಚೆಯನ್ನು ಮುಂದಕ್ಕೆ ಹಾಕಿ, ಈ ನೂಚನೆಯನ್ನು ಅತಿ ಜರೂರು ಎಂದು ಭಾವಿಸಿ ಚರ್ಚೆಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕು. ಬರೀ ಹೇಳಿಕೆಯನ್ನು, ಭ್ರಾಂತಿಯ ಹೇಳಿಕೆಯನ್ನು ಮಾನ್ಯ ಸಚಿವರು ಕೊಟ್ಟರೆ ದೇಶದಲ್ಲಿ ಆಹಾರ ಪರಿಸ್ಥಿತಿ ಏನೂ ಸುಧಾರಿಸುವುದಿಲ್ಲ.

ಅದುದರಿಂದ ಡರ್ಜಿಗೆ ಈಗಲೇ ಅವಕಾಶ ಮಾಡಿಕೊಡಬೇಕು ಎಂದು ತಮ್ಮನ್ನು ಪ್ರಾರ್ಥನೆ ಮಾಡಿ ಮಾನ್ಯ ಗೋಪಾಲಗೌಡರು ಏನು ಹೇಳಿದರೋ ಅದನ್ನು ಅನುಮೋದಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ನಾನು ಈ ನಿಲುವಳಿ ಸೂಚನೆಯನ್ನು ಕಳುಹಿಸಿದ ಮೇಲೆ ನನಗೆ ತಿಳಿಯಿತು ಪೋಲೀಸರು ಮಾನ್ಯ ಮುಲ್ಕ ಗೋವಿಂದ ರೆಡ್ಡಿ ಲಕ್ಕಪ್ಪನವರು, ಮತ್ತು ಇತರರ ಮೇಲೆ ಸ್ವಲ್ಪ ದೌರ್ಜನ್ಯದ ರೀತಿಯಲ್ಲಿ ವರ್ತಿಸಿದರು ಎಂದು ಈ ಕಡೆ ಬರಬೇಡಿ, ವಿಧಾನಸೌಧದ ಕಡೆ ಬರಬೇಡಿ ಎಂದು ತಳ್ಳುವಾಗ ಅವರಿಗೂ ರಾಚಿ ಏಟು ಬಿತ್ತು ಎಂದು ಕೇಳಿದ್ದೇನೆ. ಆದುದರಿಂದ ಅದನ್ನು ನಾನು ನನ್ನ ಸೂಚನೆಯಲ್ಲಿ ಸೇರಿಸುವುದಕ್ಕಾಗಲಲ್ಲ. ಇಲ್ಲದೇ ಇದ್ದರೆ ಸೇರಿಸುತ್ತಿದ್ದೆ. ನಿಲುವಳಿ ಸೂಚನೆಯಲ್ಲಿ ನಾನು ಆ ರೀತಿ ಸೇರಿಸಿಲ್ಲ ಎನ್ನುವ ಕಾರಣಕ್ಕಾಗಿ ಅದನ್ನು ತಾವು ತಳ್ಳಿಹಾಕಬಾರದು ಎಂದು ಕೇಳಿಕೊಳ್ಳುತ್ತೇನೆ.

(Some Hon'ble Members stood up)

Mr. SPEAKER.—Order, order.

Now, a notice of an adjournment motion has been given. The Member who has given notice of it has brought it to my notice, so that further action may be taken. At that stage, to support it ? You know the procedure. One Hon'ble Member saying something is allright. Then another Hon ble Member stands up. Yet a third one and then one more, and after that two more get up.

Sri K. S. SURYANARAYANA RAO.—To bring home to the Speaker the grave situation.....

Mr. SPEAKER.—Under which rule is Sri Suryanarayana Rao bringing it up ? It has to be mentioned in the House so that the House may be appraised of the same ! The House gives the consent and then the House is seized of the matter and deals with it. How far rules permit—that is procedure.

Sri K. S. SURYANARAYANA RAO.—For that purpose I got up.....

Mr. SPEAKER—But after the consent is given.

Sri K. S. SURYANARAYANA RAO.—To secure consent.....

Mr. SPEAKER.—To secure my consent; Members may please refer to that rule.

Sri K. S. SURYANARAYANA RAO.—It is rule 50.

Sri C. J. MUCKANNAPPA.—With the available material.....

Mr. SPEAKER.—I will read Rule 50 :

> "Subject to the provisions of the these rules, a motion for an adjournment of the business of the Assembly for the purpose of discussing a definite matter of urgent public importance may be made with the consent of the Speaker."

There is no question of my being lead with argument or persuasive things to be said and all that. How many ? Why should I not give chance to any body ?

Sri C. J. MUCKANNAPPA.—May I just bring to the notice.....

Mr. SPEAKER.—Order, order.

(Both Sri Muckannappa and Sri Byrappaji were standing)

Mr. SPEAKER.—If both the Hon'ble Members begin to speak, I will have to ask both of them to retire from the House.

(Sri Byrappaji was standing)

Mr. SPEAKER.—Why is the Hon'ble Member standing?

ಶ್ರೀ ಬಿ. ಬೈರಪ್ಪಾಜಿ.—ಸರ್ಕಾರಕ್ಕೆ ಮೆಮೊರಾಂಡಂ ಅನ್ನು ಅರ್ಪಿಸಬೇಕಾಗಿದೆ. ಶಾಸನ ಸಭೆ ನಡೆಯುತ್ತಿರುವಾಗ ತಮ್ಮ ಮೂಲಕ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಬೇಕು ಎಂದು ನನ್ನ ಅಭಿಪ್ರಾಯ. ಇದು ತಮಗೂ ಹಾಗೂ ಸಭೆಯ ಗೌರವಕ್ಕೆ.....

Mr. SPEAKER.—Is it according to the rules – what he is doing?

ಶ್ರೀ ಬಿ. ಬೈರಪ್ಪಾಜಿ.—ಇದನ್ನು ತಮ್ಮ ಮೂಲಕ ಕಳಿಸಿ ಒಂದು ಉತ್ತಮ ನಿದರ್ಶನವನ್ನು....

Mr. SPEAKER.—Is there no procedure for that?

ಶ್ರೀ ಬಿ. ಬೈರಪ್ಪಾಜಿ.—ನಿಮಗೆ ಗೌರವ ಕೊಡಬೇಕು, ಅದು ಒಳ್ಳೆಯ ಸಂಪ್ರದಾಯ. ಅಧ್ಯಕ್ಷರಿಗೆ ಗೌರವ ಕೊಡಬೇಕಾದ್ದು ನಮ್ಮೆಲ್ಲರ ಕರ್ತವ್ಯ. ವಿರೋಧ ಪಕ್ಷದವರಾದ ನಾವುಗಳು ಶಾಸನ ಸಭೆ ನಡೆಯುತ್ತಿರುವಾಗ ತಮ್ಮ ಮೂಲಕ ಮನವಿಯನ್ನು ಕಳಿಸಬೇಕು. ಪ್ರಜಾ ಸೋಷಿಯಲಿಸ್ಟ್ ಪಕ್ಷದವರ ವತಿಯಿಂದ ನಡೆಯುತ್ತಿರುವ ನಿರಶನ ವ್ರತವೇನಿದೆ ಅದರ ಬಗ್ಗೆ ಮಾನ್ಯ ಲಕ್ಕಪ್ಪನವರು ಮತ್ತು ಗೋಪಾಲಗೌಡರು ತಿಳಿಸಿದ್ದಾರೆ ಸರ್ಕಾರದ ಆಹಾರ ನೀತಿಯ ವಿರುದ್ಧ, ರೈತರ ಮೇಲೆ ಕರಭಾರ ಹೇರಿರತಕ್ಕ ನೀತಿಯ ವಿರುದ್ಧ, ಅನೇಕ ರೀತಿಯಲ್ಲಿ ರೈತರಿಗೆ ಈ ಸರ್ಕಾರ ಸರಿಯಾದ ಒಂದು.....

Mr. SPEAKER.—Order, order. I am not going to allow.

ಶ್ರೀ ಬಿ. ಬೈರಪ್ಪಾಜಿ.—ಆ ಒಂದು ದೃಷ್ಟಿಯಿಂದ ತಮ್ಮ ಮೂಲಕ.....

Mr. SPEAKER.—Order, order. Simply because I allowed a little latitude, Sri Byrappaji goes on. I will have to say— you kindly resume your seat.

ಶ್ರೀ ಬಿ. ಬೈರಪ್ಪಾಜಿ.—ಇದನ್ನು ತಮ್ಮ ಮೂಲಕ ಸರ್ಕಾರಕ್ಕೆ ಪ್ರಜಾ ಸೋಷಿಯಲಿಸ್ಟ್ ಪಕ್ಷದ ವತಿಯಿಂದ ಮನವಿಯನ್ನು ಸರ್ಕಾರಕ್ಕೆ ಒಪ್ಪಿಸುವುದಕ್ಕೆ ಇಚ್ಛೆಪಡುತ್ತೇನೆ. ತಾವು ಇದಕ್ಕೆ ಅವಕಾಶ ಕೊಡಿರಿ ಎಂದು ತಮ್ಮನ್ನು ನಾನು ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. I will resume my seat, Sir.

(Sri Byrappaji was handing over a paper to the attender)

Mr. SPEAKER.—Don't bring it here. Is there no procedure? There is a Committee of Petitions. Simply calling somebody and giving it to him— is it procedure?

ಎಷ್ಟು ಸಮಾಧಾನ ತೆಗೆದುಕೊಂಡರೂ, ಎಷ್ಟು ವಿಧದಲ್ಲಿ ಹೇಳಿದಾಗ್ಯೂ ನೀವು ಕೇಳುವುದಿಲ್ಲ. All that I have to say is, the Hon'ble Member is deliberately, designedly, will fully and knowingly flouting the rules.

ಪಬ್ಲಿಕ್ ಪಿಟಿಷನ್ ಕೊಡುವುದು ಎಂದರೆ ಏನು? ಯಾವ ಸಮಯದಲ್ಲಿ, ಯಾವ ಕೆಲಸ ವಿದ್ದ ಸಂದರ್ಭದಲ್ಲಿ? ನೀವು ಎದ್ದು ಏನೇನೋ ಮಾತನಾಡುತ್ತೀರಿ. ಒಬ್ಬರೂ ತಿಳಿಯುವುದಿಲ್ಲ, ಮನಸ್ಸಿಗೆ ಬಂದ ಕೂಡಲೇ ಮಾತನಾಡಿದರೆ ಸಭೆಯಲ್ಲಿದ್ದ ನಿಮಗೂ ಗೌರವವಿಲ್ಲ ನಮಗೂ ಗೌರವ ವಿಲ್ಲ. ಯಾವುದಾದರೂ ಮಾತನಾಡಬೇಕಾದರೆ ಅದರ ಬಗ್ಗೆ ವೀಟಿಂಗಿಗೆ ಮುಂಚೆ ಒಂದು ಕಾರ್ಯ ಕ್ರಮ ಪಟ್ಟಿಯನ್ನು ಮಾಡುತ್ತಾರೆ. ಅದರ ಪ್ರಕಾರ ಕೆಲಸ ಮಾಡುವಂಥದ್ದು, ಅದರಲ್ಲಿ ಇಲ್ಲದೆ ಇರುವುದನ್ನು ಮಾಡಬೇಕಾದರೆ ನಾಲ್ಕೂವರೆ ವರ್ಷದ ನಂತರವೂ ತಿಳಿಯಲಿಲ್ಲ ಎಂದರೆ ಏನು ಮಾಡಬೇಕು.

There is a method. I do not know what the Member has got in his hand. He was shown a piece of paper to the House and he wants the person to pass it on to the House! What does he waut me to do with it? Why does not he pass it to the Government?

Sri B. BYRAPPAJI.—It is a memorandum.

ಶ್ರೀ ಜಿ. ಮರುಳಪ್ಪ (ಕಡೂರು).—ಅದನ್ನು ತಮ್ಮ ಮುಖಾಂತರ ಕೊಡುವುದು ಒಳ್ಳೆಯದು...

Mr. SPEAKER.—If he wants me to function, under what rule he may please tell me.

Sri C. J. MUCKANNAPPA.—Member's representation.....

Mr. SPEAKER.— Is it a petition ? ಈ ವಿಷಯದಲ್ಲಿ ನೀವು ರೂರ್ಲ್‌ಗೆ ವಿರೋಧವಾಗಿ ವರ್ತಿಸಿದರೆ ಶಿಸ್ತು ಜಾರಿಮಾಡಬೇಕಾಗುತ್ತದೆ. ರೂರ್ಲ್‌ಯಾವುದಾದರು ಇದ್ದರೆ ಹೇಳಿ, ನನ್ನನ್ನು ಬಂದು ಕಾಣಿ. ಏನೂ ಹೇಳದೆ ಆಗಬೇಕು ಎಂದರೆ ಇದೇನು ಖಾನಗಿ ಮನೆಯೇ ? It is Absolutely not good.

4-00 P.M.

Sri S. GOPALA GOWDA.—In Rule 123 :

"any matter of general public interest provided that it is not one..." ಎಂದು ಇದೆ.

ಅಧ್ಯಕ್ಷರು.—ನೂಚನೆಗಳು ನನಗೆ ಬೇಡ. ಯಾವ ರೂರ್ ಪ್ರಕಾರ ನಾನು ವರ್ತಿಸಬೇಕೋ ಅದನ್ನು ಹೇಳಿ. ಆಗ ನನ್ನ ಮನಸ್ಸಿಗೆ ಸಮಾಧಾನವಾಗುತ್ತದೆ. ರೂರ್ ಪ್ರಕಾರ ಜವಾಬ್ದಾರಿಯುತವಾಗಿ ಹೇಳಿ. ಆಗ ಅದನ್ನು ನಾನು ಡೀರ್ ಮಾಡುತ್ತೇನೆ.

Sri G. V. GOWDA.—Sir, in rule 130 it is said :

"A petition may either be presented by a member, or be forwarded to the Secretary, in which latter case, the fact shall be reported by him to the Assembly and no debate shall be permitted on the making of such report."

Under rule 130 a member is perfectly entitled to present a petition addressed to the Assembly, to the Speaker. If the Speaker is not in the Assembly it can be forwarded to the Secretary.

Mr. SPEAKER.—Does the rule say that it should be presented in an open House ?

Sri G. V. GOWDA.—The intention is to present it to the House. The Chair may kindly read the rule.

ಶ್ರೀ ಬಿ. ಬೈರಪ್ಪಾಜಿ.—ಈ ಸಭೆಯಲ್ಲಿ ಅನೇಕ ಸಾರಿ ತಾವೇ ಹೇಳಿದ್ದೀರಿ. ಮಾನ್ಯ ಸದಸ್ಯರೇ ನಾವಾರೂ ಅಧ್ಯಕ್ಷರ ಗಮನಕ್ಕೆ ತರುವ ವಿಷಯವಿದ್ದರೆ ಅಥವಾ ಕಾಗದ ಪತ್ರಗಳನ್ನು ಕೊಡುವುದು ಇದ್ದರೆ ಅವನ್ನು ತಮ್ಮ ಮೂಲಕ ಸರ್ಕಾರಕ್ಕೆ ಕಳುಹಿಸಬೇಕೆಂದು ಅನೇಕ ವೇಳೆ ತಿಳಿಸಿದ್ದೀರಿ.

Mr. SPEAKER.—Are we here to transact business or not ? Again the Member is reminding me that several times I have said "please pass on the paper to me." Under what circumstances and for what purpose have I said that ? Why does he want to dissociate other things ? ಏನಾದರೂ ಒಂದು ವಿಷಯದಮೇಲೆ ಇಲ್ಲಿ ಚರ್ಚೆ ನಡೆಯುತ್ತಿರುವಾಗ ಆ ಒಂದು ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೇನಾದರೂ ಅನುಮಾನವಿದ್ದರೆ, ಅದನ್ನು ಸ್ಪಷ್ಟೀಕರಣ ಮಾಡಿಕೊಳ್ಳಬೇಕಾಗುತ್ತದೆ. ಒಂದು ವೇಳೆ ಏನಾದರೂ ಹೆಸರುಗಳನ್ನು ಹೇಳುವುದು ಇದ್ದರೆ ಇಲ್ಲಿ ಹೇಳುವುದು ಬೇಡ. ಅಂತಹ ವಿಷಯಗಳು ಇಲ್ಲಿ ಪ್ರಕಟ ಆಗದ ಹಾಗೆ ನನ್ನ ಕೈಗೆ ಮುಂಚಿತವಾಗಿ ಕೊಡಿ. ಸರ್ಕಾರದಿಂದ ಅವಕ್ಕೆ ಉತ್ತರ ತರಿಸುತ್ತೇನೆ. ಹೇಗಾದರೂ ಮಾಡಿ ಆ ವಿಚಾರದಲ್ಲಿ ಉತ್ತರ ತರಿಸಲು ಪ್ರಯತ್ನ ಪಡುತ್ತೇನೆ. ಆದ್ದರಿಂದ ಇಲ್ಲಿ ಸಭೆಯ ಕಾರ್ಯಕಲಾಪಗಳು ನಡೆಯುವ ಸಂದರ್ಭದಲ್ಲಿ ನಾನು ಒಂದು ಅರ್ಜಿಯನ್ನು ತಂದಿದ್ದೇನೆ. ಅದನ್ನು ನೀವು ಪಡೆದುಕೊಂಡ ಸರ್ಕಾರಕ್ಕೆ ಕಳುಹಿಸಬೇಕು, ಅದು ನನ್ನ ಹಕ್ಕು, ಆ ರೀತಿ ಅವರಿಗೆ ಕಳುಹಿಸುವುದು ನಿಮ್ಮ ಕರ್ತವ್ಯವೆಂದು ನನಗೆ ಮಾನ್ಯ ಸದಸ್ಯರು ಹೇಳುವುದು ಎಲ್ಲಾದರೂ ಉಂಟೇ ?

ಶ್ರೀ ಬಿ. ಬೈರಪ್ಪಾಜಿ.—ಈ ದಿವಸ ಹೊರಗಡೆ ಎಂದೂ ನಡೆಯದೇ ಇರತಕ್ಕಂಥ ವಿಚಾರ ನಡೆಯುತ್ತಾ ಇದೆ.

Mr. SPEAKER.—I have given him more time. I must ask him to resume his seat.

ಶ್ರೀ ಬಿ. ಬೈರಪ್ಪಾಜಿ.—ನಾನು ಹೇಳುವುದು ಬಹಳ ಮುಖ್ಯವಾದ ವಿಚಾರ. ಈ ದಿವಸ ವಿಧಾನಸೌಧದ ಹೊರಗಡೆ ನಮ್ಮ ವಿರೋಧಪಕ್ಷದ ನಾಯಕರೂ ಹಾಗೂ ವಿರೋಧ ಪಕ್ಷದ ಸದಸ್ಯರೂ ಉಪವಾಸ ಮಾಡುತ್ತಿರುವುದರಿಂದ.....

Mr. SPEAKER.—Order, order. I am not allowing. I am dealing with the point raised by Sri Gopala Gowda. Is it because I have not taken firm action that half a dozen members talk ?

Sri G. V. GOWDA.—Sir, the hon'ble member is perfectly entitled to present the petition. Rule 128 says :

> "Every petition shall be addressed to the Assembly and shall conclude with a prayer reciting the definite object of the petitioner in regard to the matter to which it relates."

As per this, a petition has to be presented and it can be presented to the Assembly only through the Speaker himself.

Mr. SPEAKER.—Will Sri Gowda kindly read Chapter XIV dealing with Petitions ? Procedure is stipulated there ; It should be addressed to the Secretary.

Sri G. V. GOWDA.—No, it does not say that. It shall be addressed to the Assembly.

Mr. SPEAKER.—Is it to be done in this way, in the middle of the day ? You say I want to invoke Chapter XIV ? Should you not conform to what is stated there ? This is brought in the middle of other work. Are there no rules and regulations ? What is there in the Agenda and what is the procedure to be followed ?

I call upon the Food Minister.....

ಶ್ರೀ ಕೆ. ಲಕ್ಕಪ್ಪ.—ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ನಾನು ಕೇಳಿರುವುದು. ತಾವು ಅದಕ್ಕೆ ಮೊದಲು ಅವಕಾಶಮಾಡಿಕೊಡಬೇಕು. ಬರೀ ಹೇಳಿಕೆಗಳನ್ನು ಆಹಾರ ಮಂತ್ರಿಗಳು ಬೇಕಾದಷ್ಟು ಹೇಳಿದ್ದಾರೆ. ಅಂತಹ ಹೇಳಿಕೆಗಳಿಂದ ನಾವು ಖಂಡಿತವಾಗಿ ತೃಪ್ತರಾಗುವುದಿಲ್ಲ. ಈ ಸಭೆಯಲ್ಲಿ ಮೊದಲು ಅಡ್ಜರ್ನ್‌ಮೆಂಟ್ ಮೋಷನ್ನಿಗೆ ಅಪ್ಪಣೆಮಾಡಿ ಅದನ್ನು ಚರ್ಚೆಮಾಡಲು ಅವಕಾಶಕೊಡಿ. ಬಾಕಿ ಕೆಲಸಕಾರ್ಯಗಳನ್ನು ಮುಂದಕ್ಕೆ ಹಾಕಬೇಕು. ಇವರ ಬರೀ ಹೇಳಿಕೆಗಳಿಂದ ಯಾರೂ ತೃಪ್ತರಾಗುವುದಿಲ್ಲ. ಪರಿಸ್ಥಿತಿ ಈ ರೀತಿ ಇದೆ. ಹೊರಗಡೆ ಮಾನ್ಯ ಸದಸ್ಯರುಗಳು ಉಪವಾಸ ಮಾಡುತ್ತಿದ್ದಾರೆ. ಬಹಳ ಭೀಕರವಾದ ಪರಿಸ್ಥಿತಿ ಇದೆ. ಇಂತಹ ಹೇಳಿಕೆಗಳನ್ನು ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಜತ್ತಿಯವರು ಎರಡು ಮೂರು ಸಾರಿ ಕೊಟ್ಟರು. ಬರೀ ಹೇಳಿಕೆಯಿಂದ ನಾವು ತೃಪ್ತಿಯಾಗುವುದಾದರೆ ನಾವು ಇಲ್ಲಿದ್ದು ಏನು ಮಾಡಬೇಕು ?

Mr. SPEAKER.—Order, order.

ಶ್ರೀ ಕೆ. ಲಕ್ಕಪ್ಪ.—ಒಂದುವೇಳೆ ತಾವು ನಾಳೆ ಈ ಅಡ್ಜರ್ನ್‌ಮೆಂಟ್ ಮೋಷನ್ನಿಗೆ ಅಪ್ಪಣೆ ಕೊಡುವುದಾದರೆ, ಅವರು ಕೊಡುವ ಹೇಳಿಕೆಯನ್ನು ಇವತ್ತು ನಿಲ್ಲಿಸಲಿ. ಅದಕ್ಕಾದರೂ ಅವಕಾಶ ಮಾಡಿಕೊಡಿ. ಬರೀ ಹೇಳಿಕೆಗಳನ್ನು ಇಲ್ಲಿ ಅವರು ಹೇಳುವುದು ಬೇಡ. ಈ ದೇಶದಲ್ಲಿ ಈಗಿನ ಒಂದು ಆಹಾರಭಾವದಿಂದ ಯಾರೂ ತೃಪ್ತಿಯಾಗುವುದಿಲ್ಲವೆಂದು ನಾನು ಹೇಳುತ್ತಿದ್ದೇನೆ.

Sri G. V. GOWDA.—Sir, we want to express ourselves.

Mr. SPEAKER.—I have no objection to give half an hour. But is there no procedure ? The hon'ble member says that this is a thing to be done first. Is it the dictation to the Chair ?

HON. MEMBERS.—No.

Mr. SPEAKER.—Order, order. I allowed the member to express himself. I was more than doubtful whether I should allow at all this

matter relating to the Food. A similar motion was given on a prior occasion; I asked the Government to make a statement and that was made and then the members wanted clarification because a debate was not possible. One hour was given but it was not utilised. General debate on the budget took place and every body has spoken. The food matter has been discussed. I want to know what is the latest position and so I am asking the minister to make a statement. Is that wrong? Or is it that I should be dictated to do this or that? If that is the attitude, I do not krow how a Speaker can function?

Sri G. V. GOWDA.—Sir, it is our earnest desire that the Government requires to be profitted.

Mr. SPEAKER.—What is it that is going to be discussed? Is food situation?

Sri G. V. GOWDA.—That is an important matter. Most of us have participated in the Budget.

Mr. SPEAKER.—I am prepared to change the order of the Demands. I am prepared to have 'Agriculture' tommorrow and let the food matter also be discussed. Will the Government agree?

Sri S. NIJALINGAPPA (Chief Minister).—Sir, the the programme for tomorrow has already been issued.

Mr. SPEAKER.—For tomorrow, programme has been issued. So, on Monday we will discuss 'food'.

Sri S. NIJALINGAPPA.—We have no objection, Sir.

Mr. SPEAKER.—There cannot be a better arrangement than this.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ನಾನು ಒಂದು ಮಾತು ಹೇಳುತ್ತೇನೆ. ಆಹಾರ ಪರಿಸ್ಥಿತಿಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಮತ್ತು ಈ ದಿವಸ ಆಹಾರ ಪರಿಸ್ಥಿಯ ಬಗ್ಗೆ ಆಗಿರತಕ್ಕಂಥ ದೌರ್ಜನ್ಯಕ್ಕಾಗಿ ಉಪವಾಸ ಸತ್ಯಾಗ್ರಹ ನಡೆಯುತ್ತಿದೆ. ಈ ಬಗ್ಗೆ ಶ್ರೀಮಾನ್ ಗೋಪಾಲಗೌಡರು ಒಂದು ನಿಲುವಳಿ ಸೂಚನೆಯನ್ನು ತಂದಿದ್ದಾರೆ.....

Mr. SPEAKER.—If memebers go on unnecssarily confusing, I cannot, possibly, help it. Sri Gopala Gowda said that he was unaware of the incident and that he has not included it in his Resolution. The Hon'ble member is confused in his own mind. How long am I to allow that. He mentioned it as a fact. Am I going to take action on a fact? He has given notice; I said: 'it will be taken up tomorrow'. If members will have not the least proportion of the work that they are doing .....

Sri G. V. GOWDA.—Sir, the Leader of the Opposition himself is fasting!

Mr. SPEAKER.—What am I to do?

Sri C. J. MUCKANNAPPA.—Sir, if the Government agrees, it can be discussed tommorrow along with 'Agriculture'.

Mr. SPEAKER.—For tomorrow, Agenda has already been issued. Earliest I can alter is Monday. I am trying to.....

Sri C. J. MUCKANNAPPA.—We have still two hours time to revise the order paper that has been issued.

(ಶ್ರೀ ಎಸ್. ಎಂ. ಗುರ್ರೆಡ್ಡಿ)

ಮಾಡಿದೆ, ಭಾರತ ದೇಶ (ಆರ್ ಇಂಡಿಯಾ) ಅವರೇಜನ್ನು ನೋಡಿದರೆ ಒಂದು ನೂರು ಐವತ್ತು ಮೈಲಿ ರಸ್ತೆಯಲ್ಲಿ 40—41 ಮೈಲಿ ರಸ್ತೆಯೆ 40—41 ಪಾಯಿಂಟು ಮೈನೂರು ರಾಜ್ಯ ಆರ್ ಇಂಡಿಯಾ ಮಟ್ಟಕ್ಕೆ ನಮೂನಿಪಿಸಿದೆ ಎಂದು ಇಲ್ಲಿ ಹೆಮ್ಮೆಯಿಂದ ಹೇಳಬೇಕಾಗಿದೆ. ಈಗ ಸರಕಾರದವರು ಖರ್ಚು ಮಾಡುವ ಹಣ ಕೇವಲ ಕೆಲವು ಭಾಗಗಳಲ್ಲೇ ಹೆಚ್ಚಾಗಿ ಖರ್ಚಾಗುತ್ತಿದೆ. ಇದು ಆಗಬೇಕಾದುದು ಕೇವಲ ಹಿಂದುಳಿದ ಪ್ರದೇಶಗಳಲ್ಲಿ ಮಾತ್ರ. 1962 ರಿಂದ ಅಂದರೆ ತುರ್ತು ಪರಿಸ್ಥಿತಿಯಿಂದಾಗಿ ಸರಕಾರ ಹೆಚ್ಚು ಹಣ ಈ ರೋಡುಗಳ ಕಾಮಗಾರಿ ಹಾಗೂ ಇನ್ನಿತರ ಕೆಲಸಗಳಿಗಾಗಿ ನಾನು ಕೇಳುತ್ತಬರುತ್ತಿದ್ದರೂ ಹೆಚ್ಚು ಹಣ ಖರ್ಚು ಮಾಡಲು ಸಾಧ್ಯವಾಗಲಿಲ್ಲ ಎಂದು ಇಲ್ಲಿ ಹೇಳಬೇಕಾಗಿದೆ. ಬಿಜಾಪುರ ಜಿಲ್ಲೆ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಹೋಗುವಾಗ ಸರಿಯಾದ ರಸ್ತೆಗಳಿಲ್ಲ. ಈ ಜಿಲ್ಲೆಯಲ್ಲಿ ಒಂದೂ ಸರ್ವ ಋತು ರಸ್ತೆಗಳಿಲ್ಲ ಎಂದರೆ ಆರ್ ವೆದರ್ ರೋಡುಗಳಲ್ಲಿ ಒಂದಾದರೂ ಮಾಡಬೇಕೆಂದು ಮಾನ್ಯ ಪಿ.ಡಬ್ಲ್ಯು. ಇರಾಖಾ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದೆವು. ಅದರ ಇನ್ನೂ ಈ ಜಿಲ್ಲೆಯ ಕಡೆಗೆ ಲಕ್ಷ ಕೊಟ್ಟಿಲ್ಲ. ಮಳೆಗಾಲದಲ್ಲಿ ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಹೋಗಬೇಕೆಂದರೆ ಬಹಳ ತೊಂದರೆಯಾಗುತ್ತದೆ. ಈ ಜಿಲ್ಲೆಯ ಕಡೆಗೆ ಸರಕಾರ ಇನ್ನಾದರೂ ಗಮನ ಕೊಡಬೇಕು. ಹೈದರಾಬಾದು ಕರ್ನಾಟಕದ ಭಾಗ ಬಹಳ ಹಿಂದುಳಿದಿತ್ತು. ಈಗ ಉಳಿದ ಜಿಲ್ಲೆಗಳ ಮಟ್ಟಕ್ಕೆ ಬರುತ್ತಿದೆ. ಆನಂತರ ನಮ್ಮ ಬಿಜಾಪುರ ಜಿಲ್ಲೆಗಿಂತ ಅಲ್ಲಿನ ಮೈಲೇಜು ಹೆಚ್ಚು ಎನ್ನುವುದು ಗೊತ್ತಾಗುತ್ತದೆ. ಹಳೇ ಮೈಸೂರು ಭಾಗಗಳಲ್ಲಿ ನಮ್ಮ ಜಿಲ್ಲೆಗಿಂತಲೂ ರೋಡು ಮೈಲೇಜು ಸ್ವಲ್ಪ ಜಾಸ್ತಿಯಾಗಿದೆ. ಆರ್ ಇಂಡಿಯಾ ಅವರೇಜಿಕ್ಕೆ ಹಳೇ ಮೈಸೂರು ಸ್ವಲ್ಪ ಏರಿದೆ. ಸರಕಾರದವರು ಕಮ್ಯೂನಿಕೇಶನಕ್ಕೆ ಮುಖ್ಯ ಗಮನ ಕೊಡಬೇಕಾದುದು ಅಗತ್ಯ. ದೇಶಕ್ಕೆ ತುರ್ತು ಪರಿಸ್ಥಿತಿ ಒದಗಿದ್ದರೂ ರೋಡುಗಳ ನಲುವಾಗಿ ಕರ್‌ವರ್ಟುಗಳ ನಲುವಾಗಿ ಹಣ ಖರ್ಚು ಮಾಡಕೂಡದು ಎನ್ನುವ ಉದ್ದೇಶವಿದ್ದರೂ ಕಮ್ಯೂನಿಕೇಶನ್‌ದ ಮಹತ್ವವನ್ನರಿತು ರಾಜ್ಯ ಸರಕಾರದವರು ರೋಡುಗಳ, ಸೇತುವೆಗಳ ಹಾಗೂ ಕರ್‌ವರ್ಟುಗಳನ್ನು ಮಾಡುವುದಕ್ಕಾಗಿ ಒಂದೇ ಸಮವಾಗಿ ಖರ್ಚು ಮಾಡುತ್ತ ಬರುತ್ತಿದ್ದಾರೆ. ಇದೊಂದು ಹೆಮ್ಮೆಯ ಮಾತು ಎಂದು ಇಲ್ಲಿ ಹೇಳಬಹುದು. ನಾಲ್ಕನೇ ಯೋಜನೆಯಲ್ಲಿ ಹಿಂದಿನ ಮೂರನೇ ಯೋಜನೆಗಿಂತ ಹೆಚ್ಚು ಹಣವನ್ನು ಈ ಬಾಬಿಗಾಗಿ ಒದಗಿಸುವವರಿದ್ದಾರೆ ಅಂದರೆ ಈಗಿನ ಕ್ಕಿಂತಲೂ ಮೂರು ಅಥವಾ ನಾಲ್ಕು ಪಟ್ಟು ಹೆಚ್ಚಿನ ಹಣವನ್ನು ರೋಡುಗಳಿಗೆ ಖರ್ಚು ಮಾಡುವ ಉದ್ದೇಶವಿದೆ. ಮೂರನೇ ಯೋಜನೆಯಲ್ಲಿ ಸಾಕಷ್ಟು ಹಣ ಒದಗಿಸದೇ ಇರುವುದರಿಂದ ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ರಸ್ತೆಗಳ ನಿರ್ಮಾಣ ಮಾಡುವಾಗ ತಾರತಮ್ಯವಿಲ್ಲ. ಇದರ ಬಗ್ಗೆ ನಮ್ಮ ಪಿ.ಡಬ್ಲ್ಯು ಇರಾಖಾ ಮಂತ್ರಿಗಳು ಯಾವ ಭಾಗದಲ್ಲಿ ರೋಡು ಮೈಲೇಜು ಹೆಚ್ಚಾಗಿದೆಯೋ ಆ ಭಾಗವನ್ನು ಬಿಟ್ಟು ಬೇರೆ ಭಾಗಗಳಲ್ಲಿ ಅಂದರೆ ಹಿಂದುಳಿದ ಭಾಗಗಳಲ್ಲಿ ಹೆಚ್ಚು ರೋಡುಗಳ ಕೆಲಸ ಮಾಡುವ ವ್ಯವಸ್ಥೆ ಮಾಡಬೇಕೆಂದು ನಾನು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರಂತೆ ಬ್ರಿಡ್ಜಗಳ ಹಾಗೂ ಕರ್‌ವರ್ಟು ಕೆಲಸಗಳನ್ನು ಮಾಡಬೇಕೆಂದು ನಲಹೆ ಮಾಡುತ್ತೇನೆ. ಇನ್ನು ನ್ಯಾಷನರ್ ಹೈ ವೇ ರಸ್ತೆಯ ವಿಚಾರ ನಮ್ಮ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಬಹಳ ಕಡಿಮೆ ಇದೆ. ಅಕ್ಕ ಪಕ್ಕದ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ (ರಾಷ್ಟ್ರೀಯ ಹೆದ್ದಾರಿಗಳು ನ್ಯಾಷನರ್ ಹೈ ವೇ ರೋಡುಗಳ) ಬಹಳ ಕಡಿಮೆಯಾಗಿದೆ. ಆದುದರಿಂದ ನಮ್ಮ ರಾಜ್ಯದಲ್ಲೂ ಕೇಂದ್ರ ಸರಕಾರದವರು ನ್ಯಾಷನರ್ ಹೈ ವೇ ರೋಡುಗಳನ್ನು ಹೆಚ್ಚು ಸಂಖ್ಯೆಯಲ್ಲಿ ತೆಗೆದುಕೊಳ್ಳುವಂತೆ ಅವರಲ್ಲಿ ಒತ್ತಾಯ ಮಾಡಬೇಕು. ನ್ಯಾಷನರ್ ಹೈ ವೇ ನಂಬರು 13 ಎನ್ನುವ ರಸ್ತೆಯನ್ನು ಮಂಜೂರು ಮಾಡರಾಗಿದೆ. ಆದರೆ ಅದರ ಕಾರ್ಯ ಅಷ್ಟು ತ್ವರಿತವಾಗಿ ನಡೆಯುತ್ತಿಲ್ಲ. ಸೋರಾಪುರದಿಂದ ಚಿತ್ರದುರ್ಗಕ್ಕೆ ಹೋಗುವ ರೋಡನ್ನು ನ್ಯಾಷನರ್ ಹೈ ವೇ ರೋಡು ನಂಬರು 13 ಎಂದು ಹೇಳುತ್ತಾರೆ. ಬೀಜಾಪುರ ಜಿಲ್ಲೆಯ ಮೇಲಿಂದ ಮೂಲಕ ಹಾಯ್ದು ಹೋಗಬೇಕಾಗಿದೆ. ಆದರೆ ಇದು ಎಲ್ಲಿ ಹಾಯ್ದು ಹೋಗಬೇಕು ಎನ್ನುವುದರ ಬಗ್ಗೆ ಇನ್ನೂ ಯಾವ ನಿರ್ಣಯವೂ ಆಗಿಲ್ಲ. ಈ ನಿರ್ಣಯ ತ್ವರಿತವಾಗಿ ಆಗುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಬೇಕೆಂದು ಮತ್ತು ತೀವ್ರ ಕೆಲಸಟಾಲು ಮಾಡಲೂ ಕೇಳುತ್ತಾರೆ ಎಂದು ಆಸೆ ಮಾಡುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ಒಂದು ಜಿಲ್ಲೆಯಿಂದ ಒಂದು ಜಿಲ್ಲೆಗೆ ಹಾಗೂ ಒಂದು ತಾಲ್ಲೂಕಿನಿಂದ ಒಂದು ತಾಲ್ಲೂಕಿಗೆ ಹೋಗಬೇಕಾದರೆ ಸರಿಯಾದ ಆರ್ ವೇದರ್ ರೋಡು ಯಾವುದೂ ಇಲ್ಲ ಎಂದು ನಾವು ಮುಂಬಯಿ ಸರಕಾರದಲ್ಲಿದ್ದಾಗಲೂ ಹೇಳುತ್ತ ಬಂದಿದ್ದೆವು. ಇಲ್ಲೂ ಅದನ್ನೆ ಹೇಳುತ್ತ ಬರುತ್ತಿದ್ದೇವೆ. ಇದರ ಬಗ್ಗೆ ಈಗಲಾದರೂ ಸರಕಾರ ಲಕ್ಷ ಕೊಡಬೇಕೆಂದು ಹೇಳುತ್ತೇನೆ. ಅಲ್ಲದೆ ಇಲ್ಲಿರುವ ಹಳ್ಳಗಳಿಗೆ ಕರ್‌ವರ್ಟುಗಳನ್ನು ಬೇಗನೆ ಮಾಡಿಸಬೇಕು ಎಂದು ಕೇಳುತ್ತಿದ್ದೇನೆ. ಆದರೆ ಈಚೆಗೆ ಒಂದೆರಡು ಬ್ರಿಡ್ಜಗಳ ಕೆಲಸವನ್ನು

matter relating to the Food. A similar motion was given on a prior occasion; I asked the Government to make a statement and that was made and then the members wanted clarification because a debate was not possible. One hour was given but it was not utilised. General debate on the budget took place and every body has spoken. The food matter has been discussed. I want to know what is the latest position and so I am asking the minister to make a statement. Is that wrong? Or is it that I should be dictated to do this or that? If that is the attitude, I do not krow how a Speaker can function?

Sri G. V. GOWDA.—Sir, it is our earnest desire that the Government requires to be profitted.

Mr. SPEAKER.—What is it that is going to be discussed? Is food situation?

Sri G. V. GOWDA.—That is an important matter. Most of us have participated in the Budget.

Mr. SPEAKER.—I am prepared to change the order of the Demands. I am prepared to have 'Agriculture' tommorrow and let the food matter also be discussed. Will the Government agree?

Sri S. NIJALINGAPPA (Chief Minister).—Sir, the the programme for tomorrow has already been issued.

Mr. SPEAKER.—For tomorrow, programme has been issued. So, on Monday we will discuss 'food'.

Sri S. NIJALINGAPPA.—We have no objection, Sir.

Mr. SPEAKER.—There cannot be a better arrangement than this.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ನಾನು ಒಂದು ಮಾತು ಹೇಳುತ್ತೇನೆ. ಆಹಾರ ಪರಿಸ್ಥಿತಿಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಮತ್ತು ಈ ದಿವಸ ಆಹಾರ ಪರಿಸ್ಥಿಯ ಬಗ್ಗೆ ಆಗಿರತಕ್ಕಂಥ ದೌರ್ಜನ್ಯಕ್ಕಾಗಿ ಉಪವಾಸ ಸತ್ಯಾಗ್ರಹ ನಡೆಯುತ್ತಿದೆ. ಈ ಬಗ್ಗೆ ಶ್ರೀಮಾನ್ ಗೋಪಾಲಗೌಡರು ಒಂದು ನಿಲುವಳಿ ಸೂಚನೆಯನ್ನು ತಂದಿದ್ದಾರೆ.....

Mr. SPEAKER.—If memebers go on unnecssarily confusing, I cannot, possibly, help it. Sri Gopala Gowda said that he was unaware of the incident and that he has not included it in his Resolution. The Hon'ble member is confused in his own mind. How long am I to allow that. He mentioned it as a fact. Am I going to take action on a fact? He has given notice; I said: 'it will be taken up tomorrow'. If members will have not the least proportion of the work that they are doing .....

Sri G. V. GOWDA.—Sir, the Leader of the Opposition himself is fasting!

Mr. SPEAKER.—What am I to do?

Sri C. J. MUCKANNAPPA.—Sir, if the Government agrees, it can be discussed tommorrow along with 'Agriculture'.

Mr. SPEAKER.—For tomorrow, Agenda has already been issued. Earliest I can alter is Monday. I am trying to.....

Sri C. J. MUCKANNAPPA.—We have still two hours time to revise the order paper that has been issued.

Mr. SPEAKER.—Are we not going to move the Demands ? I said, we are going to take it up. What happens if it is discussed on Monday ? I am not going to change it ; let all the blame come on me.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ನನ್ನ ಎಲುವಳಿ ಸೂಚನೆಯನ್ನು ಒಪ್ಪಿಕೊಳ್ಳುವುದಾದರೆ, ಈ ದಿವಸದ ಬೇಡಿಕೆಗಳನ್ನು ಈ ಸಭೆಯ ಮುಂದೆ ಮಂಡಿಸುವುದಕ್ಕೆ ಮೊದಲೇ ಸರ್ಕಾರದವರು ಆಹಾರ ಪರಿಸ್ಥಿತಿಯ ಬಗ್ಗೆ ಒಂದು ಹೇಳಿಕೆಯನ್ನು ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ಈ ವಿಷಯ ಇವೊತ್ತಿನ ಅಜೆಂಡಾದಲ್ಲಿ ಇರುವುದಿಲ್ಲ.....

Mr. SPEAKER.—Don't unnecessarily complicate matters. I am trying to see what best can be done. If you insist immediate disposal of this, all that I can say is, I am unable to admit it. By engaging like this, we have to leave through the whole thing afterwards.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಈಗ ತಾವು ಹೇಳಿದಿರಿ, ಆಹಾರ ಪರಿಸ್ಥಿತಿಯ ಬಗ್ಗೆ ಶ್ರೀ ಜತ್ತಿಯವರು ಒಂದು ಹೇಳಿಕೆಯನ್ನು ಕೊಡುತ್ತಾರೆ, ನಂತರ ಶ್ರೀ ವೀರೇಂದ್ರ ಪಾಟೀಲರು ಪಬ್ಲಿಕ್‌ವರ್ಕ್ಸ್ ಇರಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಈ ಸಭೆಯ ಮುಂದೆ ಇಡುತ್ತಾರೆ ಎಂದು. ಈ ಕಡೆ ವಿರೋಧ ಪಕ್ಷದ ನಾಯಕರು ಮತ್ತೆ ಕೆಲವರು ಉಪವಾಸವನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಮುಖ್ಯ ಮಂತ್ರಿಗಳಾಗಲೀ ಅಥವಾ ಗೃಹಮಂತ್ರಿಗಳಾಗಲೀ ಯಾವ ಸಮಜಾಯಿಷಿಯನ್ನೂ ಹೇಳುತ್ತಿಲ್ಲ. ಆದ್ದರಿಂದ ಈ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ನಾನು ಹೊರಗೆ ಹೋಗುತ್ತೇನೆ.

Mr. SPEAKER.—The member will not move when I am on my legs. There must be a limit to this. We must have a sense of decency ; we must have a sense of proportion. On whome does it reflect ? All this will go into the Proceedings and will be reported in the Press.

ಶ್ರೀ ಕೆ. ಲಕ್ಕಪ್ಪ.—ಈ ಸಭೆಯಲ್ಲಿ ನಾವು ವಾದ ಮಾಡಿದಾಗ್ಯೂ, ಉಗ್ರವಾದ ಪ್ರತಿಭಟನೆಯನ್ನು ಮಾಡಿದಾಗ್ಯೂ ಕೂಡ ಆಹಾರ ಪರಿಸ್ಥಿತಿಯ ವಿಚಾರದಲ್ಲಿ ಸರ್ಕಾರದವರು ಏನೂ ಮಾಡದೆ ಇರುವುದನ್ನು ನಾನು ವಿರೋಧಿಸುತ್ತೇನೆ.

Mr. SPEAKER.—Order, order. Now, if the member speaks, I will ask him to retire from the House.

The Hon'ble member was pleased to observe that I called upon the Minister for food to make a statement and later on, I asked the Minister for Public Works to move the Demands. The member, ignored deliberately or otherwise all that has transpired. I called upon the Minister for Food to make a statement as was agreed to on the Floor of the House. He was interrupted. Objections were raised and one after another some of the members got up. I wanted to respect their feelings. I allowed the Food Minister to make a statement, and ultimately they wanted a Debate on food immeddiately. Even that was taken into account, and it was suggested by one or the other member that it might be taken up expeditiously. I thought whether it could be done even tomorrow. I dealt with it and ultimately thought that Monday is the earliest. it cannot be a dictation by one member or by any party whatsoever. The arrangement is that of the House, and I am here to regulate it. It does not matter to me whether a paaticular Demand is passed or not. I want to make that very clear.

ಶ್ರೀ ಎಸ್. ಗೋಪಾಲಗೌಡ.—ತಾವು ನನ್ನ ಎಲುವಳಿ ಸೂಚನೆಗೆ ಹೆಚ್ಚು ಗಮನ ಕೊಟ್ಟು ಸಾಧ್ಯವಾದ ಮಟ್ಟಿಗೆ ಸರ್ಕಾರದವರು ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಹಾಯ ಮಾಡುವಂತಹ ಪ್ರಯತ್ನ ಮಾಡಿದ್ದೀರಿ, ಆದರೂ ಸರ್ಕಾರದವರು ಇಂದಿನ ಪರಿಸ್ಥಿತಿಯ ಉಗ್ರತೆಯನ್ನು,

ತೀವ್ರತೆಯನ್ನು ಗಮನಿಸಿದಂತೆ ನನಗೆ ಕಾಣುವುದಿಲ್ಲ. ಸ್ವಾಮಿ, ಶ್ರೀ ಕೃಪಲಾನಿಯವರು ಒಂದು ಸಾರಿ :—

"Today when people are dying inch by inch, it is our duty to ring the Bell of Revolt."

ಎಂದು ಹೇಳಿದ್ದಾರೆ. ಸರ್ಕಾರದವರು ವಿರೋಧಪಕ್ಷದವರ ಅಭಿಪ್ರಾಯವನ್ನು ಅಲ್ಲಗಳೆದಿದ್ದಾರೆ. ಆದ್ದರಿಂದ ಈ ಸರ್ಕಾರದ ನೀತಿಯನ್ನು ವಿರೋಧಿಸಿ ಪ್ರತಿಭಟಿಸಿ ನಾವು ಸಭಾ ತ್ಯಾಗ ಮಾಡುತ್ತೇವೆ. ಸರ್ಕಾರದವರು ಪಬ್ಲಿಕ್ ವರ್ಕ್ಸ್ ಇಲಾಖೆಯ ಬೇಡಿಕೆಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುವುದಾದರೆ ನಾವು ಅದನ್ನು ಬಹಿಷ್ಕರಿಸಬೇಕಾಗುತ್ತದೆಂದು ಹೇಳಿ ನಾವು ಈ ಸಭೆಯಿಂದ ಹೊರಗೆ ಹೋಗುತ್ತೇವೆ.

(At this stage the Opposition members staged a walk-out)

Mr. SPEAKER.—The Hon'ble Minister may move the Demands.

BUDGET ESTIMATES FOR 1966-67—DEMANDS FOR GRANTS

DEMAND NO. 6.—OTHER TAXES—ADMINISTRATION.

Sri VEERENDRA PATIL (Minister for Public Works).—Sir, on the recommendation of the Governor of Mysore, I beg to move :

"That a sum not exceeding Rs. 12,26,000 be granted to the Government to defray the charges which will come in course of payment druing the financial year for the period ending 31st day of March 1967 in respect of 'Other Taxes and Duties'."

Along with this Demand. Demand No. 30A, 31, 32, 43, 47, 48 and 50 are deemed to have been moved and are open for discussion.

Mr. SPEAKER.—Demands moved : On the recommendation of the Governor of Mysore,

"That a sum not exceeding Rs. 12,26,000 be granted to the Government to defray the charges which will come in course of payment during the financial year for the period ending 31st day of March 1967 in respect of 'Other Taxes and Duties'."

Along with this Demand, Demand No. 30A, 31, 32, 43, 47, 48 and 50 are deemed to have been moved and are open for discussion.

ಶ್ರೀ ಎಸ್. ಎಂ. ಗುರ್ರೆಡ್ಡಿ (ಮುದ್ದೆಬಿಹಾಳ್).—ಮಾನ್ಯ ಅಧ್ಯಕ್ಷರೆ, ಪಿ.ಡಬ್ಲ್ಯು. ಇಲಾಖೆಯ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಬೇಡಿಕೆಗಳಲ್ಲಿ ಮೊದಲನೆಯದಾದ ಸಾರ್ವಜನಿಕ ಕಾಮಗಾರಿಗಳ ಬಗ್ಗೆ ಹೇಳುವುದಾದರೆ, 3ನೇ ಯೋಜನೆಯಲ್ಲಿ ಸರಕಾರದವರು ಇದಕ್ಕಾಗಿ ಸುಮಾರು ಒಂಬತ್ತು ಕೋಟಿಗಳನ್ನು ಒದಗಿಸಿದ್ದರು ಆದರೆ ಸರಕಾರದವರು ವಹಿಸಿದ ಕೆಲಸಗಳನ್ನು ನೋಡಿದರೆ ಒಂಬತ್ತು ಕೋಟಿಗಿಂತಲೂ ಮೀರಿ ಸುಮಾರು ಹದಿನೆಂಟು ಕೋಟಿಯಷ್ಟು ಹಣ ಈಗಾಗಲೇ ಖರ್ಚಾಗಿದೆ. ಇದು ನಮ್ಮ ರಾಜ್ಯ ಸರಕಾರ ಕೇಂದ್ರ ಸರಕಾರದ ಸಹಾಯದಿಂದ ಇಷ್ಟು ಪ್ರಗತಿಯನ್ನು ಸಾಧಿಸಲಕ್ಕೆ ಸಾಧ್ಯವಾಗಿದೆ; ಎಂದು ಹೆಮ್ಮೆಯಿಂದ ಹೇಳಬೇಕಾಗಿದೆ. ಹಾರಿಗೆ ಸಂಪರ್ಕ (ಕಮ್ಯೂನಿಕೇಷನ್ನು) ಒಂದು ರಾಜ್ಯದ ಪ್ರಗತಿಗೆ ಬಹಳ ಮುಖ್ಯವಾದುದು. ರೋಡುಗಳನ್ನು ಮಾಡುವುದೇ ಅಲ್ಲದೆ ಪೋರ್ಟುಗಳನ್ನು ಕೂಡ ಮಾಡಬೇಕಾಗಿದೆ. ಅದರಂತೆ ನಾನಾ ಕಡೆಗಳಲ್ಲಿ ರಸ್ತೆಗಳನ್ನು ನಿರ್ಮಿಸಿ ಸಾರಿಗೆ ಸಂಪರ್ಕಕ್ಕೆ ಬಹಳ ಮಹತ್ವ ಕೊಟ್ಟಿದ್ದಾರೆ. ನಮ್ಮ ಮೈಸೂರಿನ ಸಾರಿಗೆ ಸಂಪರ್ಕ ಸಮರ್ಪಕವಾಗಿ ಕೆಲಸ